ಕರ್ಮವೀರ

ಸಂಪಾದಕರು
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor
H. R. Purohit, M. A.

ಸಂಪುಟ ೧೯] ಹುಬ್ಬಳ್ಳಿ ಸೋಮವಾರ ತಾರೀಖು ೭—೪—೧೯೪೭ [ಸಂಚಿಕೆ

ವಿಭಜನೆಯಿಂದ ಹಿಂದೂ ಬಂಗಾಲಕ್ಕೆ ಲಾಭ

ಪ್ರಾಂತದ ಉತ್ಪನ್ನದಲ್ಲಿ ದೊಡ್ಡ ಪಾಲು ಅದರದು — ಪಾಕಿಸ್ತಾನ—ವಾದಿಗಳ ಅಖಂಡ ಬಂಗಾಲದ ಕುಹಕದ ಅರ್ಥ

ಪಂಜಾಬದ ವಿಭಜನೆಯ ಔಚಿತ್ಯ ಸಾಧ್ಯಾಸಾಧ್ಯತೆಗಳನ್ನು ಕಳೆದ ವಾರ ಚರ್ಚಿಸಲಾಗಿತ್ತು. ಬಂಗಾಲದ ಮುಸ್ಲಿಮೇತರರ ಬೇಡಿಕೆ ಪೂರ್ವ ಪಂಜಾಬದ್ದಕ್ಕಿಂತಲೂ ಹೆಚ್ಚು ಬಲಿಷ್ಠವಾಗಿದೆಯೆಂದು ಧಾರಾಳವಾಗಿ ಹೇಳಬಹುದು. ಬಂಗಾಲ ಪ್ರಾಂತದ ೬ ಕೋಟಿ ಜನರಲ್ಲಿ ನೂರಕ್ಕೆ ನಲುವತ್ತೈದರಷ್ಟು ಹಿಂದುಗಳಿದ್ದಾರೆ. ಅವರು ಮುಸ್ಲಿಮರಿಗಿಂತ ಎಲ್ಲ ರೀತಿಯಲ್ಲಿಯೂ ಮುಂದುವರಿದಿದ್ದಾರೆ, ಅಂದಬಳಿಕ ಅವರಿಗೆ ಪ್ರಾಂತದ ರಾಜಕೀಯ ಅಧಿಕಾರದಲ್ಲಿ ಯೋಗ್ಯ ಪಾಲು ದೊರೆಯಬೇಕಾದ್ದು ವಿಹಿತ.

ಹಿಂದುಗಳಿಗಾದ ಅನ್ಯಾಯ

ಆದು ಅವರಿಗೆ ಸಿಗುತ್ತ ಇಲ್ಲ. ಕಳೆದ ಅನೇಕ [illegible]ಗಳಿಂದ ಬ್ರಿಟಿಶ ಅಧಿಕಾರಿಗಳೊಡನೆ ಎಷ್ಟೋ ಒಳಸಂಚುಗಳನ್ನು ನಡೆಸಿ ಮುಸ್ಲಿಂ ಲೀಗು ತನ್ನನ್ನು ಅಧಿಕಾರದಲ್ಲಿ ಭದ್ರವಾಗಿ ಸ್ಥಾಪಿಸಿಕೊಂಡಿದೆಯಿಷ್ಟೇ ಅಲ್ಲ. ಬಂಗಾಲದ ಮೂರೂ ಕಾಲು ಕೋಟಿ ಮುಸ್ಲಿಮರಲ್ಲಿ ಅತಿ ತೀಕ್ಷ್ಣವಾದ ಹಿಂದೂ ವಿರೋಧಿ ಜಾತೀಯ ಭಾವವನ್ನು ಉದ್ರೇಕಿಸಿಡಲು ಸಮರ್ಥವಾಗಿದೆ. ಫಜಲುಲ್ ಹಕ್ಕರ ಕಾಲದಿಂದಲೂ ಅಂದರೆ ೧೯೩೭ ರಲ್ಲಿ ಪ್ರಾರಂಭವಾದ ಪ್ರಾಂತಿಕ ಸ್ವಾಯತ್ತತೆಯ ಯುಗದಿಂದಲೂ ಹಿಂದುಗಳನ್ನು ಎಲ್ಲ ನೌಕರಿ ಚಾಕರಿಗಳಿಂದಲೂ ದಿನೇ ದಿನೇ ಉಚ್ಚಾಟನಗೊಳಿಸಲಾಗುತ್ತಿದೆ. ಈಗೀಗಂತೂ ರಾಜಕೀಯ ಅನುಕೂಲತೆಯ ದೃಷ್ಟಿಯಿಂದ ಈ ಧೋರಣೆ ಇಮ್ಮಡಿ ರಭಸದಿಂದ ಮುನ್ನುಗ್ಗುತ್ತಿದ್ದು ಹಿಂದುಗಳ ಇರವು ತೆರವೇ ಗಂಡಾಂತರಕ್ಕೆ ಗುರಿಯಾಗಿದೆ.

ಬಂಗಾಲ ಶಾಸನ ಸಭೆ ಒಳ್ಳೆ ವಿಚಿತ್ರ ಸಂಸ್ಥೆಯೆನಬೇಕು. ದೇಶದ ಬೇರೆ ಎಲ್ಲ ಪ್ರಾಂತಗಳಲ್ಲಿಯೂ ಕೇಂದ್ರದಲ್ಲಿ ಕೂಡ ಬಹುಸಂಖ್ಯಾಕರನ್ನು ಕತ್ತರಿಸಿ ಅಲ್ಪ ಸಂಖ್ಯಾಕರಿಗೆ ಸಂರಕ್ಷಣೆ ಕೊಡಲಾಗಿದೆ. ಆದರೆ ಬಂಗಾಲದಲ್ಲಿ ಮಾತ್ರ ಬಡ ಅಲ್ಪ ಸಂಖ್ಯಾಕ ಹಿಂದುಗಳ ವೆಚ್ಚದಿಂದಲೇ ಇತರ ಚಿಲ್ಲರೆ ಅಲ್ಪ ಸಂಖ್ಯಾಕರಿಗೂ ಯುರೋಪಿಯನರಂಥ ವಿಶಿಷ್ಟ ಹಿತಸಂಬಂಧಗಳಿಗೂ ಶಾಸನ ಸಭೆಯಲ್ಲಿ ಹೆಚ್ಚಿನ "ಭಾರ" ವಿತ್ತರು. ಪರಿಣಾಮವಾಗಿ ನೂರಕ್ಕೆ ನಲುವತ್ತೈದು ಇರುವ ಹಿಂದುಗಳಿಗೆ ನೂರಕ್ಕೆ ೩೩ ಕ್ಕಿಂತ ತುಸು ಹೆಚ್ಚು ಸ್ಥಳಗಳು ದೊರೆತವು. ನೂರಕ್ಕೆ ಐವತ್ತೇಳರಷ್ಟಿರುವ ಪಂಜಾಬ ಮುಸ್ಲಿಮರು ಪಂಜಾಬದ್ದರು. [illegible] ಅವೇ ಮಂತ್ರಿಮಂಡಲ ರಚಿಸಲಾರರಾದರೆ, ಎಲ್ಲಿಯು [illegible]ರಕ್ಕೆ ೫೧ ಇರುವ ಬಂಗಾಲ ಮುಸ್ಲಿಮರು, ಮನುಷ್ಯ ಸೋಸಿಯನ್ನರ ನೆರವಿನಿಂದ ಬಂಗಾಲ ಏನು ರಕ್ಷಣೆ ಕೊಡ [illegible] ಸೈನ್ಯಮಂಡಲ ರಚಿಸಲು ಪೋಲೀಸರ ನಂಬಿಕೆ ಹಿಡಿಯುವವನು [illegible] ಹಾಯತಿಯನ್ನು ಬೆಳೆಸಿಕೊಳ್ಳುವನು. ಅದು [illegible]ರಿಂದ ಈ ನಿರಾಶ್ರಿತರು ನೈಯಕ್ತಿಕ ಧೈರ್ಯ [illegible] ಅಭ್ಯಸಿಸಿ, ಕೇವಲ ಪ್ರಾಣಿಮೂಲದಿಂದ [illegible] ಕಲ್ಪಿತ ಅಪಾಯಗಳಿಂದ ಎದೆಯನ್ನು, ಜನ [illegible] ಗುವದು ಅತ್ಮಗೌರವಕ್ಕೆ ಕ[illegible] ಲಾರ್ಡ ಕರ್ಜನ್ನರು ವಂತಾದರೆ ನನಗೆ ಸಂತೋಷ [illegible] ಘಟಿಸುವಲ್ಲಿ ಬಂಗಾ [illegible]ಯನಾಪೇಕ್ಷಿಗಳಾದ ಹಿಂದುಗಳೆ ಮುಂದಾಳ್ತನ ವಹಿ [illegible] ಗ್ರಾಮಗಳಿಗೆ ಹೋಗುತಿ [illegible] ಬಂಗಾಲಿಗಳಿಗೂ ತಮಗೂ [illegible]ಲು ಬ್ರಿಟಿಶರಿಗೆ ಅವಕಾಶ [illegible] ಅವರು ಅಭೂತಪೂರ್ವ [illegible]. ಆ ಮೇಲೆ ಬಂದ ಕ್ರಾಂತಿ [illegible]ಯೂ ಹಿಂದುಗಳ ಅಂಗವೇ [illegible] ಬ್ರಿಟಿಶರು ಇದನ್ನು ಮರೆತಿರ [illegible] ಅವರು ೧೯೦೫ರ ಘಟನೆಯಲ್ಲಿ ಹಿಂದು [illegible] ಯೋಗ್ಯ ಶಾಸ್ತಿ ಮಾಡಿದರು. ಪರಿಣಾಮ [illegible]ಯಾರು ಬಂಗಾಲದ ವಿಭಜನೆಯನ್ನು [illegible]ರಿಂದ [illegible]ದ ಎದುರಿಸಿದ್ದ [illegible] ಇಂಥ [illegible] ಬರ್[illegible] [illegible] ಎದುರಿಸಿದೆ

ಲೇಖಾಂಕ (೨)


ಬಂಗಾಲ ಹಿಂದುಗಳಿಗೆ ಎಷ್ಟೋ ಲಾಭವೇ ಇತ್ತು. ಇಂದು ಬ್ರಿಟಿಶ ಅಧಿಕಾರಿಗಳ ಅನೇಕ ಕುತಂತ್ರಗಳಿಂದ ಅವರ ಪಾಲಿಗೆ ಬರಬಹುದಾದ ತುಂಡು ಎಷ್ಟೋ ಕಡಿಮೆಯಾಗಿ ಹೋಗಿದೆ.

ಅದೆಲ್ಲ ಹಳೆಯ ಕಥೆಯಾಗಿ ಹೋಗಿದೆ. ಜಿನ್ನಾ ಸಾಹೇಬರೂ ಅವರ ಬಂಗಾಲಿ ಪ್ರತಿಬಿಂಬಗಳೂ ಈ ಪರಿಸ್ಥಿತಿಯ ಪೂರ್ಣ ಪ್ರಯೋಜನ ಪಡೆದು ಬಂಗಾಲದಲ್ಲಿ ಇಸ್ಲಾಮಿ ರಾಜ್ಯವನ್ನು ವಿಸ್ತರಿಸಿ, ಅದನ್ನು ಅಸಾಮದ ಮೇಲೆ ಹಾರುವ ಹುಳುವನ್ನಾಗಿ ಪರಿವರ್ತಿಸಿಕೊಂಡಿದ್ದಾರೆ. ಮುಸ್ಲಿಂ ಧರ್ಮಾಂಧತೆಯನ್ನು ಪರಾಕಾಷ್ಠೆಗೆ ಮುಟ್ಟಿಸಿ ಮುಸ್ಲಿಮರ ಭೂಮಿ "ಬಂಗಾಲ" ಎಂದು ಕೂಗೆಬ್ಬಿಸಲಾಗಿದೆ. ಬಂಗಾಲಿ ಹಿಂದುಗಳು ತಮ್ಮ ಅರ್ಧಶತಕದ ತ್ಯಾಗದಿಂದ ಗಳಿಸಿದ ಮುನ್ನಡೆಯನ್ನು ಬಲಿಗೊಟ್ಟು ಮುಸ್ಲಿಂ ಧರ್ಮದ ರಾಜ್ಯದಲ್ಲಿ "ಪರಕೀಯ" ರಾಗಿ ಬಾಳಬೇಕೆ?

ವಿಭಜನೆಯ ರೂಪರೇಷೆ

ಅವರು ಬಾಳಲೊಪ್ಪರು, ಒಪ್ಪುವ ಅವಶ್ಯಕತೆಯೂ ಇಲ್ಲ. ಧರ್ಮದ ಆಧಾರದಿಂದ ರಾಷ್ಟ್ರತ್ವ ಪ್ರಾಪ್ತವಾಗಿ ಒಂದು ದೇಶದಿಂದ ತುಣುಕುಗಳನ್ನು ಕತ್ತರಿಸಿಕೊಳ್ಳುವ ಹಕ್ಕು ದೊರಕುತ್ತಿದ್ದರೆ ಬಂಗಾಲಿ ಹಿಂದುಗಳಿಗೂ ಬಂಗಾಲದಲ್ಲೊಂದು ತುಣುಕು ಪಡೆಯುವ ಪಾತ್ರತೆ ಇದ್ದೇ ಇದೆ. ಹಿಂದೂ ಬಂಗಾಲ ಮುಸ್ಲಿಂ ಬಂಗಾಲಕ್ಕಿಂತ ಚಿಕ್ಕದೂ ಕಡಿಮೆ ಜನಸಂಖ್ಯೆಯುಳ್ಳದ್ದೂ ಆಗುವದು ನಿಜ. ಆದರೆ ಅದರ ಸ್ಥಿತಿಗತಿಯೇನು ಕೆಡುಕಾಗಿರುವದಿಲ್ಲ.

ಈ ಲೇಖದ ಸಂಗಡ ಇರುವ ನಕಾಶೆಯಲ್ಲಿ ಬಂಗಾಲದ ವಿಭಜನೆಯ ಗಡಿಗಳನ್ನೂ ಪ್ರತಿ ಜಿಲ್ಹೆಯಲ್ಲಿ ಹಿಂದೂ-ಮುಸ್ಲಿಂ ಜನಸಂಖ್ಯೆಯ ಶತಾಂಶಗಳನ್ನೂ ತೋರಿಸಲಾಗಿದೆ. ಪಶ್ಚಿಮ ಮತ್ತು ಉತ್ತರ ಬಂಗಾಲದ ೧೦ ಜಿಲ್ಹೆಗಳಲ್ಲಿ ಹಿಂದುಗಳು ಬಹುಸಂಖ್ಯಾಕರಾಗಿದ್ದಾರೆ. ಇದಲ್ಲದೆ ಪೂರ್ವ ಬಂಗಾಲದ ಚಿಟಿಗಾಂ ಗುಡ್ಡಗಾಡುಗಳಲ್ಲಿಯೂ ಅವರದೇ ಬಹುಮತವಿದೆ. ಈ ಕಾರಣದಿಂದಲೂ ಇಡಿ ಬಂಗಾಲದಲ್ಲಿ ನೂರಕ್ಕೆ ೪೫ ಹಿಂದುಗಳಿರುವದರಿಂದಲೂ ಅವರಿಗೆ ವಂಗಭೂಮಿಯ ೪೫ ರಷ್ಟು ಕ್ಷೇತ್ರ ಸಿಗಬೇಕೆಂದು ಬೇಡಲಾಗಿದೆ. ಮುರ್ಶಿದಾಬಾದ, ನದಿಯಾ, ಜೆಸೂರ ಜಿಲ್ಹೆಗಳು ಮುಸ್ಲಿಂ ಬಹುಸಂಖ್ಯಾಕ ಜಿಲ್ಹೆಗಳಾಗಿದ್ದರೂ ಅವುಗಳನ್ನು ಹಿಂದೂ ಬಂಗಾಲಕ್ಕೆ ಸೇರಿಸಬೇಕು. ಇಲ್ಲದೆ ಹೋದರೆ ಮುಸ್ಲಿಂ ಬಂಗಾಲದಲ್ಲಿ ತೀರ ಹೆಚ್ಚು ಹಿಂದುಗಳುಳಿದು ಹಿಂದೂ ಬಂಗಾಲದಲ್ಲಿ ಕಡಿಮೆ ಮುಸ್ಲಿಮರುಳಿಯುವದರಿಂದ ಪೂರ್ವ ಬಂಗಾಲದ ಹಿಂದುಗಳ ಹಿತರಕ್ಷಣೆ ಕಠಿಣ [illegible] ಹಿಂದೂ ಪಕ್ಷಪಾತಿಗಳು ವಾದಿಸುತ್ತಿ[illegible] ಉಳಿಯಬೇಕಾದ [illegible] ಜಿಲ್ಹೆಗಳಲ್ಲಿ ಮುಸ್ಲಿಂ ಬಹುಸಂಖ್ಯೆಯನ್ನು ಕಾಯ್ದುಕೊಳ್ಳುವಗೋಸ್ಕರ ಅಧಿಕಾರಿಗಳು ಬೇಕೆಂದು ಜಿಲ್ಹಾ ಗಡಿಗಳನ್ನು ಬದಲಿಸಿದ್ದು ಕಂಡು ಬಂದಿದೆ. ದಿನಜಪುರದಲ್ಲಿ ೧೯೦೧ ರಿಂದ ೧೯೩೧ ರ ವರೆಗೆ ಮುಸ್ಲಿಂ ಜನಸಂಖ್ಯೆ ಇಳಿಯುತ್ತಿದ್ದುದನ್ನು ಕಂಡು ನೆರೆ ಜಿಲ್ಹೆಯಿಂದ ಇದಕ್ಕೆ ಸೇರಿಸಿ ಅದನ್ನು ಮುಸ್ಲಿಂ ಬಹುಸಂಖ್ಯಾಕವಾಗಿರಿಸಲಾಯಿತು. ಖುಲನಾದಲ್ಲಿಯೂ ಇದೇ ಪ್ರಯತ್ನವಾದರೂ ಅದು ಇಚ್ಛಿತ ಫ[illegible] ಕೊಡಲಿಲ್ಲ. ಮಾಲದಾ, [illegible] ಮುರಶಿದಾ[illegible] ಜಿಲ್ಹೆಗಳ ಮುಸ್ಲಿಂ ಬಹುಸಂ[illegible]



ಮೇಲೆ ಹೇಳಿದ ಮೂರು ಜಿಲ್ಹೆಗಳನ್ನು ಹಿಂದೂ ಬಂಗಾಲಕ್ಕೆ ಸೇರಿಸಿದರೆ ಅನ್ಯಾಯವಾಗದೆಂದು ವಾದಿಸಲಾಗಿದೆ. ಹೀಗೆ ಮಾಡಿದರೆ ಹಿಂದೂ ಬಂಗಾಲ ೩೪೭೭೯ ಚೌರಸ ಮೈಲಿನ ೨.೪೬ ಕೋಟಿ ಜನಸಂಖ್ಯೆಯುಳ್ಳ ಭಾಗವಾದರೆ ಮುಸ್ಲಿಂ ಬಂಗಾಲ ೪೨,೬೬೩ ಚೌ. [illegible] ವಿಸ್ತಾರವಾದ ೩.೫೭ ಕೋಟಿ ಜ[illegible] ಭೂಭಾಗವಾಗುವದು. ಹಿಂದೂ [illegible] ೭೪ ಲಕ್ಷ ಮುಸ್ಲಿಮರೂ ಮುಸ್ಲಿಂ ಬಂಗಾಲದಲ್ಲಿ ೧೧೧ ಲಕ್ಷ ಹಿಂದುಗಳೂ ಉಳಿಯುವರು.

ಸಾಕಷ್ಟು ದೊಡ್ಡ ಪ್ರಾಂತ

ಒಂದು ವೇಳೆ ಇದನ್ನೊಪ್ಪದೆ ಹೋದರೂ ಶುದ್ಧ ಹಿಂದೂ ಬಹುಸಂಖ್ಯಾಕ ಜಿಲ್ಹೆಗಳೇ ಸೇರಿದರೂ ಸುಮಾರು ೨ ಕೋಟಿ ಜನಸಂಖ್ಯೆಯುಳ್ಳವಾಗುವವು. ಈ ಪ್ರಾಂತ ಚಿಕ್ಕದಾಗುವದಾದರೂ ಸದ್ಯದ ಓಡಿಸಾ ಪ್ರಾಂತಕ್ಕಿಂತ ಆಕಾರದಲ್ಲಿ ಸ್ವಲ್ಪ ದೊಡ್ಡದೆ ಇರುವದಲ್ಲದೆ ಸದ್ಯದ ಗಡಿನಾಡು, ಓಡಿಸಾ, ಸಿಂಧ, ಅಸಾಮ, ಮಧ್ಯಪ್ರಾಂತಗಳಿಗಿಂತ ಜನಸಂಖ್ಯೆಯಲ್ಲಿ ಅಧಿಕವಾಗಿರುವದು. ಇನ್ನು ಡಾರ್ಜಿಲಿಂಗ ಮತ್ತು ಜಲಪಾಯಿಗುರಿ ಜಿಲ್ಹೆಗಳು ದೂರ ಉಳಿಯುವವೆಂಬ ಆಕ್ಷೇಪಕ್ಕೆ ಉತ್ತರವಾಗಿ ಪಶ್ಚಿಮ ಬಂಗಾಲವಂತೂ ಹಿಂದೀ ಒಕ್ಕೂಟದಲ್ಲಿ ಸೇರುವದರಿಂದ ಬಿಹಾರದ ಮೂಲಕ ಅದರೊಡನೆ ಸಂಪರ್ಕವಿಟ್ಟುಕೊಳ್ಳುವದು ಕಠಿನವಲ್ಲೆಂದು ಸಮಾಧಾನ ಹೇಳಲಾಗಿದೆ.

ಆರ್ಥಿಕ ಸಮೃದ್ಧಿ

ಬಂಗಾಲ ವಿಭಜನೆಯ ಆರ್ಥಿಕ ಸಾಧ್ಯತೆಯನ್ನು ಕುರಿತು ಇನ್ನು ವಿಚಾರಿಸೋಣ. ಈ ವಿಷಯದಲ್ಲಿ ಈಗಾಗಲೆ ಪಂಜಾಬ ವಿಭಜನೆಂ[illegible] ಬಗ್ಗೆ ದೊರೆಯುವದಕ್ಕಿಂತ ಹೆಚ್ಚು ಅಂಕಿಸಂಖ್ಯೆಗಳು ದೊರೆಯುತ್ತವೆ. "ಮಾಡರ್ನ [illegible] [illegible] ಅಂಕಗಳನ್ನು ಕೂಲಂ[illegible]

ಕಷವಾಗಿ ವಿವೇಚಿಸಿದ್ದಾರೆ. ನಿಜವಾಗಿ ನೋಡಿದರೆ ಬಂಗಾಲ ವಿಭಜನೆಯಿಂದ ಹಿಂದೂ ಬಂಗಾಲಕ್ಕೆ ಎಲ್ಲ ವಿಧದಿಂದಲೂ ಸುಖವೇ ದೊರೆಯುವದು. ಇಪ್ಪತ್ತು ಕೋಟಿ ಮಣ ಭತ್ತದ ಉತ್ಪನ್ನ ಅದಕ್ಕಿದ್ದು ಅದರ ೧೮೦ ಲಕ್ಷ ಜನ[illegible] ಕೆಗೆ ಹೊರಗಿನ ಸಹಾಯವಿಲ್ಲದೆ ಅದು [illegible]ಹಾರವನ್ನು ಒದಗಿಸಬಲ್ಲದು. ಭೂ ಕಂದಾಯದಿಂದ ಪಶ್ಚಿಮ ಬಂಗಾಲಕ್ಕೆ ೧.೬೯ ಕೋಟಿ ರೂಪಾಯಿ ದೊರಕಿದರೆ ಅದಕ್ಕಿಂತ ದೊಡ್ಡ ಪೂರ್ವ ಬಂಗಾಲಕ್ಕೆ ಬರಿ ೧.[illegible] ಕೋಟಿ ರೂಪಾಯಿ ಸಿಗುವದು. ಇನ್ನು ಭಾರತೀಯ ರೈತ ಉತ್ಪನ್ನ (ಅಂದರೆ ರೋಖ ಮತ್ತು ವಸ್ತು ರೂಪ ಗೇಣಿ ಸೇರಿ) ಪಶ್ಚಿಮ ಬಂಗಾಲಕ್ಕೆ ೫.[illegible] ಕೋಟಿ ಮತ್ತು ಪೂರ್ವ ಬಂಗಾಲಕ್ಕೆ ೫.[illegible] ಕೋಟಿ ಆಗುವದು. ಅಂದರೆ ಪಶ್ಚಿಮ ಬಂಗಾಲದ ತಲಾ ಉತ್ಪನ್ನ ಪೂರ್ವ ಬಂಗಾಲದಕ್ಕಿಂತ ನೂರಕ್ಕಿಪ್ಪತ್ತೈದರಷ್ಟು ಹೆಚ್ಚಾಗುವದು.

ಇನ್ನೂ ಕೆಲ ಅಂಕೆಗಳನ್ನು ಉದಾಹರಿಸಬಹುದು.

✲ ಬಂಗಾಲದ ಎಲ್ಲ ಕಲ್ಲಿದ್ದಲಿ ಗಣಿಗಳು ಪಶ್ಚಿಮ ಭಾಗದಲ್ಲಿವೆ;

✲ ಪ್ರಾಂತದ ಅರಣ್ಯ ಸಂಪತ್ತಿಯಲ್ಲಿ ಮೂರರಲ್ಲೊಂದಂಶವೂ ಅಲ್ಲಿದೆ;

✲ ೩೦ ಅರಳೆ ಗಿರಣಿಗಳಲ್ಲಿ ೨೬ ಅಲ್ಲಿವೆ;


✲ ಹೆಚ್ಚುಕಡಿಮೆ ಎಲ್ಲ ಸಣಬಿನ ಗಿರಣಿಗಳೂ ಅಲ್ಲಿವೆ;

✲ ಹೆಚ್ಚುಕಡಿಮೆ ಎಲ್ಲ ಉಕ್ಕಿನ ಮತ್ತು ಕಬ್ಬಿಣದ ಕಾರಖಾನೆಗಳೂ ರೇಲ್ವೇ [illegible] ಕಾರ್ಯಾಗಾರ[illegible] ಇವೆ;

✲ ಅತ್ಯಂತ ಮಹತ್ವದ ಕಲಕತ್ತಾ ಬಂದರ ಪಶ್ಚಿಮ ಬಂಗಾಲದಲ್ಲೇ ಇದೆ.

✲ ದಾಮೋದರ ಕಣಿವೆಯ ಅಭಿವೃದ್ಧಿ ಯೋಜನೆ [illegible] ಪೂರ್ತಿಯಾಗಿ [illegible] ಬಂಗಾಲಕ್ಕೆ [illegible] ಪ್ರಯೋಜನಕಾರಿಯಾಗುವದು.

—[illegible] ನೇ ಪುಟಕ್ಕೆ



RELIGION OF HUMANITY

by Shri Kumar-Swamiji B. A. Publisher V. R. Koppal, M. A., B. T. Navakalyanmath, Dharwar Crown octave Pp. 273. Price ordinary 2—0—0, Straw board 3—3—0.

ಶ್ರೀ ಕುಮಾರಸ್ವಾಮಿಗಳವರು ವಿವಿಧ ಧರ್ಮಗಳ ಸ್ವರೂಪಗಳನ್ನು ವಿಶೇಷತಃ ಹಿಂದೂ ಧರ್ಮವನ್ನು ಆಳವಾಗಿ ಅಭ್ಯಾಸ ಮಾಡಿದವರು. ಉತ್ತಮ ಬರಹಗಾರರು. ಭಾರತೀಯ ಧರ್ಮಗಳ ವಿಷಯಕ್ಕೆ ಒಳ್ಳೆ ಅಭಿಮಾನವುಳ್ಳವರು. ಈ ರೀತಿ ಅಧಿಕಾರ ಸಂಪನ್ನರಾದ ಸ್ವಾಮಿಗಳು ಬರೆದ ಈ ಪುಸ್ತಕ ಉಪಯುಕ್ತವಾಗಿದೆಂದು ಬೇರೆ ಹೇಳುವ ಅವಶ್ಯಕತೆಯಿಲ್ಲ. ಸಾಂಸ್ಕೃತಿಕ ಆಧ್ಯಾತ್ಮಿಕ, ಮಾನಸಿಕ ಮತ್ತು ಶಾಸ್ತ್ರೀಯ ನೈತಿಕ ದೃಷ್ಟಿಯಿಂದ ಧರ್ಮದ ಸ್ವರೂಪವನ್ನು ಹಾಲ್ಕು ಪ್ರಕರಣಗಳಲ್ಲಿ ವಿವರಿಸಿದ್ದಾರೆ. ಇದರಲ್ಲಿ ಬೇರೆ ಬೇರೆ ಧರ್ಮಗಳ ವಿವೇಚನೆಯನ್ನು ಮಾಡಿರುವರು. ಪಾಶ್ಚಾತ್ಯ ತತ್ವವೇತ್ತರು ಈ ಮಾನವೀಯ ಧರ್ಮವನ್ನು ಯಾವ ದೃಷ್ಟಿಯಿಂದ ನೋಡುತ್ತಿರುವರೆಂಬುದನ್ನೂ ವಿವೇಚಿಸಿದ್ದಾರೆ. ರಾಷ್ಟ್ರಗಳಿಗೆ ಮತ್ತು ರಾಜರುಗಳಿಗೆ ಏರಿಳಿತಗಳು ಇರುವಂತೆ ಮಾನವ ಧರ್ಮಕ್ಕೂ ಏರಿಳಿತಗಳಿರು ವವು. ಆಯಾ ಕಾಲಮಾನ ಪರಿಸ್ಥಿತಿಗನುಸಾರವಾಗಿ ಧರ್ಮದಲ್ಲಿ ಕ್ರಾಂತಿ ಉತ್ಕ್ರಾಂತಿಗಳು ನಡೆಯುತಿವೆ. ಮಾನವೀಯ ಧರ್ಮವನ್ನು ನಲಕ್ಷಿಸಿ ಮನುಷ್ಯ ಅಥವಾ ರಾಷ್ಟ್ರಗಳು ನಡೆಯುತ್ತಿದ್ದರೆ ಜಗತ್ತಿನಲ್ಲಿ ತಿಕ್ಕಾಟವೆದ್ದು ಯುದ್ಧ ಸಂಭವಿಸು ವುದುಂಟು. ಈ ಯುದ್ಧಗಳನ್ನು ತಡೆಯಬೇಕಾದರೆ ರಾಷ್ಟ್ರಗಳು ಅವುಗಳ ಮೂಲ ಕಾರಣಗಳನ್ನು ಹುಡುಕಿ ಅವುಗಳನ್ನು ನಿರ್ಮೂಲಗೊಳಿಸಲು ಪ್ರಯತ್ನಿಸಬೇಕು. ಅಂದರೇನೇ ಜಗತ್ತು ಶಾಂತಿ ಸುಖ ಸಮಾಧಾನಗಳಲ್ಲಿ ನಲಿದಾಡುವದು. ಇದೆಲ್ಲ ವಿಷಯವನ್ನು ಲೇಖಕರು ಸುಂದರವಾಗಿ ವಿವರಿಸಿದ್ದಾರೆ. ಇಂಗ್ಲಿಶ್ ಬಲ್ಲವರು ಈ ಪುಸ್ತಕವನ್ನೋದಿ ಧರ್ಮದ ತಿರುಳನ್ನು ತಿಳಿದುಕೊಳ್ಳತಕ್ಕದ್ದು. ಅದರ ಮಾನವ ಧರ್ಮದ ಸ್ವರೂಪವನ್ನು ತಿಳಿದುಕೊಂಡರೆ ಮಾತ್ರ ನಡೆಯುದು. ಅದನ್ನೆಲ್ಲ ಆಚರಣೆಯಲ್ಲಿ ತರುವುದೆ ಮುಖ್ಯವಾದುದು. ಅಂದರೇನೇ ಮಾನವನ, ರಾಷ್ಟ್ರದ ಉನ್ನತಿಯಾಗುವುದು. ಸದ್ಯದ ಪ್ರಬಲ ರಾಷ್ಟ್ರಗಳು ಈ ಮಾನವ ಧರ್ಮವನ್ನು ಇಂದು ಮರೆತುಬಿಟ್ಟದ್ದರಿಂದಲೆ ಜಗತ್ತಿನಲ್ಲಿ ಇಷ್ಟೊಂದು ಅನರ್ಥ ನಡೆದಿರುವದು. ಇಂಥ ಪ್ರಸಂಗದಲ್ಲಿ ಈ ಬಗೆಯ ಪುಸ್ತಕವನ್ನು ಪ್ರಸಿದ್ಧಿಸಿದ್ದು ಅಭಿನಂದನೀಯವಾಗಿದೆ. ಎಲ್ಲರೂ ಲೇಖಕರನ್ನು ಪ್ರೋತ್ಸಾಹಿಸಬೇಕು.

ESSENCE OF RAMAYAN

by Swami Sivananda Published by Swami V. I Shiddanand Sivananda Publication League Anand Kutir Rikhikesh U. P.

ಕ್ರೌನ ಅಷ್ಟಪತ್ರದ ೨೪೮ ಪುಟಗಳು ಬೆಲೆ ೩ ರೂಪಾಯಿ.

ರಾಮಾಯಣವು ಪುರಾಣ ಕಾವ್ಯಗಳಲ್ಲಿ ಮೊದಲನೆಯದು, ಹಿಂದುಗಳಿಗೆ ಅತ್ಯಂತ ಪವಿತ್ರವಾದ ಕಾವ್ಯ. ನಿತ್ಯವೂ ಹಿಂದುಗಳು ಭಕ್ತಿಯಿಂದ ಪಠಿಸತಕ್ಕ ಗ್ರಂಥ. ಇಂಥ ಮಹಾಗ್ರಂಥದ ಸಾರವನ್ನು ಶ್ರೀ ಶಿವಾನಂದರವರು ಇಂಗ್ಲ ಭಾಷೆಯಲ್ಲಿ ತಿಳಿಸಿ ಮಹದುಪಕಾರವನ್ನು ಮಾಡಿದ್ದಾರೆ. ಈ ಪ್ರಾಚೀನ ಕಾವ್ಯ ಜಗತ್ತಿನ ಅನೇಕ ಭಾಷೆಗಳಲ್ಲಿ ಪ್ರಕಟವಾಗಿದ್ದರೂ ಹೊಸ ಹೊಸದಾಗಿ ಇಂತು ಅದರ ಸಾರ ತಿಳಿಸುವ ಗ್ರಂಥಗಳು ಪ್ರಕಟವಾಗುವುದು ಅಭಿಮಾನದ ಮತ್ತು ಸಂತೋಷದ ಸಂಗತಿ. ಅದರಲ್ಲಿಯೂ ಸರ್ವಸಂಗ ಪರಿತ್ಯಾಗ ಮಾಡಿ ಸಂನ್ಯಾಸ ದೀಕ್ಷೆಯನ್ನು ತೆಗೆದುಕೊಂಡು ಅಧ್ಯಾತ್ಮ ಜೀವನವನ್ನು ಸಾಗಿಸುತ್ತಿರುವ ಸ್ವಾಮಿ ಶಿವಾನಂದರು ಈ ಕಾರ್ಯ ಕೈಕೊಂಡಿದ್ದು ಮಹತ್ವದ್ದಾಗಿದೆ. ಇದರಲ್ಲಿ ಮೊದಲು ಪ್ರಸ್ತಾವನೆ ಎಲ್ಲ ಕಾಂಡಗಳ ಸಾರವನ್ನೂ ರಾಮನು ಜಗತ್ತಿಗೆ ಕಲಿಸಿದ ನೀತಿ ಪಾಠಗಳನ್ನೂ ವಿವರಿಸಿದ್ದಾರೆ. ... ಪರಿಶಿಷ್ಟದಲ್ಲಿ ... ಸಂದೇಶ ಶ್ರೀರಾಮ ರಾಮಾಯಣ ... ವನ್ನು ವಿವರಿಸಿದ್ದಾರೆ. ಪುಸ್ತಕವು ...

ಉಪಯುಕ್ತವಾಗಿದೆ. ಇಂಗ್ಲ ಭಾಷೆಯನ್ನು ಬಲ್ಲವರೆಲ್ಲ ಇದನ್ನೋದಿ ರಾಮಾಯಣದ ತಿರುಳನ್ನು ತಿಳಿದುಕೊಂಡು ಆ ಪರಮಾತ್ಮನಲ್ಲಿ ಅತ್ಯಂತಿಕ ಭಕ್ತಿಯನ್ನು ತಾಳಿ ಅವನು ಹಾಕಿಕೊಟ್ಟ ಪಥದಲ್ಲಿ ನಡೆದು ಪುನೀತರಾಗಬೇಕು.

श्री ज्ञानेश्वरी कथामृत (४था खंड)

ಸಂಪಾದಕರು ಶ. ದಿ. ಕರಂದೀಕರ ೨೪೦ ಪುಟಗಳು ಬೆಲೆ ೧ ರೂಪಾಯಿ.

ಈ ಖಂಡದಲ್ಲಿ ೭-೮-೯ ಈ ಮೂರು ಅಧ್ಯಾಯಗಳು ಇರುವವು. ಉಳಿದ ಅಧ್ಯಾಯಗಳನ್ನು ಮುಂದಿನ ಖಂಡಗಳಲ್ಲಿ ತೆಗೆದುಕೊಂಡು ಒಟ್ಟು ೯ ಖಂಡಗಳಲ್ಲಿ ಸಮಗ್ರ ಶ್ರೀಜ್ಞಾನೇಶ್ವರಿ ಕಥಾಮೃತವನ್ನು ಮುಗಿಸಬೇಕೆಂದು ಲೇಖಕರು ಯೋಜಿಸಿದ್ದಾರೆ. ಜ್ಞಾನೇಶ್ವರಿಯ ಮೂಲ ೦ ರಿಂದ ೯ ಅಧ್ಯಾಯಗಳನ್ನು ಕೊಟ್ಟಿದ್ದಾರೆ. ಅಲ್ಲದೆ ಶ್ರೀ ಭಗವದ್ಗೀತೆಯ ೭-೮-೯ ಅಧ್ಯಾಯಗಳ ಮೂಲವನ್ನೂ ಕೊಟ್ಟಿದ್ದಾರೆ. ಶ್ರೀ ಭಗವದ್ಗೀತೆಗೆ ವ್ಯಾಖ್ಯಾನ ರೂಪವಾಗಿದ್ದ ಶ್ರೀ ಜ್ಞಾನೇಶ್ವರಿಯೆಂದರೆ ಮರಾಠಿಯಲ್ಲಿ ಹೊಸ ಹಳೆ ಎಲ್ಲ ಬಗೆಯ ನೀತಿ ಶಾಸ್ತ್ರಗಳ ಮತ್ತು ಸಿದ್ಧಾಂತಗಳ ಮಾತೆಯಿದ್ದಂತೆ ಎಂದು ಅಭಿಪ್ರಾಯ ವ್ಯಕ್ತ ಮಾಡಲಾಗುತ್ತದೆ. ಮರಾಠಿಯ ನಿಜ ಮಹಾಭಾರತವೆಂದರೆ ಜ್ಞಾನೇಶ್ವರಿಯೆಂದೇ ಎಂದು ಹೇಳಲಾಗುತ್ತದೆ. ಅಂತೆಯೆ ಜ್ಞಾನೇಶ್ವರಿಯ ಬಗೆಗೆ ಮರಾಠಿಗರಿಗೆ ಅಷ್ಟೇ ಏಕೆ ಜ್ಞಾನೇಶ್ವರಿ ಪಂಥದ ಕನ್ನಡಿಗರಿಗೆ ಕೂಡ ಒಳ್ಳೆ ಆದರದ ಮತ್ತು ಅಭಿಮಾನದ ಗ್ರಂಥ. ನಿತ್ಯವೂ ಪಾರಾಯಣ ಮಾಡಲುಪಯುಕ್ತವಾದ ಗ್ರಂಥ. ಇಂಥ ಜ್ಞಾನೇಶ್ವರಿಯ ಕಥಾಮೃತವನ್ನು ಶ್ರೀ ಕರಂದೀಕರರು ಬರೆದು ಪ್ರಸಿದ್ಧಿಸಲಣಿಯಾದುದು ಅಭಿನಂದನೀಯವಾಗಿದೆ. ಸ್ಫೂರ್ತಿಪ್ರದ ಭಾಷೆಯಲ್ಲಿ ಜ್ಞಾನೇಶ್ವರಿಯ ವಿವರಣೆಗಳನ್ನು ಲೇಖಕರು ಈ ನವಖಂಡಗಳಲ್ಲಿ ಪ್ರಸಿದ್ಧಿಸುತ್ತಿರುವದು ಸಂತೋಷದ ಸಂಗತಿ. ಉತ್ತಮವಾದ ಕಾಗದ ಸುಂದರ ಮುದ್ರಣ ಮೇಲ್ಹೊದಿಕೆಗಳಿಂದ ಪುಸ್ತಕವು ಆಕರ್ಷಕವಾಗಿದೆ. ಮರಾಠಿ ಬಲ್ಲವರೆಲ್ಲ ಈ ಕಥಾಮೃತಕ್ಕೆ ತಕ್ಕ ಪ್ರೋತ್ಸಾಹನೆ ಕೊಟ್ಟು ಜ್ಞಾನೇಶ್ವರಿಯ ಸವಿಯನ್ನು ಸವಿದು ಶ್ರೇಯೋಭಾಗಿಗಳಾಗಬೇಕಾಗಿ ಸೂಚಿಸಬಯಸುತ್ತೇವೆ.

ग्रामोद्धार

कृषिशास्त्र ग्रंथमाला – पुष्प ६. ले. का. न. गटवर्धन फौज ८ पृष्ट १७२ मूल्य ३ रुपये.

ಹಳ್ಳಿಗಳ ನಾಡಾದ ಹಿಂದುಸ್ಥಾನದಲ್ಲಿ ಹಳ್ಳಿಗಳ ಉದ್ಧಾರವಾಗಬೇಕಾದುದು ಅತ್ಯವಶ್ಯವೆಂದು ಬೇರೆ ಹೇಳಬೇಕಿಲ್ಲ. ಪರಕೀಯ ಆಡಳಿತದಲ್ಲಿ ನಮ್ಮ ಹಳ್ಳಿಗಳೆಲ್ಲ ಹಾಳಾಗಿ ಹೋದ್ದರಿಂದ ಭಾರತವಿಂದು ಆರ್ಥಿಕ ಅವನತಿಯನ್ನು ಹೊಂದಿದೆ. ಈ ಬಗೆಯ-ದುಃಸ್ಥಿತಿ ದೂರಾಗಿ ಹಿಂದಿನಂತೆ ಹಿಂದುಸ್ಥಾನ ಸಂಪತ್ಸಮೃದ್ಧವಾಗಬೇಕಾದ ಗ್ರಾಮೋದ್ಧಾರ ಕಾರ್ಯಕ್ಕೆ ಹೆಚ್ಚು ಗಮನ ಕೊಡುವದವಶ್ಯವಾಗಿದೆ. ಪ್ರಾಂತಿಕ ಸರಕಾರಗಳ ಆಡಳಿತವೂ ಈಗ ಜನರ ಕೈಸೇರಿದ್ದರಿಂದ ಈ ಕಾರ್ಯ ಯಶಸ್ವಿಯಾಗುವದೆಂದು ನಿರೀಕ್ಷಿಸಲಾಗಿದೆ. ಇಂಥ ಈ ಸಮಯದಲ್ಲಿ ಶ್ರೀ ಪಟವರ್ಧನರು ಗ್ರಾಮೋದ್ಧಾರ ಮೂಲ ಸಮಸ್ಯೆಗಳನ್ನು ಅವುಗಳಿಗೆ ಬರುವ ಅಡಚಣಿಗಳನ್ನು ಅವನ್ನು ನಿವಾರಿಸುವ ಉಪಾಯಗಳನ್ನು ಈ ಪುಸ್ತಕದಲ್ಲಿ ಚರ್ಚಿಸಿ ಉಪಕಾರ ಮಾಡಿದ್ದಾರೆ. ಮರಾಠಿ ಬಲ್ಲವರೆಲ್ಲ ಈ ಪುಸ್ತಕದ ಲಾಭ ಪಡೆದು ಗ್ರಾಮೋದ್ಧಾರ ಕಾರ್ಯವನ್ನು ಯಶಸ್ವಿಯಾಗಿ ಮಾಡಬೇಕೆಂದು ಬಿನ್ನವಿಸುತ್ತೇವೆ.

ಚಂದಾದಾರರಲ್ಲಿ ವಿನಂತಿ

ಯಾವದೇ ಪತ್ರವ್ಯವಹಾರ ಮಾಡುವಾಗ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ... ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ ಬೇಡಾದವರು ... ದಿನ ಮೊದಲೇ ... ತಿಳಿಸಬೇಕು. ವಿ. ಪಿ. ತಿರಸ್ಕರಿಸಿ ... ಮುಂಗಡ M. O. ... ಪಿ. ಖರ್ಚು ... ಸ್ವ... ಸಕ.

ಅವಿನಯದ ಪರಮಾವಧಿ

ಪಾಕಿಸ್ತಾನ ವಾದಿಗಳಿಗೊಂದು ಹಿತೋಕ್ತಿ

(ಪಂಡಿತ ಮುಳಿಯ ತಿಮ್ಮಪ್ಪಯ್ಯನವರಿಂದ)

—: ಲೇಖಾಂಕ ೩ :—

೧

ವಿನಯ ಅವಿನಯ ಅಲ್ಲದೆ ವಿನೀತತೆ ಅವಿನೀತತೆಗಳೆಂದರೆ ಸಾಮಾನ್ಯವಾಗಿ ಬಳಕೆಗೊಂಡ ಪದಗಳೇ ಆದರೂ ರೂಢಿಯಲ್ಲಿ ಅವುಗಳ ಅರ್ಥಗಳು ಸರಿಯಾಗಿ ಬೇರೂರಿಲ್ಲ. ಅದರಿಂದ ಹಿಂದಿನ ಎರಡೂ ಲೇಖಗಳಲ್ಲಿ ಅವುಗಳನ್ನು ಶಾಸ್ತ್ರೀಯವಾಗಿ ಚಿತ್ರಿಸಲು ಹವಣಿಸಬೇಕಾಯಿತು. ಅತಿ ಪುರಾತನ ಕಾಲದ ನಮ್ಮಲ್ಲಿಯ ರಾಜಪುತ್ರರು ಸುಸಂಸ್ಕೃತರಾದ ಗುರುಗಳಿಂದ ಅಥವಾ ವೃದ್ಧರಿಂದ ವಿನಯ ಸಂಸ್ಕೃತಿಯನ್ನು ಹೀರಿಕೊಳ್ಳುತ್ತಿದ್ದರು. ಪೌರಾಣಿಕ ಚರಿತೆಯೊಳಗೆ ಧಾರ್ಮಿಕ ಶಿರೋಮಣಿಯೆಂದು ಪ್ರಸಿದ್ಧನಾದ ಜನಕರಾಜನಿಗೆ ಯಾಜ್ಞವಲ್ಕ್ಯನು, ಶ್ರೀರಾಮನಿಗೆ ವಿಶ್ವಾಮಿತ್ರನು, ಧರ್ಮರಾಜನಿಗೆ ಶ್ರೀಕೃಷ್ಣನು ಬುದ್ಧಿವೃದ್ಧರಾಗಿದ್ದರು. ಆ ಬುದ್ಧಿವೃದ್ಧರ ನಿರತ ಪ್ರಯತ್ನದಿಂದಲೇ ಅನುಗತರಾಗಿದ್ದ ಆಯಾ ರಾಜರ ಕೀರ್ತಿ ಇಂದಿಗೂ ಬಾಡದೆ ಬಸವಳಿಯದೆ, ಅರಳಿ ಪರಿಮಳಿಸುತ್ತಲೇ ಇದೆ. ಪೌರಾಣಿಕ ಕಾಲದ ಆ ರಾಜರ ಮಾತು ಆಧುನಿಕರಾದ ಕೆಲವರಿಗೆ ಸವಿಯಾಗದಿದ್ದರೆ ಚಾರಿತ್ರಿಕ ಕಾಲದ ವಿಷಯವನ್ನು ನಿವೇದಿಸಬಹುದು. ಚಾಣಕ್ಯ, ವಿದ್ಯಾರಣ್ಯ, ರಾಮದಾಸಸ್ವಾಮಿಯವರೆಂಬ ಬುದ್ಧಿವೃದ್ಧರಿಲ್ಲದಿರುತ್ತಿದ್ದರೆ, ಕ್ರಮವಾಗಿ ಚಂದ್ರಗುಪ್ತ, ಹುಕ್ಕಬುಕ್ಕರು, ಶಿವಾಜಿ ಮಹಾರಾಜರ ಆಳಿಕೆಗೆ ಅಷ್ಟೊಂದು ಕಳೆ ಬರುತ್ತಿದ್ದಿತೆ? ಖಂಡಿತವಾಗಿಯೂ ಇಲ್ಲ. ಪ್ರಜಾವರ್ಗಕ್ಕೆ ಹಿತವಾಗುವ ಧಾರ್ಮಿಕಸಾರವನ್ನು ಆಯಾ ರಾಜರೆಂಬವರ ಶೀಲದಲ್ಲಿ ಹುರಿದುಂಬಿಸಿ ಅವರಿಂದ ಲೋಕವನ್ನಾಳಿಸಿದ ಮಹಾತ್ಮರೆಂದರೆ ಆ ಬುದ್ಧಿವೃದ್ಧರೇ ಸರಿ. ಆದರೆ ಆ ಚಾಣಕ್ಯಾದಿಗಳನ್ನನುಸರಿಸಿ ಕಾರ್ಯಕಾರಿಗಳಾಗಲು ಚಂದ್ರಗುಪ್ತಾದಿ ವಿನೀತ ರಾಜಪುತ್ರರ ಅವಶ್ಯಕತೆಯೂ ಗುರುಗಳಷ್ಟೇ ಇತ್ತು ಎಂಬುದನ್ನು ಮರೆಯಬಾರದು. ಕಿವುಡನೆದೆಯಲ್ಲಿ ಗಾನರಸದಿಂದೇನು ಪರಿಣತಿ ಸಾಧಿಸೀತು?

ಇಂಥ ವಿನೀತ ರಾಜರೇ ನಮ್ಮ ಭರತಭೂಮಿಯಲ್ಲಿದ್ದುದು, ಅವಿನೀತರು ಇರಲೇ ಇಲ್ಲ ಎಂಬುದು ನನ್ನ ಹೇಳಿಕೆಯಲ್ಲ. ಹಗಲಿನಂತೆ ಇರುಳೂ ನಿರಂತರವಾಗಿರುವದು ಪ್ರಕೃತಿ. ರಾಮನಿಗೆ ರಾವಣನಂತೆ, ಚಂದ್ರಗುಪ್ತನಿಗೆ ನಂದರಾಜನಂತೆ ಹಗೆಗಳಾಗಿ ಅವಿನೀತ ರಾಜರು ಇದ್ದರು. ಅವಿನೀತರೊಳಗೂ ಚೆನ್ನಾಗಿ ವಿದ್ಯಾಭ್ಯಾಸ ಮಾಡಿದವರಿದ್ದರು. ಆದರೇನು? ಹಿಂದೆ ಸೂಚಿಸಿದ ವಿನಯವೆಂಬುದು ಕಲಿತು ಬರುವುದಲ್ಲ ಕಲೆತು ಬರುವದು.

೨

ನಮ್ಮಲ್ಲಿಯ ನರೇಂದ್ರ ಮಂಡಲವು ರಾಜ್ಯಸೂತ್ರ ಘಟನಾ ಸಮಿತಿಯನ್ನು ಸೇರಲು ಅನುಕೂಲವಾದುದು ಆನಂದಕರವೇನೋ ಹೌದು. ಆದರೆ ಅದರಲ್ಲಿ ಅನಿರೀಕ್ಷಿತತ್ವವೇನೂ ಇಲ್ಲ. ನರೇಂದ್ರ ಮಂಡಲವು ವಿನೀತಮಾರ್ಗವನ್ನೊಂದಿದೆ, ಅವರೊಳಗೆ ಆಧುನಿಕ ಬುದ್ಧಿವೃದ್ಧ ಸುಸಂಸ್ಕೃತರಿದ್ದಾರೆ, ಎಂಬುದಷ್ಟೇ ಅದರಿಂದ ಗೊತ್ತಾಗುತ್ತಿದೆ. ನರೇಂದ್ರ ಮಂಡಲವು ಘಟನಾ ಸಮಿತಿಯನ್ನು ಸಂಧಿಸುವುದರಿಂದ ನಮ್ಮ ಭಾರತ ಭೂಮಿಯ ರಾಜಕೀಯ ಭಾವನೆಯ ಭಿನ್ನ ಭಿನ್ನ ವರ್ಗಗಳೊಳಗೆ ಹಲವೆಲ್ಲ ಏಕಾಗ್ರವಾಗಿ ಹೆಣಗುವಂತಾಯಿತು. ಏನಾದರೂ ಸರಿಯೆ, ತಮ್ಮ ಸಿದ್ಧಾಂತದ ಪಾಕಿಸ್ಥಾನಕ್ಕೆ ಅನುಮತಿ ಕೊಡದಿದ್ದಲ್ಲಿ ಎಲ್ಲದಕ್ಕೂ 'ನ' ಕಾರವನ್ನೇ ಸಾರುತ್ತಿರುವರೆಂದರೆ ಶ್ರೀ ಜಿನ್ನಾಸಾಹೇಬರ ನಾಯಕತ್ವದ ಮುಸ್ಲಿಂಲೀಗು ಮಾತ್ರವೆ. ಲೀಗೆಂದರೆ ಮಾನ್ಯವಾದ ಸಂಸ್ಥೆ ಎಂಬಲ್ಲಿ ಸಂಶಯವಿಲ್ಲ. ಆದರೆ ಭಾರತಭೂಮಿಯ ಸರ್ವ ಸಂಸ್ಥೆಗಳು ಒಟ್ಟಾಗಿ ಆಮಂತ್ರಿಸುವಲ್ಲಿ ಸಂಧಾನಕ್ಕೊಪ್ಪದಿರುವುದೆಂದರೆ ಅವಿನೀತ ವೃತ್ತಿ ಎನ್ನದೆ ಗತ್ಯಂತರವಿಲ್ಲ. ಅದು ಯಾಕೆ ಎಂಬುದನ್ನು ಕೆಲವೆ ಮಾತುಗಳಿಂದ ಪರಾಂಬರಿಸುವ.

ಭಾರತ ಭೂಮಿಯಲ್ಲಿ ಪ್ರಕೃತ ಕಾಲದಲ್ಲಿ ೪೦ ಕೋಟಿ ಜನರಿರುತ್ತಾರೆ. ಅದರೊಳಗೆ ೧೦ ಕೋಟಿ ಮುಸ್ಲಿಂ ಬಂಧುಗಳೆಂದೂ ಅದರಿಂದ ಇಲ್ಲಿ ಕಾಲಂಶ ತಮ್ಮ ಮತೀಯರಾಗುತ್ತಾರೆಂದೂ ಶ್ರೀ ಜಿನ್ನಾಸಾಹೇಬರ ಹೇಳಿಕೆ. ಜನಗಣನೆಯನ್ನು ನೋಡಿದರೆ ಅಷ್ಟಾಗುವದಿಲ್ಲ. ೯ ಕೋಟಿಯ ಮೇಲೆ ಮುನ್ನೂರು ... ಲಕ್ಷಗಳಾಗಬಹುದು. ಅಷ್ಟ ಜೆಯನ್ನು ...

ಳಿಯುವಂತಿಲ್ಲ. ಹೋಗಲಿ, ಭಿನ್ನ ಭಿನ್ನ ಧರ್ಮೀಯರಿಗೆ ಒಂದೊಂದು ಸ್ಥಾನಗಳನ್ನೊದಗಿಸುತ್ತ ಹೋದರೆ ಇಲ್ಲಿ ಅಧಿಕ ಸಂಖ್ಯಾತರಾದ ಹಿಂದುಗಳಿಗೆ ಸ್ಥಾನವಾವುದು? ಮುಸಲ್ಮಾನ, ಕ್ರೈಸ್ತ, ಪಾರ್ಸಿ, ಬೌದ್ಧ, ಸೀಖ, ಜೈನ, ಮೊದಲಾದ ಹಲವು ಮತಗಳಿಗೆ ಆಮಂತ್ರಣವಿತ್ತು ಎಡೆಗೊಟ್ಟ ಹಿಂದೂ ದೇಶಕ್ಕೆ ತನ್ನ ಹಿಂದೂ ಮತಕ್ಕೆ ಆಸ್ಪದವೆ ಇಲ್ಲದಾಗಬಹುದು. ಉಳಿದ ಮತಗಳಾವವೂ ಈ ಮುಸ್ಲಿಂ ಲೀಗಿನಂತೆ ಮತಾನುಸಾರವಾಗಿ ಸ್ಥಾನಯಾಚನೆ ಮಾಡಿಲ್ಲ. ಮಾತ್ರವಲ್ಲ. ರಾಷ್ಟ್ರೀಯ ತತ್ವದ ಮುಸಲ್ಮಾನ ವರ್ಗದವರೂ ಆ ಬೇರೆ ಹಬ್ಬದ ಎಣಿಕೆಗೇ ಮರುಳಾಗುವಂತಿಲ್ಲ ಎನ್ನುವ. ಅದಂತಿರಲಿ. ಆ ಭಿನ್ನ ಭಿನ್ನ ಮತಗಳೆಂಬುವೆಲ್ಲ ಮತಭೇದಗಳಿಂದ ಉಂಟಾದುವುಗಳು ವಿಶ್ವಧರ್ಮ ಅಥವಾ ಮಾನವೀಯಧರ್ಮ (Humanitarian faith) ದ ಅಂಗಗಳು ಎಂಬ ಉದಾತ್ತ ಭಾವನೆಯನ್ನು ಮನಃಪೂರ್ತವಾಗಿ ಸ್ವೀಕರಿಸಿದ್ದಲ್ಲಿ ಇಂಥ ಕ್ಲೇಶಗಳಿಗೆ ಎಡೆಯಾಗುವುದೆ? ಅಂಥ ಉದಾರತೆಯನ್ನೊಳಗೊಂಡ ಜನವರ್ಗವೂ ರಾಜಾಧಿರಾಜರೂ ಇಲ್ಲಿ ಪುರಾತನ ಕಾಲದಿಂದಲೂ ನೆಲಸಿದ್ದ ಕಾರಣದಿಂದಲೆ ಭಿನ್ನ-ಭಿನ್ನ ಮತೀಯರು ಇಲ್ಲಿ ಪ್ರವೇಶಿಸಲು ಆಸ್ಪದವಾಯಿತು. ರಾಷ್ಟ್ರಕೂಟ ಚಕ್ರವರ್ತಿಯಾಗಿದ್ದ ನೃಪತುಂಗನ ತಂದೆಯಾದ ಕೀರ್ತಿನಾರಾಯಣ ಗೋವಿಂದರಾಜನ ಕಾಲದಲ್ಲಿ ಎಂದರೆ ಎಂಟು ಒಂಭತ್ತನೆ ಶತಮಾನಗಳ ಮಧ್ಯದಲ್ಲಿ ಹೊರಗಿನ ಮುಸ್ಲಿಂ ಮತವು, ಪ್ರಥಮತಃ ಸಿಂಧು ದೇಶದಲ್ಲಿ ತಲೆದೋರಿತು. ಅದಕ್ಕೆ ಆ ಕಾಲದಲ್ಲಿ ಭಾರತ ಚಕ್ರವರ್ತಿಯಾಗಿದ್ದ ಕನ್ನಡಿಗ ಗೋವಿಂದರಾಜನ ಉದಾತ್ತತೆಯೆ ಕಾರಣ ಎಂಬುದು ಚಾರಿತ್ರಿಕ ಪ್ರಸಿದ್ಧ ಸಂಗತಿ. ಪರಧರ್ಮ ವಿಚಾರದಲ್ಲಿ ಇಲ್ಲಿಯ ವಿನೀತ ಸಮಾಜವು ಮತ್ತು ವಿನೀತ ರಾಜರು ಹೇಗೆ ಭಾವಿಸುತ್ತಿದ್ದರು ಎಂಬುದಕ್ಕೆ ಗೋವಿಂದ ರಾಜನ ಮಗನಾದ ನೃಪತುಂಗನ ಆಸ್ಥಾನದಲ್ಲಿ ರಚಿತವಾದ "ಕವಿರಾಜಮಾರ್ಗ" ಎಂಬ ಕನ್ನಡ ಸಾಹಿತ್ಯ ಗ್ರಂಥದೊಳಗಿನ ಈ ದೃಷ್ಟಾಂತ ಪದ್ಯದಿಂದಲೂ ಸ್ಫುಟವಾಗುತ್ತಿದೆ:—

> ಕಸವರಮೆಂಬುದು ನೆರೆ ಸೈ ।
> ರಿಸಲಾರ್ಪೊಡೆ ಪರವಿಚಾರಮಂ
> ಧರ್ಮಮುಮಂ ।
> ಕಸವೇಂ ಕಸವರಮೇನು—
> ಬ್ಬಸಮಂ ಬಸಮಲ್ಲದಿದ್ದು
> ಮಾಡುವರೆಲ್ಲಂ ॥೧೭೬॥ ಪ. ೩.–೩

"ಅನ್ಯರ ಮಾನಸಿಕ ವಿಚಾರವನ್ನೂ ಅನ್ಯಧರ್ಮೀಯರ ಧಾರ್ಮಿಕ ವಿಚಾರವನ್ನೂ ಮಾಡಿಕೊಳ್ಳುವುದು ಮಾತ್ರವಲ್ಲ. ಅವುಗಳು ತಮ್ಮವುಗಳಿಗೆ ವಿರುದ್ಧವಾಗಿ ತೋರಿದರೂ ಸೈರಿಸಿಕೊಳ್ಳಬೇಕು. ಅವುಗಳು ಮಾನವೀಭಾವನೆಯಲ್ಲಿ, ಮಾನವೀ ಧರ್ಮದಲ್ಲಿ ಅಂಗೋಪಾಂಗಗಳಾಗಿರುವುದೇ ಆ ಸೈರಣೆಗೆ ಕಾರಣ. ಅದಕ್ಕೆ ವಿರುದ್ಧವಾಗಿ ವರ್ತಿಸಿದವರ ಕಸವರ (ಐಶ್ವರ್ಯ) ವೇನು? ಕಸವೇನು! ಎರಡೂ ಒಂದೆ. ಅಂಥ ಅವಿನೀತತೆಯಿಂದ ಲೋಕಕ್ಕೆ ಉಬ್ಬಸ (ಸಂಕಷ್ಟ) ವನ್ನುಂಟುಮಾಡಿದಂತಾದೀತು."

ಈ ಮಾತಿನಲ್ಲಿ ಎಂಥ ಉದಾರತೆ-ವಿನೀತತೆಗಳು ಅಡಕವಾಗಿವೆ ಎಂದು ವಾಚಕರೇ ಭಾವಿಸಲಿ. ಯಾಕೆ? ಶ್ರೀ ಅಬುಲ್‌ಕಲಾಂ ಅಜಾದ, ಶ್ರೀ ಅಬ್ದುಲ್ ಗಫರಖಾನರೇ ಮೊದಲಾದ ವಿನೀತ ಬಂಧುಗಳು ತ್ರಿಕರಣಪೂರ್ವಕವಾಗಿ ಈ ಹೇಳಿಕೆಯನ್ನೆ ಸಾರುತ್ತಾರಲ್ಲವೆ? ಶ್ರೀ ಜಿನ್ನಾಸಾಹೇಬರು ಲೋಕಶಾಂತತೆಗಾಗಿಯೆ ತಾವು ಪಾಕಿಸ್ತಾನವನ್ನು ಯಾಚಿಸುವದು ಎನ್ನಬಹುದು. ಆದರೆ ಅದು ಕಂಠದಿಂದಿತ್ತಣ ಮಾತು, ಅತ್ತಣದಲ್ಲ ಎಂಬುದನ್ನು ಸಾಧಾರವಾಗಿ ತೋರಿಸಬಹುದು. ಪರಾಂಬರಿಸಿರಿ: ಹಿಂದುಸ್ತಾನವು, ಪಾಕಿಸ್ಥಾನ, ಹಿಂದುಸ್ತಾನ ಎಂದು ಮತಾನುಸಾರವಾಗಿ ಸ್ಥಾನದ್ವಯವಾಗಬೇಕಾದರೆ, ಪಾಕಿಸ್ಥಾನದಲ್ಲಿ ಮುಸ್ಲಿಂಸ್ಥಾನ ಹಿಬ್ರುಸ್ಥಾನಗಳು ಯಾಕೆ ವಿಂಗಡವಾಗಬಾರದು? ಶ್ರೀ ಜಿನ್ನಾ ಸಾಹೇಬರು, ಮತಭೇದಾನುಸಾರವಾಗಿ ಜನಾಂಗವೂ ಭಿನ್ನವಾಗಿ ... ಎನ್ನುವವರಲ್ಲಿ ಹಿಬ್ರು ಜನಾಂಗದವರು ಅಲ್ಲಿ ... ಮಾನದಿಂದ ತೋ...

—(ಮುಂದುವರಿಯುವದು)

ಸಂಪಾದಕೀಯ ಟೀಕೆಟಿಪ್ಪಣಿಗಳು

ಹೊಸ ವರುಷ

'ಕರ್ಮವೀರ' ಪತ್ರಿಕೆಗೆ ಹದಿನೆಂಟು ವರುಷ ತುಂಬಿ ೧೯ ನೇ ವರುಷ ಈ ಸಂಚಿಕೆಯಿಂದ ಪ್ರಾರಂಭವಾಗಿದೆ. ಇದೀಗ ಪತ್ರಿಕೆ ಪ್ರೌಢಾವಸ್ಥೆಯಲ್ಲಿದೆ. ಈ ಹದಿನೆಂಟು ವರುಷಗಳಲ್ಲಿ ಪತ್ರಿಕೆಯೆಷ್ಟೊಂದು ಅಡ್ಡಿ ಅಡಚಣಿ ಕಷ್ಟನಷ್ಟಗಳನ್ನು ಸಹಿಸಿದೆಂಬುದು ವಾಚಕರಿಗೆಲ್ಲ ಗೊತ್ತು. ಸರಕಾರದ ದಬ್ಬಾಳಿಕೆಗೆ ಗುರಿಯಾಗಿ ಕೆಲಕಾಲ ಅಸ್ತವನ್ನೂ ಹೊಂದುವ ಪ್ರಸಂಗ ಪತ್ರಿಕೆಗೆ ಬರದಿರಲಿಲ್ಲ. ಸಂಪಾದಕರೂ ಪತ್ರಿಕೆಯ ನಿಮಿತ್ತ ತುರಂಗವಾಸ, ದಂಡ ಮುಂತಾದ್ದನ್ನು ಅನುಭೋಗಿಸಿದ್ದುಂಟು. ಇಷ್ಟೆಲ್ಲ ಸಂಭವಿಸಿದರೂ ಪತ್ರಿಕೆಯು ತನ್ನ ಕರ್ತವ್ಯದಲ್ಲಿ ಚ್ಯುತವಾಗದೆ ಕನ್ನಡ ನಾಡಿನ, ಕನ್ನಡ ಭಾಷೆಯ ಸೇವೆಯನ್ನು ಮಾಡುತ್ತ ಬಂದಿದೆ. ಸದ್ಯದ ಮಹಾಯುದ್ಧ ಕಾಲದಿಂದ ಪತ್ರಿಕೆಗೆ ಇನ್ನಷ್ಟು ತಡೆಯುಂಟಾಗಿದ್ದಿತು. ಬಗೆಬಗೆಯ ನಿರ್ಬಂಧ ಆಜ್ಞೆಗಳು ಕಾಗದಗಳ ಕೊರತೆ ಮೊದಲಾದ ಕಾರಣಗಳಿಗಾಗಿ ಪತ್ರಿಕೆಯ ಆಕಾರ ಪುಟಗಳನ್ನು ಕಡಿಮೆ ಮಾಡಬೇಕಾಯಿತು. ಆದರೂ ಬೇರೆ ಯಾವ ವಾರ ಪತ್ರಿಕೆಗಳಿಗಿಂತ ಹೆಚ್ಚು ವಿಷಯವನ್ನು ಕೊಡುತ್ತಿದ್ದೆಂಬುದನ್ನು ನಮ್ಮ ಸುಜ್ಞ ವಾಚಕರು ಬಲ್ಲರು. ಈಗ ಕಾಗದದ ಮೇಲಿನ ನಿಯಂತ್ರಣ ಹೋದ್ದರಿಂದ ಪತ್ರಿಕೆಯ ಆಕಾರವನ್ನು ದೊಡ್ಡದು ಮಾಡಿ ಡೆಮಿ ೧೬ ಪುಟಗಳನ್ನು ನಮ್ಮ ವಾಚಕರಿಗೆ ಈ ವಾರದಿಂದ ಕೊಡಲು ಪ್ರಾರಂಭಿಸಿದ್ದೇವೆ. ಮೊದಲಿನಂತೆ ಲೇಖಗಳು, ಕಥೆ, ಹರಟೆ ವಿಮರ್ಶೆ, ಸುದ್ದಿ ಸಮಾಚಾರ, ಭವಿಷ್ಯ ಕೊಡುವುದಲ್ಲದೆ ವಿವಿಧ ಚಿತ್ರಗಳನ್ನೂ ಕೊಟ್ಟು ಹೆಚ್ಚು ಆಕರ್ಷಕ ಮಾಡಬೇಕೆಂದು ಬಗೆದಿದ್ದೇವೆ; ಮಹಾತ್ಮಾ ಗಾಂಧಿಯವರ 'ಹರಿಜನ' ಪತ್ರಿಕೆಯಲ್ಲಿಯ ಬರೆಹಗಳನ್ನು, ಮೊದಲೆ ತರಿಸಿಕೊಂಡು ಇಂಗ್ಲಿಶ್ ಹಿಂದೀ [illegible] ರಿಜನ ಪತ್ರಿಕೆಗಳಲ್ಲಿ ಪ್ರಕಟವಾಗುವ ದಿನವೇ ಅವನ್ನೆಲ್ಲ ಹರಿಜನ ಪುರವಣಿ ಎಂದು ನಮ್ಮ ಪತ್ರಿಕೆಯಲ್ಲಿ ಪ್ರಸಿದ್ಧಿಸುತ್ತಿರುವದು ವೈಶಿಷ್ಟ್ಯವಾಗಿದೆ. ಕನ್ನಡ ನಾಡಿನ ಜನರು ಪತ್ರಿಕೆಗೆ ಸರ್ವ ಬಗೆಯಿಂದಲೂ ಪ್ರೋತ್ಸಾಹವ ಕೊಟ್ಟು ಇನ್ನೂ ಹೆಚ್ಚಿನ ಸೇವೆಯನ್ನು ಸ್ವೀಕರಿಸಲಿ. ಜಗನ್ನಿಯಾಮಕನು ಆ [illegible]ಯ ಶಕ್ತಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

[illegible] ದದು ಇಲ್ಲವೆ ಅಲಕ್ಷ [illegible] ರಕಕ್ಕೂ ಶೋಭಿಸ [illegible] ವಾಗಿದೆ. [illegible] ಕರ್ನಾಟಕದ ಸದಸ್ಯ [illegible] ಮೈತ್ರಯರಾಯರು [illegible] ತ್ತಿನ ಸದಸ್ಯರೆಂದು [illegible] ಜಿನೆವಾಕ್ಕೆ ಹೊರ [illegible] ರಡುವ ಮೊದಲು [illegible] ಗಳಿಗೆ ಭೆಟ್ಟಿ [illegible] ಷ್ಟರಿಂದ ಬೀಳ್ಕೊಂಡರು. ಧಾರವಾಡದಲ್ಲಿ ಅನೇಕ ಸಂಸ್ಥೆಗಳು ಅವರನ್ನು ಸಂಭ್ರಮದಿಂದ ಬೀಳ್ಕೊಟ್ಟವು. ಶ್ರೀ ಕರಮರಕರರು ಕರ್ನಾಟಕದಲ್ಲಿಯ ಪ್ರಮುಖ ಕಾರ್ಯಕರ್ತರಲ್ಲೊಬ್ಬರು. ಕಾಂಗ್ರೆಸ್ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸಿ, ಕಷ್ಟನಷ್ಟಗಳನ್ನು ಸಹಿಸಿ, ತಮ್ಮ ಸ್ವಾರ್ಥತ್ಯಾಗದಿಂದ [illegible] ಶಾಸನ ಸಭೆಯ ಸದಸ್ಯತ್ವದಂಥ [illegible] ಸ್ಥಾನವನ್ನು ಪಡೆದಿರುವರು. ತಮ್ಮ ಬುದ್ಧಿಮತ್ತೆ, ವಾಕ್ಪಟುತ್ವದಿಂದ ಅವರು ಶಾಸನ ಸಭೆಯ ಧುರೀಣರ ಪ್ರಶಂಸೆಗೂ ಪಾತ್ರರಾಗಿ [illegible] ಸೇವಾ ಪರಿಷತ್ತಿನ ಸದಸ್ಯರಾಗಿ ಹೋಗುತ್ತಿರುವದು ಕರ್ನಾಟಕಕ್ಕೆ, ನಮಗೆ ಅತ್ಯಂತ ಅಭಿಮಾನದ ಸಂಗತಿಯು. ಶ್ರೀ ಕರಮರಕರರು ನಮ್ಮ ಪತ್ರಿಕೆಯ ಹಿಂದಿನ ಸಂಪಾದಕರು. ನಮ್ಮ ಸಂಸ್ಥೆಯ ಒಳ್ಳೆ ಅಭಿಮಾನಿಗಳು. ಇವರಿಗೆ ದೊರೆತ ಈ ಸನ್ಮಾನಕ್ಕಾಗಿ ನಾವು ಸಂತೋಷಿಸುತ್ತೇವೆಯಲ್ಲದೆ ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇವೆ. ಅವರ ಈ ಯುರೋಪ ಸಂಚಾರ ಯಶಸ್ವಿಯಾಗಲೆಂದು ಹಾರಯಿಸುತ್ತೇವೆ.

ಆಹಾರ ಪರಿಸ್ಥಿತಿ

ಹಿಂದುಸ್ಥಾನದ ಆಹಾರ ಪರಿಸ್ಥಿತಿಯಿನ್ನೂ ಸುಧಾರಿಸದ್ದರಿಂದ ಜನತೆ ಬಳಲಬೇಕಾಗಿದೆ. [illegible] ರಲ್ಲಿಯ [illegible] ಸರಕಾರದವರಿಗೆ ಆಹಾರ ಪದಾರ್ಥಗಳ ಹಂಚಿಕೆಯ ಹಿಡಿತ ಇನ್ನೂ ಸಿಕ್ಕದಿದ್ದುದರಿಂದ ಪರಿಸ್ಥಿತಿ ಮತ್ತಷ್ಟು ಕೆಡಹತ್ತಿದೆ. ವ್ಯಾಪಾರಸ್ಥರು ಲಾಭಬಡಕತನವನ್ನು ಕಳ್ಳಪೇಟೆಯನ್ನು ಬಿಟ್ಟುಗೊಟ್ಟು ಪ್ರಾಮಾಣಿಕ ರೀತಿಯಿಂದ ವ್ಯವಹಾರ ಮಾಡಿ ಸರಕಾರದ ಈ ಮಹಾಕಾರ್ಯದಲ್ಲಿ ಸಹಕರಿಸಲು ಮುಂದಾಗದ್ದರಿಂದ ಜನತೆ ಹೆಚ್ಚು ಸಂಕಷ್ಟಕ್ಕೊಳಗಾ[illegible]. ರೈತರಾದರೂ ಆಹಾರ ಪದಾರ್ಥ[illegible] ಎತ್ತುವಳಿಯಲ್ಲಿ ಸರಕಾರಕ್ಕೆ ಸಲ್ಲಿಸಬೇಕಷ್ಟು ಸಹಾಯವನ್ನು ನೀಡುವದಿಲ್ಲವಾದ್ದರಿಂದ ಸರಕಾರದ ವಶದಲ್ಲಿ ಸಾಕಷ್ಟು ಆಹಾರ ಪದಾರ್ಥಗಳು ಇಲ್ಲದಂತಾಗಿವೆ. ಇವೆಲ್ಲ ಕಾರಣಗಳಿಂದ ಜನರು ಬಳಲಬೇಕಾಗಿದೆ. ಇದೆಲ್ಲ ಪರಿಸ್ಥಿತಿ ಸುಧಾರಿಸಬೇಕಾದರೆ ಎಲ್ಲರೂ ತಮ್ಮ ಕರ್ತವ್ಯವನ್ನು ಮಾಡಬೇಕು. ರೈತರು ತಮಗೆ ಬೇಕಾದಷ್ಟು ಕಾಳುಗಳನ್ನಿಟ್ಟುಕೊಂಡು ಉಳಿದೆಲ್ಲ ಕಾಳುಗಳನ್ನು ಸರಕಾರಕ್ಕೆ ಮಾರಬೇಕು. ಸರಕಾರಿ ಅಧಿಕಾರಿಗಳು ಅವನ್ನೆಲ್ಲ ಚನ್ನಾಗಿ ಸಂಗ್ರಹಿಸಿಡಬೇಕು. ತಮ್ಮ ತಮ್ಮ ಜಿಲ್ಹೆಗಳಿಗೆ ಲೆಕ್ಕದಂತೆ ಎಷ್ಟು ಬೇಕಾಗಿದೆಂಬುದನ್ನು ಕಂಡು ಹಿಡಿದು ಅಷ್ಟನ್ನಿಟ್ಟುಕೊಂಡು ಉಳಿದದ್ದನ್ನು ಕೊರತೆ ಭಾಗಗಳಿಗೆ ಕಳಿಸಿಕೊಡಬೇಕು. ತಮ್ಮ ಜಿಲ್ಹೆಯಲ್ಲಿಟ್ಟುಕೊಂಡ ಕಾಳಿನ ಹಂಚಿಕೆಯನ್ನು ಯೋಗ್ಯರೀತಿಯಿಂದ ಮಾಡಬೇಕು ವ್ಯಾಪಾರಸ್ಥರಾದರೆ ರೈತರಿಗೆ ಹೆಚ್ಚಿನ ಆಮಿಷ ತೋರಿಸಿ ಕಳ್ಳಪೇಟೆಯ ವ್ಯವಹಾರಕ್ಕವಕಾಶ ಕೊಡಬಾರದು. ಇವೆಲ್ಲಕ್ಕೂ ಮಹತ್ವದ್ದೆಂದರೆ ಸರಕಾರದ ನಿಯಂತ್ರಣಾಜ್ಞೆಗಳು ಯಾವದೊಂದು ಪದಾರ್ಥದ ಧಾರಣೆಯನ್ನು ನಿಯಂತ್ರಿಸುವ ಮೊದಲು ಆ ಬಗ್ಗೆ ಪೂರ್ಣ ವಿಚಾರ ಮಾಡಬೇಕು. ಬರಿ ಧಾರಣೆ ನಿಯಂತ್ರಿಸುವದರಿಂದ ಉದ್ದಿಷ್ಟ ಸಾಧಿಸುವದೋ ಹೇಗೆಂಬದನ್ನು ಪರಾಂಬರಿಸಬೇಕು. ಸರಕುಗಳನ್ನು ವಶಪಡಿಸಿಕೊಳ್ಳದೆ ಧಾರಣೆಗಳನ್ನು ನಿಯಂತ್ರಿಸುವದರಿಂದ ನಿಯಂತ್ರಿತ ಬೆಲೆಗೆ ಅವು ಸಿಕ್ಕುವುದಿಲ್ಲೆಂಬುದು ಅನುಭವದ ಮಾತಾಗಿದೆ. ಬೇರೆ ಪದಾರ್ಥಗಳ ಬಗ್ಗೆ ಏನೇ ಆಗಲೊಲ್ಲದೇಕೆ, ಆಹಾರ ಪದಾರ್ಥಗಳ ಬಗ್ಗೆಯಂತೂ ಹೆಚ್ಚು ದಕ್ಷತೆ ತೆಗೆದುಕೊಳ್ಳಬೇಕು. ಆಹಾರೇತರ ಪದಾರ್ಥಗಳು ಕಳ್ಳಪೇಟೆ ಹೊಕ್ಕರೂ ಅಷ್ಟೊಂದು ತೊಂದರೆಯಾಗುವದಿಲ್ಲ. ಆದರೆ ಆಹಾರ ಪದಾರ್ಥಗಳು ಕಳ್ಳಪೇಟೆ ಹೊಕ್ಕರೆ ಜನರಿಗೆ ಬಹಳ ತೊಂದರೆಯಾಗುವುದು. ಆದುದರಿಂದ ಅವುಗಳ ಧಾರಣೆ ನಿಯಂತ್ರಿಸುವಾಗ ಅಧಿಕಾರಿಗಳು ಬಹಳ ದಕ್ಷತೆ ವಹಿಸಬೇಕು. ಬೆಲ್ಲದ ಧಾರಣೆ ನಿಯಂತ್ರಿಸಿದ್ದರಿಂದ ಕಳೆದ ಮೂರು ತಿಂಗಳುಗಳಿಂದ ಬೆಲ್ಲ ಸಿಕ್ಕದಂತಾಗಿದೆಂಬುದು ಅನುಭವದ ಮಾತು. ಈಗ ಬೇಳೆ ಕಾಳುಗಳ ಧಾರಣೆಗಳನ್ನು ಧಾರವಾಡ ಜಿಲ್ಹಾ ಮ್ಯಾಜಿಸ್ಟ್ರೇಟರು ನಿಯಂತ್ರಿಸಿರುವರು. ಅವೂ ಸಿಕ್ಕದಂತೆ ಎಲ್ಲಿ ಆಗುವವೊ ಎಂಬ ಭೀತಿ. ಏಕೆಂದರೆ ತಾವು ಕೊಂಡಕ್ಕಿಂತ ಈ ನಿಯಂತ್ರಿತ ಧಾರಣೆ ಬಹಳ ಕಡಿಮೆಯಾಗಿವೆಂದು ವ್ಯಾಪಾರಸ್ಥರು ಈಗಾಗಲೇ ಗುಣುಗುಟ್ಟುತ್ತಿದ್ದಾರೆ. ಜನರಾದರೂ ಸದ್ಯದ ಆಹಾರ ಕೊರತೆಯಲ್ಲಿ ಅನವಶ್ಯಕವಾಗಿ ಆಹಾರ ಪದಾರ್ಥಗಳನ್ನು ಹಾಳು ಮಾಡಬಾರದು. ಹೀಗೆ ಎಲ್ಲರೂ ತಮ್ಮ ಕರ್ತವ್ಯ ಮಾಡಿ ಈ ಆಹಾರ ಕೊರತೆಯನ್ನು ಯಶಸ್ವಿಯಾಗಿ ಹೋಗಲಾಡಿಸಬೇಕು. ಆಹಾರ ಪದಾರ್ಥಗಳ ಉತ್ಪಾದನೆ ಹೆಚ್ಚುವಂತೆ ಸರ್ವ ವಿಧ ಪ್ರಯತ್ನ ಮಾಡುವದೂ ಅತ್ಯವಶ್ಯವೆಂದು ಬೇರೆ ಹೇಳಬೇಕಿಲ್ಲ.

ಪೋಲೀಸರ ಸಂಪು

ಬಿಹಾರ ಪ್ರಾಂತದ ಕೆಲ ಭಾಗದಲ್ಲಿಯ ಪೋಲೀಸರು ಸಂಪು ಹೂಡಿ ಹಿಂಸೆಗೆಳೆಸಿದ್ದು ಶೋಚನೀಯ ಸಂಗತಿ. ನಾಗರಿಕರ ದೈನಿಕ ಜೀವನಕ್ಕೆ ಅತ್ಯಂತ ಸಹಾಯಕರಾದ ಪೋಲೀಸರು ಭಂಗಿಗಳು ಮೊದಲಾದವರು ಸಂಪು ಹೂಡಿದರೆ ಎಷ್ಟೊಂದು ತೊಂದರೆಯಾಗುವದೆಂಬುದನ್ನು ವಿವರಿಸಬೇಕಾಗಿಲ್ಲ. ತಮ್ಮ ಸಂಕಷ್ಟಗಳೇನೇ ಇದ್ದರೂ ಅವನ್ನೆಲ್ಲ ಪರಸ್ಪರ ಸಹಕಾರ ಭಾವನೆಯಿಂದಲೆ ಬಗೆಹರಿಸಿಕೊಳ್ಳಬೇಕಲ್ಲದೆ ಸಂಪಿನಂಥ ಕೊನೆಯ ಅಸ್ತ್ರವನ್ನು ಇವರು ಹಿರಿಯಬಾರದು. ಆದರೆ ಬಿಹಾರ ಪೋಲೀಸರು ತಮ್ಮ ಬೇಡಿಕೆಗಳನ್ನು ಪಡೆಯುವುದಕ್ಕಾಗಿ ಸಂಪು ಹೂಡಿದರಿಷ್ಟೇ ಅಲ್ಲ. ಆದರೆ ಮದ್ದುಗುಂಡುಗಳನ್ನು ವಶಪಡಿಸಿಕೊಂಡು ಹಿಂಸಾಚಾರವನ್ನೂ ಪ್ರಾರಂಭಿಸಿದ್ದು ವಿಷಾದದ ಸಂಗತಿ. ಈ ಬಂಡುಗಾರರ ಹಿಂಸಾಕೃತ್ಯವನ್ನು ತಡೆಯುವುದಕ್ಕಾಗಿ ಸರಕಾರದವರು ಸೈನಿಕರನ್ನು ಪಯೋಗಿಸಬೇಕಾಯಿತು. ಸೈನಿಕರಿಗೂ ಪೋಲೀಸರಿಗೂ ಒಂದು ಬಗೆಯ ಹೋರಾಟ ನಡೆಯಿತು. ಆದರೀಗ ಸಂ ಪು ನಿಂ ತಂ ತಾ ಗಿ ದೆ. ಬಹಳ ಭಾಗದಲ್ಲಿಯ ಪೋಲೀಸರು ಶರಣು ಬಂದಿರುವರೆಂದು ತಿಳಿಯುತ್ತದೆ. ಪೋಲೀಸ ಸಂಘದ ಅಧ್ಯಕ್ಷರಾದ ತಿವಾರಿಯವರು ಮಹಾತ್ಮರ ಸಲಹೆಯಂತೆ ಅಧಿಕಾರಿಗಳ ವಶ ಆಗಿರುವರು. ಇವರು ಪೋಲೀಸರನ್ನು ಸಂಪಿಗಾಗಿ ಪ್ರಚೋದಿಸುತ್ತಿರುವರೆಂಬ ಆರೋಪ ಸರಕಾರದ್ದಿದೆ. ಅವರ ಮೇಲೆ ಗಂಭೀರ ಆರೋಪಗಳಿವೆ. ಅವರನ್ನು ಹಿಡಿದುಕೊಟ್ಟವರಿಗೆ ೩ ಸಾವಿರ ರೂಪಾಯಿಗಳ ಪಾರಿತೋಷಕವನ್ನೂ ಸರಕಾರದವರು ಸಾರಿದ್ದರು. ಪೋಲೀಸರು ಸಂಪು ಹೂಡುವದು ಸರ್ವಥಾ ನ್ಯಾಯ್ಯವಲ್ಲೆಂದು ಗಾಂಧೀಜಿಯವರು ಅಭಿಪ್ರಾಯಪಟ್ಟಿರುವರು. ಪೋಲೀಸರ ಸಂಪು ಹಿಂತೆಗೆದುಕೊಂಡ ಬಳಿಕ ಬಿಹಾರ ಸರಕಾರದ ಮುಖ್ಯ ಮಂತ್ರಿ ಶ್ರೀ. ಕೃಷ್ಣ ಸಿಂಹರು ಹೊರಡಿಸಿದ ಪ್ರಕಟನೆಗಳಲ್ಲಿ ಪೋಲೀಸರ ಬೇಡಿಕೆಗಳನ್ನೆಲ್ಲ ಪೂರೈಸಿದ್ದಾಗಿದೆಂದು ಸಾರಲಾಗಿದೆ. ಆದರೆ ಇಷ್ಟರಿಂದಲೆ ಅವರು ಸಮಾಧಾನ ಹೊಂದದಿದ್ದರೆ ಅವರ ಉಳಿದ ಬೇಡಿಕೆಗಳ ಬಗ್ಗೆಯೂ ವಿಚಾರ ಮಾಡಿ ಅವನ್ನು ಪೂರಯಿಸಿ ಪೋಲೀಸರನ್ನು ಸಂತೋಷಪಡಿಸಬೇಕು.

ಸದುಪದೇಶ

ಪೋಲೀಸರನ್ನುದ್ದೇಶಿಸಿ ಮುಂಬಯಿ ಪ್ರಾಂತದ ಗೃಹಮಂತ್ರಿಗಳಾದ ಮಾನ್ಯ ಮುರಾರಜಿ ದೇಸಾಯರು ಕೆಲ ಹಿತೋಕ್ತಿಗಳನ್ನು ಹೇಳಿರುವರು. ಪೋಲೀಸರು ಪ್ರಜಾಸೇವಕರು. ಪ್ರಜಾಪೀಡಕರಲ್ಲ? ಎಂಬದನ್ನು ತಿಳಿದುಕೊಂಡು ಕಾರ್ಯ ಮಾಡಹತ್ತಿದರೆ ಇಂದು ಪೋಲೀಸರೆಂದರೆ ಯಮದೂತರು ಎಂಬ ಭಾವನೆ ಬಯಲಾಗಿ ಸರಕಾರದ ಆಡಳಿತದಲ್ಲಿಯ ಮುಖ್ಯ ಘಟಕ ಅವರು ಎಂದು ಎಲ್ಲರ ಮನವರಿಕೆಯಾಗುವುದು. ಹಿಂದುಸ್ತಾನದಲ್ಲಿ ಈ ವರೆಗೆ ಪರಕೀಯ ಆಡಳಿತ ವಿದ್ದುದರಿಂದ ಪೋಲೀಸರನ್ನು ಅವರು ಆ ಪಡಿಯಚ್ಚಿನಲ್ಲಿಯೆ ಸಿದ್ಧಮಾಡಿದ್ದುಂಟು. ಈಗ ಆಡಳಿತದಲ್ಲಿ ಬದಲಾವಣೆಯಾಗಿ ಪ್ರಜಾಪ್ರಭುತ್ವ ರಾಜ್ಯ ಪ್ರಸ್ಥಾಪಿತವಾಗಿದ್ದರೂ ಪೋಲೀಸರ ಧೋರಣದಲ್ಲಿ ಬದಲಾವಣೆಯಾಗಿಲ್ಲ. ಅವರು ಹಿಂದಿನಂತೆ ತಮ್ಮ ಪ್ರಜಾಪೀಡಕ ಧೋರಣವನ್ನೆ ಇಟ್ಟುಕೊಂಡಿರುವರೆಂದು ವಿಷಾದದಿಂದ ಹೇಳಬೇಕಾಗುವದು. ಅಂತೆಯೆ ಮಾನ್ಯ ಮಂತ್ರಿಗಳು, ಪೋಲೀಸರು ಎಲ್ಲಕ್ಕಿಂತ ಮೊದಲು ತಾವು ಜನ ಸೇವಕರೆಂದು ತಿಳಿದುಕೊಳ್ಳಬೇಕು. ಮಿಂಚಿನ ವೇಗದಿಂದ ಬದಲಾವಣೆಯಾಗುತ್ತಿರುವ ಕಾಲ ಪರಿಸ್ಥಿತಿಯ ಮಹಿಮೆಯನ್ನು ಚೆನ್ನಾಗಿ ಅರಿತುಕೊಳ್ಳಬೇಕು ಎಂದು ಪೋಲೀಸರಿಗೆ ಉಪದೇಶಿಸಿರುವರು. ಪೋಲೀಸರು ಈ ಉಪದೇಶದಂತೆ ತಮ್ಮ ಧೋರಣದಲ್ಲಿ ಅವಶ್ಯಕ ಬದಲಾವಣೆ ಮಾಡಿಕೊಂಡರೆ ಇಂದು ಪೋಲೀಸರು ಮತ್ತು ನಾಗರಿಕರಲ್ಲಿರುವ ಭಾವನೆಗಳು ಬದಲಾಗುವಲ್ಲಿ ಸಂದೇಹವಿಲ್ಲ. ಜನತೆಯ ಸಹಕಾರ ಅವರಿಗೆ ಸಾಕಷ್ಟು ಸಿಕ್ಕು ಅಪರಾಧಗಳ ಶೋಧ ಹತ್ತಲೂ ಅನುಕೂಲವಾಗುವದು. ಈ ಎಲ್ಲ ದೃಷ್ಟಿಯಿಂದ ವಿಚಾರ ಮಾಡಿ ಪೋಲೀಸರು ಹಿಂದಿನ ತಮ್ಮ ದಬ್ಬಾಳಿಕೆಯ ಧೋರಣವನ್ನು ಬಿಟ್ಟುಗೊಡಬೇಕೆಂದು ಸೂಚಿಸಬಯಸುತ್ತೇವೆ.

ಸಾಮ್ರಾಜ್ಯವಾದ ಕೊನೆಗೊಳ್ಳಬೇಕು

ದಿಲ್ಲಿಯಲ್ಲಿ ಕೂಡಿದ ಅಂತರ್ ಏಶಿಯಾ ಪರಿಷತ್ತು ಜಾಗತಿಕ ಸ್ವಾತಂತ್ರ್ಯ ಪಥದಲ್ಲಿ ಮಹತ್ವದ ಕಾರ್ಯವನ್ನು ಸಾಧಿಸಿದೆಂದು ಹೇಳಬಹುದು. ಏಶಿಯ ರಾಷ್ಟ್ರಗಳಲ್ಲೆಲ್ಲ ಸಹಕಾರ ಐಕ್ಯ ಉಂಟುಮಾಡಿ ಎಲ್ಲೆಲ್ಲಿಯೂ ಶಾಂತಿ ಸುಹೃದ್ಭಾವನೆ ನೆಲೆಗೊಳ್ಳುವಂತೆ ಮಾಡುವಲ್ಲಿ ಈ ಪರಿಷತ್ತು ಬಹಳ ಮುಂದೆ ಹೆಜ್ಜೆ ಇಟ್ಟಿದೆಂದು ಹೇಳಬಹುದು. ಯುರೋಪ ಇಲ್ಲವೆ ಬೇರೆ ಯಾವದೇ ರಾಷ್ಟ್ರಗಳ ಅಧೀನದಲ್ಲಿ ಏಶಿಯಾ ಇಂದು ಉಳಿಯಲಾರದು, ಏಶಿಯಾದಲ್ಲಿ ಪರಕೀಯ ಸಾಮ್ರಾಜ್ಯವಾದಕ್ಕವಕಾಶ ಇನ್ನು ಮುಂದೆ ಸಿಕ್ಕಲಾರದು ಎಂದು ಗುಂಪಿನ ವರದಿಯಲ್ಲಿ ಅಭಿಪ್ರಾಯಪಡಲಾಗಿದೆ. ಯುರೋಪಿನ ರಾಷ್ಟ್ರಗಳು ವಿಶೇಷತಃ ಇಂಗ್ಲಂಡು ಶಾಂತ ರೀತಿಯಿಂದ ತನ್ನ ಅಧಿಕಾರವನ್ನು ಕೊನೆಗಾಣಿಸಿ ಆಯಾ ಅಧೀನ ರಾಷ್ಟ್ರಗಳಿಗೆ ಆಡಳಿತವನ್ನು ಒಪ್ಪಿಸಿ ಕೊಡುವದವಶ್ಯವಾಗಿದೆ; ಕ್ರಮಪ್ರಾಪ್ತವಾಗಿದೆ. ಈ ಬಗೆಯ ಅಧಿಕಾರಪ್ರದಾನದ ಧೋರಣವನ್ನು ವಹಿಸದಿದ್ದರೆ ಸಾಮ್ರಾಜ್ಯ ರಾಷ್ಟ್ರಗಳು ಕಾಲ ಪರಿಸ್ಥಿತಿಯನ್ನರಿತುಕೊಂಡಿಲ್ಲೆಂದು ವಿಷಾದದಿಂದ ಹೇಳಬೇಕಾಗುವದು. ಒತ್ತಾಯಕ್ಕೊಳಗಾಗಿ ಅವರು ಈ ಅಧಿಕಾರವನ್ನು ಒಪ್ಪಿಸಿಕೊಡಬೇಕಾಗುವದು. ಇರಲಿ. ಏಶಿಯಾ ರಾಷ್ಟ್ರಗಳು ಇಂತು ಪರಿಷತ್ತು ಸೇರಿಸಿ ಪರಸ್ಪರರಲ್ಲಿ ಸ್ನೇಹ ಸಂಬಂಧವನ್ನು ಅಭಿವರ್ಧಿಸಿಕೊಳ್ಳಲು ಅಣಿಯಾದದ್ದು ಅಭಿನಂದನೀಯ ಸಂಗತಿಯಾಗಿದೆ. ಈ ಪರಿಷತ್ತಿನ ಮುಖ್ಯ ಉದ್ದೇಶವು ಸಾಧಿಸಿ ಏಶಿಯ ರಾಷ್ಟ್ರಗಳ ಒಕ್ಕೂಟ [illegible] ಬೇರೆ ಎಲ್ಲ ರಾಷ್ಟ್ರಗಳು ಪರಕೀಯ ಸಾಮ್ರಾಜ್ಯಗಳ ಕಪಿಮುಷ್ಟಿಯಿಂದ ಮುಕ್ತವಾಗಿ ಸ್ವಾತಂತ್ರ್ಯ ಪಡೆಯುವಂತಾಗಲಿ ಎಂದು ಹಾರಯಿಸುತ್ತೇವೆ.

ಸಂಸ್ಥಾನಿಕರ ಹೊಣೆಗಾರಿಕೆ

ಬ್ರಿಟಿಶ ಸರಕಾರದವರು ಅಧಿಕಾರ ತ್ಯಾಗ ಮಾಡುವ ಈ ಸಂಕ್ರಮಣಕಾಲದಲ್ಲಿ ಸಂಸ್ಥಾನಿಕರು ಯಾವದೇ ಬಗೆಯ ಸ್ವಾರ್ಥ ಸಾಧಿಸಲು ಹವಣಿಸುವದು ನ್ಯಾಯ್ಯವಾಗಲಾರದು, ಹಿತಕರವೂ ಆಗಲಾರದು. ಹಿಂದುಸ್ತಾನದಲ್ಲಿ ಸ್ಥಾಪಿತವಾಗಲಿರುವ ಯೂನಿಯನ್ ಸರಕಾರದಲ್ಲಿ ಸೇರಿ ತಮ್ಮ ಮತ್ತು ಸಂಸ್ಥಾನ ಪ್ರಜೆಗಳ ಕಲ್ಯಾಣವನ್ನು ಸಾಧಿಸಿಕೊಳ್ಳಬೇಕು. ಅದಕ್ಕೂ ಮೊದಲು ಘಟನಾ ಸಮಿತಿಯಲ್ಲಿ ಸೇರಿ ಹಿಂದುಸ್ತಾನದ ಘಟನೆಯನ್ನು ಸಿದ್ಧಮಾಡುವಲ್ಲಿ ತಮ್ಮ [illegible]ವನ್ನು ನೀಡಬೇಕು. ಇದಕ್ಕೆ ನರೇಂದ್ರ ಮಂಡಳದವರು ಸಿದ್ಧರಾಗಿರುವರೆಂದು ಈ ಮೊದಲು ಪ್ರಸಿದ್ಧವಾಗಿತ್ತು. ಆದರೆ ಮುಂಬಯಿ ತಾಜಮಹಾಲ ಹೊಟೆಲಿನಲ್ಲಿ ಕೂಡಿದ್ದ ನರೇಂದ್ರ ಮಂಡಳದ ಸ್ಥಾಯಿ ಸಮಿತಿಯ ಸಭೆಯಲ್ಲಿ ಈ ಬಗ್ಗೆ ವಿಚಾರ ಮಾಡಿ, ಘಟನೆಯನ್ನು ಸಿದ್ಧಪಡಿಸುವ ಕೊನೆಯ ಮೆಟ್ಟಲಿನಲ್ಲಿ ಮಾತ್ರ ಭಾಗ ವಹಿಸಬೇಕೆಂದು ನಿರ್ಣಯಿಸಿದರೆಂದು ತಿಳಿಯುತ್ತದೆ. ಸ್ಥಾಯೀ ಸಮಿತಿಯ ಈ ಧೋರಣವನ್ನು ನಿಷೇಧಿಸಲು ಬಿಕಾನೇರದ ಮಹಾರಾಜರು ಸಭಾತ್ಯಾಗ ಮಾಡಿದರೆಂದು ತಿಳಿಯುತ್ತದೆ. ಬಿಕಾನೇರ, ಬಡೋದೆ, ಜಯಪುರ, ಮೊದಲಾದ ನರೇಂದ್ರರು ಈಗಿನಿಂದಲೆ ಘಟನಾ ಸಮಿತಿಯಲ್ಲಿ ಭಾಗ ವಹಿಸಬೇಕೆಂದು ಅಭಿಪ್ರಾಯಪಡುತ್ತಾರೆ. ಆದರೆ ಇನ್ನು ಅನೇಕರು ಕೊನೆಯ ಮೆಟ್ಟಲಿನಲ್ಲಿಯೆ ಭಾಗವಹಿಸುವೆವೆಂದು ಪ್ರತಿಪಾದಿಸುತ್ತಿದ್ದು ಅದರಂತೆ ನಿರ್ಣಯವನ್ನೂ ಕೂಡ ಮಾಡಿಬಿಟ್ಟಿರುವರು. ಇದು ಸಂಕುಚಿತ ಧೋರಣವೆಂದು ಬೇರೆ ಹೇಳಬೇಕಿಲ್ಲ. ಘಟನಾ ಸಮಿತಿಯ ಎಲ್ಲ ಕಾರ್ಯಕಲಾಪಗಳಲ್ಲಿ ಭಾಗ ವಹಿಸುವದು ಸಂಸ್ಥಾನಿಕರ ಕರ್ತವ್ಯ. ಅದರಿಂದಲೆ ಸಂಸ್ಥಾನಗಳ ಸಮಸ್ಯೆಯ ಪರಿಹಾರ ಮಾರ್ಗ ಸುಗಮವಾಗುವದು. ಆದುದರಿಂದ ನರೇಂದ್ರರು ಇಂತು ಈ ಕಾಲಕ್ಕೆ ಸಂಕುಚಿತ ಧೋರಣ ವಹಿಸಿದರೆ, ಈ ಸ್ಥಾಯೀ ಸಮಿತಿಯ ಕಾಲಕ್ಕೆ ತೋರಿಬಂದ ಭಿನ್ನಾಭಿಪ್ರಾಯ ಮತ್ತಷ್ಟು ಹೆಚ್ಚಿ ನರೇಂದ್ರರಲ್ಲಿ ಒಂದು ಬಗೆಯ ಒಡಕು ಉಂಟಾದಂತಾಗುವದು. ಆದರಿಂದ ಯಾವ ಹಿತವೂ ಸಾಧ್ಯವಾಗಲಾರದು. ಆದುದರಿಂದ ನರೇಂದ್ರ ಮಂಡಳದವರು ತಮ್ಮ ಈ ಗೊತ್ತುವಳಿಯ ಬಗ್ಗೆ ಪುನರ್ವಿಚಾರ ಮಾಡಿ ಈಗಿನಿಂದಲೆ ಘಟನಾ ಸಮಿತಿಯಲ್ಲಿ ಭಾಗ ವಹಿಸುವ ನಿರ್ಧಾರ ಕೈಕೊಳ್ಳಬೇಕೆಂದು ಅಗ್ರಹಪಡಿಸುತ್ತೇವೆ.

ಮೈಸೂರು ಸತ್ಯಾಗ್ರಹ

ಬರುವ ಮೇ ೧ ನೇ ತಾರೀಕಿನಿಂದ ಸತ್ಯಾಗ್ರಹವನ್ನು ಪ್ರಾರಂಭಿಸಬೇಕೆಂದು ಮೈಸೂರು ಕಾಂಗ್ರೆಸ್ಸು ಬೌರಿಂಗಪೇಟೆದಲ್ಲಿ ಸಭೆ ಸೇರಿ ನಿರ್ಣಯಿಸಿದೆ. ಮೈಸೂರು ಕಾಂಗ್ರೆಸ್ಸು ಮಹಾರಾಜರ ನೇತೃತ್ವದಲ್ಲಿ ಜವಾಬ್ದಾರ ರಾಜ್ಯ ಸ್ಥಾಪನೆಗಾಗಿ ಹೋರಾಡುತ್ತಿದೆ. ಕಾಂಗ್ರೆಸ್ಸೇತರರನ್ನೊಳಗೊಂಡು ಎರಡೂ ಶಾಸನಸಭೆಗಳ ಬಹುಸಂಖ್ಯಾಕ ಸದಸ್ಯರು ಈ ಬಗ್ಗೆ ಮಹಾರಾಜರಿಗೆ ಮನವಿ ಕಳಿಸಿರುವರು. ಆದರೆ ಮಹಾರಾಜಾ ಸರಕಾರದವರು ಅತ್ತ ಗಮನಿಸಿರುವದಿಲ್ಲ. ಹೊಸ ಸುಧಾರಣೆಗಳ ಕರಡು ಸಿದ್ಧಪಡಿಸಲು ಮಹಾರಾಜರು ದಿವಾಣ ಸಾಹೇಬರಿಗೆ ಅಪ್ಪಣೆ ವಿಧಿಸಿರುವದು ನಿಜ. ಆದರೆ ಅದರಲ್ಲಿ ಜವಾಬ್ದಾರ ರಾಜ್ಯ ಪದ್ಧತಿಯ ಉಲ್ಲೇಖ ಕೂಡ ಇಲ್ಲ– ಎಂದ ಬಳಿಕ ಇದರಿಂದ ಸಂಸ್ಥಾನ ಪ್ರಜೆಗಳೆಂತು ಸಮಾಧಾನ ಹೊಂದಬೇಕು? ಸಣ್ಣ ಸಣ್ಣ ದೇಶೀಯ ಸಂಸ್ಥಾನಗಳು ಕೂಡ ಪ್ರಜೆಗಳಿಗೆ ಜವಾಬ್ದಾರ ರಾಜ್ಯ ಕೊಡಲು ಹವಣಿಸುತ್ತಿವೆ. ಆದರೆ ಮೈಸೂರಿನಂಥ ಪ್ರಗತಿಪರವೆಂದು ಹೇಳಿಕೊಳ್ಳುವ ಸಂಸ್ಥಾನದಲ್ಲಿ ಜವಾಬ್ದಾರ ರಾಜ್ಯದ ಸುಳಿವೆ ಇಲ್ಲವೆಂಬದು ನಿಜವಾಗಿ ಶೋಚನೀಯವಾಗಿದೆ. ಹಿಂದೆ ಏನೇ ಪರಿಸ್ಥಿತಿ ಇದ್ದರೂ ಈಗ ಮಹಾರಾಜಾ ಸರಕಾರದವರು ಕೂಡಲೆ ಜವಾಬ್ದಾರ ರಾಜ್ಯದ ಸ್ಪಷ್ಟ ಘೋಷಣೆ ಮಾಡಿ ಘಟನೆಯನ್ನು ಸಿದ್ಧಪಡಿಸಲು ಸಮಿತಿಯೊಂದನ್ನು ನೇಮಿಸಬೇಕು. ಅಂದರೆ ಮೇ ೧ ಕ್ಕೆ ಸುರುವಾಗುವ ಸತ್ಯಾಗ್ರಹ ಅಲ್ಲಿಯೆ ಕರಗಿ ಹೋಗಬಹುದು. ಇದರಿಂದಾಗಬಹುದಾದ ಅನವಶ್ಯಕ ಪ್ರಜಾಪೀಡೆ, ಧನ ಹಾನಿ ಮುಂತಾದ್ದೆಲ್ಲ ನಿಂತು ಹೋಗುವದು. ಪ್ರಜೆಗಳಿಗೆ ತಮ್ಮ ರಾಜ್ಯ ಸಿಕ್ಕುವುದೆಂಬ ಉತ್ಸಾಹ ತುಂಬಿ ತುಳುಕುವದು. ಸದ್ಯದ ಅಸಂತೋಷವೂ ಇಲ್ಲದಂತಾಗುವದು ಯುದ್ಧೋತ್ತರ ಪುನರ್ರಚನೆಯ ಕಾಲದಲ್ಲಿ ಅಂತಃಕಲಹವನ್ನು ಆದಷ್ಟು ಬಗೆಹರಿಸುವದು ಜಾಣತನವಲ್ಲವೆ?

ಮಹಾತ್ಮರೊಡನೆ ವಾಯಿಸರಾಯರ ಮಾತುಕತೆ

ಜಿನ್ನಾರ ಕಪಿಮುಷ್ಟಿ ಸಡಿಲುವ ಲಕ್ಷಣವಿಲ್ಲ
ನರೇಂದ್ರರ ಸಂಧಿಸಾಧಕ ವೃತ್ತಿ

ಹೊಸ ವಾಯಿಸರಾಯ ಲಾರ್ಡ ಲುಯಿ ಮೌಂಟ ಬ್ಯಾಟನ್ನರ ಅಧಿಕಾರಾರೋಹಣವಾಗಿ ಒಂದು ವಾರದೊಳಗೆ ಹಿಂದೀ ರಾಜಕೀಯ ರಥದ ಚಕ್ರಗಳು ರಭಸದಿಂದ ತಿರುಗಲಾರಂಭಿಸಿವೆ. ಗಾಂಧೀಜಿಯವರು ದಿಲ್ಲಿಗೆ ತಾ ೩೧ ಕ್ಕೆ ತಲುಪಿದರು. ಕಾಂಗ್ರೆಸ್ ಕಾರ್ಯ ಸಮಿತಿಯ ಅನೇಕ ಸದಸ್ಯರೂ ದಿಲ್ಲಿಯಲ್ಲಿಯೇ ಇರುವರು. ಮುಸ್ಲಿಂ ಲೀಗ ಅಧ್ಯಕ್ಷ ಜಿನ್ನಾಸಾಹೇಬರೂ ಇಷ್ಟರಲ್ಲಿ ದಿಲ್ಲಿಗೆ ತಲುಪುವರು. ಅವರ ಕಾರ್ಯ ಸಮಿತಿಯಾದರೂ ಬೇಕಾದ ಕ್ಷಣ ಕೂಡಲು ದಿಲ್ಲಿಯಲ್ಲಿ ಸಿದ್ಧವಾಗಿರುವದು.

ಈ ಹೊಸ ವಾಯಿಸರಾಯರು ಸ್ವಾಭಾವಿಕವಾಗಿ "ಹಿಂದುಸ್ತಾನದಲ್ಲಿ ಅತಿ ದೊಡ್ಡ ವ್ಯಕ್ತಿ" ಎನಿಸಿಕೊಂಡ ಗಾಂಧೀಜಿಯನ್ನೇ ಮೊದಲು ಕಂಡು ಮಾತುಕತೆ ನಡೆಸತೊಡಗಿದ್ದಾರೆ. ಈಗಾಗಲೆ ವಾಯಿಸರಾಯ—ಮಹಾತ್ಮಾ ಭೆಟ್ಟಿಗಳು ಮೂರುಬಾರಿ ಆಗಿ ಹೋಗಿವೆ. ಕಾಂಗ್ರೆಸ್ ಕಾರ್ಯ ಸಮಿತಿಯ ಸದಸ್ಯರಿಗೆ ಗಾಂಧೀಜಿ ತಮ್ಮ ವಾಯಿಸರಾಯರ ನಡುವಿನ ಸಂಭಾಷಣೆಗಳ ವರದಿಯನ್ನೊಪ್ಪಿಸುತ್ತಲೆ ಇರುವರೆಂಬ ಮಾತು ಈಗಾಗಲೆ ನಡೆಯುತ್ತಿರುವ ಅನೌಪಚಾರಿಕ ಸಭೆಗಳಿಂದ ವ್ಯಕ್ತವಾಗುವದು. ಅದರೆ ಈ ಸಂಭಾಷಣೆಗಳಲ್ಲಿ ಜಾಣಾಕ್ಷರಾದ ವಾಯಿಸರಾಯರು ಒಳ್ಳೇ ಎಚ್ಚರಿಕೆಯಿಂದ ವರ್ತಿಸುತ್ತಿದ್ದಾರೆಂದು ತೋರುತ್ತದೆ. ಗಾಂಧೀಜಿಯೊಡನೆ ಅದ ಮೊದಲನೆ ಅಭೆಟ್ಟಿಯ ಸಂಬಂಧದಲ್ಲಿ ವಾಯಿಸರಾಯರು ಹೊರಡಿಸಿದ ಸಂಕ್ಷಿಪ್ತ ಪ್ರಕಟನೆಯಿಂದ ಅವರು ಈಗಲೆ ಯಾವ ವಿಧದಲ್ಲಿಯೂ ವಾಗ್ಬದ್ಧರಾಗಲು ಸಿದ್ಧರಿಲ್ಲವೆಂದು ನಿಚ್ಚಳವಾಗಿ ಗೊತ್ತಾಗುವದು. ಹಿಂದೀ ರಾಜಕಾರಣದ ಜಟಿಲ ರೂಪ ಅವರಿಗೆ ಚನ್ನಾಗಿ ಗೊತ್ತಿದೆ. ಅದುದರಿಂದ ಜಿನ್ನಾ ಸಾಹೇಬರೊಡನೆ ಭೆಟ್ಟಿಯಾಗ ಹೊರತು ಅವರು ತಮ್ಮ ಉಪಾಯುಗಳ ಯೋಜನೆಯನ್ನು ಹೊರಗೆಡಹಲಿಕ್ಕಿಲ್ಲ. ನಿಜವಾಗಿ ಗಾಂಧೀಜಿಯೊಡನೆ ನಡೆದ ಸಂಭಾಷಣೆಗಳಾದರೂ ಇನ್ನೂ ಪ್ರಾಥಮಿಕ ಭೆಟ್ಟಿವನ್ನು ಮಿಕ್ಕಿ ಹೋಗಿಲ್ಲವೆಂದು ಟಾಯಿಮ್ಸ ಸುದ್ದಿಗಾರನು ಬರೆಯುತ್ತಾನೆ. ಘಟನಾತ್ಮಕ ಅಥವಾ ಜಾತೀಯ ಪ್ರಶ್ನೆಯ ಚರ್ಚೆ ಇನ್ನೂ ಪ್ರಾರಂಭವೇ ಆಗಿಲ್ಲವಂತೆ. ಅದುದರಿಂದ ಗಾಂಧೀಜಿಯವರು ನಾಳೆ ಶುಕ್ರವಾರ (ತಾ ೪) ಬಿಹಾರಕ್ಕೆ ಮರಳುವರೆಂದು ಎಣಿಸಲ್ಪಟ್ಟದ್ದು ಸುಳ್ಳಾಗಿ ಇನ್ನೂ ಕೆಲ ದಿನ ದಿಲ್ಲಿಯಲ್ಲೆ ಉಳಿದುಕೊಳ್ಳುವ ಪ್ರಸಂಗ ಅವರಿಗೆ ಬರಬಹುದೆಂದು ಅನುಮಾನಿಸಲಾಗಿದೆ. ಗಾಂಧೀ—ವಾಯಿಸರಾಯ ಸಂಭಾಷಣೆಯ ಬಗ್ಗೆ ಏನೂ ಅಧಿಕೃತವಾಗಿ ತಿಳಿದು ಬಂದಿಲ್ಲ. ಗಾಂಧೀಜಿ ಕೊಟ್ಟ ಒಂದೇ ಒಂದು ಸೂಚನೆ ಅಷ್ಟು ಮಹತ್ವದ್ದಲ್ಲ: ವಾಯಿಸರಾಯರು ತಾವು ಹಿಂದುಸ್ತಾನದ ಕೊನೆಯ ವಾಯಿಸರಾಯರಾಗುವದಾಗಿ ಗಾಂಧೀಜಿಗೆ ಹೇಳಿದರು. ಅದರಲ್ಲಿ ಗಾಂಧೀಜಿಗೆ ಪೂರ್ಣ ವಿಶ್ವಾಸವಿದೆ. ಮೌಂಟಬ್ಯಾಟನ್ನರಿಗೆ ಇಲ್ಲಿ ಬರುವ ಇಚ್ಛೆ ಇದ್ದಿಲ್ಲ. ಆದರೂ ಸೇವಾಬುದ್ಧಿಯಿಂದ ಅವರು ಬಂದರು. ಇದರಲ್ಲಿ ರಾಜಕೀಯ ಮಹತ್ವದ ಹೊಸ ಸುದ್ದಿಯೇನೂ ಇಲ್ಲ. ಅಂತೂ ಜಿನ್ನಾ—ವಾಯಿಸರಾಯ ಭೆಟ್ಟಿಯಾದ ನಂತರ ಮೌಂಟ ಬ್ಯಾಟನ್ನರು ಪುನಃ ಗಾಂಧೀಜಿಯನ್ನು ಕರೆಸಿಕೊಳ್ಳಬಹುದು. ಆ ನಡುವೆ ಮಹಾತ್ಮರು ಕಾರ್ಯಸಮಿತಿಯೊಡನೆ ಮಂತ್ರಾಲೋಚನೆಗಾಗಿ ದಿಲ್ಲಿಯಲ್ಲಿ ಉಳಿಯಬಹುದುದೆಂದು ಸದ್ಯದ ಲಕ್ಷಣಗಳಿಂದ ಊಹಿಸಬಹುದು.

ಜಿನ್ನಾರ ಪಲ್ಲವಿ

ಮೌಂಟಬ್ಯಾಟನ್ನರು ಎಲ್ಲ ಪ್ರಮುಖ ಹಿಂದೀ ಅಂಗಡಗಳಿಗೆ ಸಮ್ಮತವಾದ ಒಂದು ಉಪಾಯವನ್ನು ಹುಡುಕಿ ತೆಗೆಯಲು ಯತ್ನಿಸುವರೆಂದು ನಿಂಡಿತವಾಗಿ ನಂಬಬಹುದು. ಆದರೆ ಇಂಥ ಒಂದು ಉಪಾಯ ರೂಪುಗೊಳ್ಳುವ ಆಸೆ ಮಾತ್ರ ಇನ್ನೂ ಉದಿಸಿಲ್ಲ. ಜಿನ್ನಾ ಸಾಹೇಬರು ಮುಂಬಯಿಯಲ್ಲಿ ಮತ್ತೊಂದು ರಾಜಕೀಯ ಭಾಷಣ ಮಾಡಿದರು. ಮುಸ್ಲಿಂ ವ್ಯಾಪಾರಿ ಸಂಘದಲ್ಲಿ ಅವರು ಮಾಡಿದ ಈ ಭಾಷಣ ಲೀಗನ್ನು ಇತರ ಪಕ್ಷಗಳಿಗೆ ಹತ್ತಿರ ತರುವಂಥದೇನೂ ಇರಲಿಲ್ಲ. ಅದರಲ್ಲಿ ರಾಜಕೀಯ ಕೆಸರೆರಚುವ ಆಟದ ಪರಿಣಾಮ ಕಡಿಮೆಯಾಗಿತ್ತೆಂಬುದು ನಿಜ. "ನಾವು ಸಂಧಿ ಮಾಡಿಕೊಳ್ಳೋಣ" ಎಂದು ಅವರು ಕರೆಕೊಟ್ಟದ್ದೂ ಸುಳ್ಳಲ್ಲ. ಆದರೆ ಅವರ ಸಂಧಿ ಮಾತ್ರ ಅವರ ಕರಾರಿನಂತೆಯೆ ಆಗಬೇಕಾದುದು. "ಹಿಂದುಸ್ತಾನವನ್ನು ಅಖಂಡವಾಗಿಟ್ಟು ಎಲ್ಲವನ್ನೂ ಹಾಳು ಮಾಡಿಕೊಳ್ಳುವದಕಿಂತ ಪಾಲುಮಾಡಿಕೊಂಡು ಸುಖ ಸಮೃದ್ಧಿ ಪಡೆಯುವದು ಲೇಸು," ಎಂದು ಒಂದು ವಾಕ್ಯದಲ್ಲಿ ಆ ಇಡಿ ಭಾಷಣವನ್ನು ಸಂಗ್ರಹಿಸಬಹುದು. ಇದು ಉಪದೇಶಪರ, ವಿವೇಕ ಬೋಧಕವೆಂದು ಕಂಡರೂ ಅದರ ಇಂಗಿತಾರ್ಥವಿಷ್ಟೆ: ಹಿಂದುಸ್ತಾನವನ್ನು ವಿಭಜಿಸದಿದ್ದರೆ, ಹಿಂಸಾಚಾರದಿಂದ ಐಕ್ಯವನ್ನು ವಿರೋಧಿಸಲಾಗುವದು— ಎಂದು ನಿಜವಾಗಿ ಕಳೆದ ವರ್ಷ ಜುಲೈಯಲ್ಲಿ ತಾವು ಮುಂಬಯಿಯಲ್ಲಿ ಕೈಕೊಂಡ ಪ್ರತಿಬಂಧಕ ಧೋರಣೆಯ ಅಪೂರ್ವ ಯಶಸ್ಸನ್ನು ಮನಗಂಡು ಅವರು ಪೂರ್ಣ ಸಾರ್ವಭೌಮ ಪಾಕಿಸ್ತಾನವನ್ನು ಕಸಿದುಕೊಳ್ಳುವ ಪ್ರಬಲ ಪ್ರಯತ್ನ ಮಾಡಿ ನೋಡಲು ನಿರ್ಧರಿಸಿದಂತೆ ತೋರುತ್ತದೆ. ಅವರ ಅನೇಕ ಸಹಯೋಗಿಗಳು ಇನ್ನೂ "ದುರ್ಬಲ ಕೇಂದ್ರ" ಕ್ಕೆ ಅನುಮತಿ ಕೊಡುವ ಮನೋವೃತ್ತಿಯನ್ನು ತೋರಿಸುತ್ತಿದ್ದರೂ ಅವರು ಮಾತ್ರ ಈಗ ಪಾಕಿಸ್ತಾನವನ್ನು ನಿಜವಾಗಿ ಇಚ್ಛಿಸುವಂತಿದೆ. ಒತ್ತಾಯದ ಗುಂಪೀಕರಣಕ್ಕೆ ಕಾಂಗ್ರೆಸ್ಸು ಯಾವುದೇ ಕರಾರಿಲ್ಲದೆ ಒಪ್ಪಿದರೆ ಮಾತ್ರ ಅವರು "ದುರ್ಬಲ ಕೇಂದ್ರ"ಕ್ಕಾದರೂ ಒಪ್ಪುವರೋ ಏನೊ!

ಕಾಂಗ್ರೆಸ್ಸಿನ ವಿಚಾರ

ಸರ್ವ ಸಮ್ಮತವಾದ ಉಪಾಯವೊಂದನ್ನು ರೂಪಿಸಿಕೊಳ್ಳಲು ಕಾಂಗ್ರೆಸ್ಸಿಗೆ ಅತ್ಯಂತ ಆತುರವುಂಟೆಂಬುದು ಸತ್ಯ. ಹಾಗೆ ಕೇಳಿದರೆ ಜಿನ್ನಾ ಸಾಹೇಬರ ಬತ್ತಳಿಕೆಯಲ್ಲಿರುವ ಅಸ್ತ್ರಗಳಲ್ಲೊಂದೆಂದರೆ ಕಾಂಗ್ರೆಸಿನ ನ್ಯಾಯಪ್ರಿಯತೆಯೆನ್ನಬೇಕಾಗುತ್ತದೆ. ಆದರೆ ಒಪ್ಪಂದದ ಇಚ್ಛೆಯಷ್ಟೇ ಇದ್ದರೂ ಜಿನ್ನಾರು ಬೇಡುವ ಗುಂಪೀಕರಣಕ್ಕೆ—ಅಂದರೆ ಯಾವದೇ ಪ್ರಾಂತವನ್ನು ಅದರ ಇಚ್ಛೆಗೆ ವಿರುದ್ಧವಾಗಿ ಗುಂಪಿನಲ್ಲಿ ಸೇರಿಸಲು-ಅದು ಒಪ್ಪುವ ಸಂಭವವಿಲ್ಲ. ವಿಭಕ್ತ ಹಿಂದುಸ್ತಾನವೇ ಅವಶ್ಯಂಕ ಶ್ರೇಯಸ್ಕರವೆಂದು ಅದು ಭಾವಿಸೀತು. ಕೆಲದಿನಗಳ ಹಿಂದೆ ಲಂಡನ್ನಿನಿಂದ ಒಂದು ಕೌತುಕದ ವಾರ್ತೆ ಹೊರಬಿತ್ತು. ಹಿಂದುಸ್ತಾನವನ್ನು ಒಡನೆ ಕಾಂಗ್ರೆಸ್ ನಾಯಕತ್ವದಲ್ಲಿ ಸ್ವತಂತ್ರವಾಗಿ ಮಾಡಿದರೆ ಮುಸ್ಲಿಮರೊಡನೆಯೂ ನರೇಂದ್ರರೊಡನೆಯೂ ಒಪ್ಪಂದ ಮಾಡಿಕೊಳ್ಳಲು ಮಾತ್ರವಲ್ಲ, ಹಿಂದುಸ್ತಾನವನ್ನು ಬ್ರಿಟಿಶ ಸಾಮ್ರಾಜ್ಯದಲ್ಲಿ ಉಳಿಸಿಕೊಳ್ಳಲು ತಾವು ಸಿದ್ಧರಿರುವದಾಗಿ ಜವಾಹರಲಾಲರು ಬ್ರಿಟಿಶ ಸರಕಾರಕ್ಕೆ ತಿಳಿಸಿದ್ದರಂತೆ. ಅದರಂತೆ ಹೊಸ ವಾಯಿಸರಾಯರಿಗೆ ಅವಶ್ಯಕ ಅಧಿಕಾರ ಕೊಡಲಾಗಿತ್ತಂತೆ. ಆದರೆ ಜವಾಹರಲಾಲರು ಇದನ್ನು ಶುದ್ಧ ಬುರುಡೆಯೆಂದು ಸಾರಿದ್ದರಿಂದ ಅದಕ್ಕೇನೂ ಮಹತ್ವವಿಲ್ಲ. ಬದಲಿಗೆ ಕಾಂಗ್ರೆಸ್ಸು ಲೀಗ್ ಮತ್ತು ನರೇಂದ್ರ-ಸರಕಾರ ಅಸಹಕಾರಗಳನ್ನು ಗಮನಿಸದೆ ಘಟನಾ ಸಮಿತಿಯ ಕಾರ್ಯವನ್ನು ಮುಂದೊತ್ತಲು ಅನುವಾಗಿದೆ. ಅದು ಸಿದ್ಧಗೊಳಿಸಿದ ಘಟನೆ ಲೀಗ್ ಬಹಿಷ್ಕಾರ ಫೆಬ್ರುವರಿ ೨೦ ರ ಹೇಳಿಕೆ ಮೊದಲಾದ ಹೊಸ ಘಟನೆಗಳ ದೃಷ್ಟಿಯಿಂದ ವ್ಯರ್ಥವಾಗುವುದಲ್ಲವೆ ? ಎಂಬ ಪ್ರಶ್ನೆಯಿಂದ ಅದು ಚಿಂತಿತವಾಗಿಲ್ಲ. ಭಾರತ ಸ್ವತಂತ್ರವಾಗುವದಂತೂ ನಿಶ್ಚಿತ. ಅಂದ ಮೇಲೆ ಅದಕ್ಕೆ ಕೊನೆಯ ಪಕ್ಷ ಕಾಂಗ್ರೆಸ್ ಪ್ರಭಾವವನ್ನೊಪ್ಪುವ ಪ್ರಾಂತಗಳಿಗೆ—ಒಂದು ಘಟನೆ ಬೇಕೇಬೇಕು. ಘಟನಾಸಮಿತಿ ಸಿದ್ಧಗೊಳಿಸಿದ ಘಟನೆಗೆ ಎಲ್ಲ ಪ್ರಾಂತಗಳು ಸಮ್ಮತಿಸಿದರೆ ಲೇಸೇ ಆಯಿತು. ಒಂದು ವೇಳೆ ಇದು ಅಸಾಧ್ಯವೆಂದ್ಬು ಸಿದ್ಧವಾದರೆ "ಹಿಂದುಸ್ತಾನ"ಕ್ಕಷ್ಟೇ ಅದರೂ ಅದು ಅನ್ವಯಿಸುವದು.

ಹಿಂದುಸ್ತಾನವನ್ನು ವಿಭಜಿಸುವದೇ ಅನಿವಾರ್ಯವಾಗಿ ಬಂದರೆ ಹಾಗೆಯೆ ಆಗಲಿ. ಆದರೆ ಪಾಕಿಸ್ತಾನಕ್ಕಾಗಿ ಬೇಡಲಾದ ಪ್ರಾಂತಗಳಲ್ಲಿರುವ ಅರ್ಧಕ್ಕರ್ಧದಷ್ಟು ಪಾಕಿಸ್ತಾನ ವಿರೋಧಿ ಜನರನ್ನು ಒತ್ತಾಯದಿಂದ ಅದರಲ್ಲಿ ತುರುಕಗೊಡಲು ಕಾಂಗ್ರೆಸ್ಸು ಸರ್ವಥಾ ಒಪ್ಪಲಾರದು. ಅದು ಪಾಲುಬೇಡುವವರನ್ನು ಅವರ ಅಸ್ತ್ರದಿಂದಲೇ ಎದುರಿಸುವದು. ಬಂಗಾಲ ಪಂಜಾಬ ವಿಭಜನೆಯ ಚಳವಳಿ ಇದನ್ನೆ ಸೂಚಿಸುವದು. ಜಿನ್ನಾರಿಗೆ ಆಗಾದರೂ ಜ್ಞಾನೋದಯವಾಗುವದೋ ನೋಡುವದಿದೆ.

ನರೇಂದ್ರರಲ್ಲಿ ಒಡಕು

ಇತ್ತ ಬ್ರಿಟಿಶ ಹಿಂದುಸ್ತಾನದಲ್ಲಿರುವ ಗೊಂದಲದ ಪ್ರಯೋಜನವನ್ನು ಪಡೆದು ತಮ್ಮ ಬೇಳೆ ಬೇಯಿಸಿಕೊಳ್ಳುವ ಹವ್ಯಾಸ ನರೇಂದ್ರರಿಗೆ ಹಿಡಿದಿದೆ. ಮಾರ್ಚ ಕೊನೆಯಲ್ಲಿ ನರೇಂದ್ರ ಮಂಡಲದ ಸಭೆ ಮುಂಬಯಿಯಲ್ಲಿ ಸೇರಿದಾಗ ಈ ಪ್ರವೃತ್ತಿ ವಿಶೇಷವಾಗಿ ಬೆಳಕಿಗೆ ಬಂತು. ಯಾವದೊಂದು ಪಕ್ಷವಹಿಸುವ ದಿಟ್ಟತನ ನರೇಂದ್ರರಲ್ಲಿಲ್ಲ. ಅದರೆ ಕಾಲಯಾಪನೆ ಮಾಡುತ್ತ, ಹಿಂದೀ ರಾಜಕಾರಣದ ನಿಶ್ಚಿತ ಪ್ರವಾಹ ಗತಿ ಗೊತ್ತಾದ ನಂತರ ಅದನ್ನು ಅದಷ್ಟು ಸ್ವಪ್ರಯೋಜನಕ್ಕೆ ಬಳಸಿಕೊಳ್ಳಬೇಕೆಂದೂ ಅವರೆಗಿನ ಅನಿಶ್ಚಿತತೆಯನ್ನೂ ತಮಗೆ ಬೇಕಾದಂತೆ ಉಪಯೋಗಿಸಿಕೊಳ್ಳಬೇಕೆಂದೂ ಅವರ ಹವಣು. ಈ ಗಾಳಿ ಕೋಳಿ ಧೋರಣಕ್ಕನುಸಾರವಾಗಿ, ಘಟನಾ ಸಮಿತಿಯಲ್ಲಿ ಸೇರುವದನ್ನು ಈಗಲೇ ನಿರ್ಧರಿಸದೆ ಮುಂದೆ ಗುಂಪುಗಳ ಘಟನೆ ಮುಗಿದು ಒಕ್ಕೂಟ ಘಟನೆಯ ಸಮಯ ಬಂದಾಗಲೇ ಸಂಸ್ಥಾನಗಳು ಸೇರಬೇಕೆಂದು ಭೋಪಾಲ ನವಾಬರ ಅಭಿಮತ. ಅಷ್ಟರವರೆಗೆ ಹಿಂದುಸ್ತಾನದ ಐಕ್ಯದಲ್ಲಿ ದಾಯ್ಯಾತಿನ ವಿಶ್ವಾಸವನ್ನು ಆಡುತ್ತ ಲೀಗಿನೊಡನೆ ಒಳಸಂಚು ನಡೆಸುವದು ಅವರ ಉದ್ದೇಶವೆಂದು ಸಂಶಯಪಡಲಾಗಿದೆ. ೧೯೪೮ರಲ್ಲಿ ಬ್ರಿಟಿಶರು ಹಿಂದುಸ್ತಾನವನ್ನು ಬಿಟ್ಟು ಹೋಗುವಾಗ ಬ್ರಿಟಿಶ ಹಿಂದುಸ್ತಾನದಲ್ಲಿ ಅರಾಜಕತೆಯುಂಟಾಗುವದೆಂಬ ಮತ್ತು ಅದರಿಂದ ತಮ್ಮ ನಿರಂಕುಶ ಪ್ರಭುತ್ವ ಮತ್ತಷ್ಟು ದೃಢವಾದೀತೆಂಬ ಆಶೆಯಿಂದ ನರೇಂದ್ರ ಮಂಡಲದಲ್ಲಿ ಬಹುಸಂಖ್ಯಾಕರು ಭೋಪಾಲ ನವಾಬರ ಪಕ್ಷ ಕಟ್ಟಿದರೂ ಈಗಾಗಲೇ ಒಡೆದಿದ್ದ ಅವರ ಬಣ ಮುಂಬಯಿ ಸಭೆಯಲ್ಲಿ ಇನ್ನಷ್ಟು ಒಡೆದು ನವಾಬ ಸಾಹೇಬರ ವಿರೋಧಿಗಳ ಸಂಖ್ಯೆ ಬೆಳೆಯಿತು. ಬಿಕಾನೇರ ಮಹಾರಾಜರು ಈಗಲೆ ಘಟನಾ ಸಮಿತಿಯಲ್ಲಿ ಸಂಸ್ಥಾನಗಳು ಸೇರಬೇಕೆಂದು ಹೇಳಿ ಸಭಾತ್ಯಾಗ ಮಾಡಿ ತಮ್ಮ ಭಾವನೆಯ ತೀವ್ರತೆಯನ್ನು ಪ್ರದರ್ಶಿಸಿದರು. ಪತಿಯಾಳಾ, ಜಯಪುರ ಮೊದಲಾದ ಅನೇಕ ನರೇಂದ್ರರು ಅವರ ಮತವನ್ನನುಸರಿಸಿ ಒಡನೆಯೆ ಘಟನಾ ಸಮಿತಿಯಲ್ಲಿ ಭಾಗವಹಿಸಬಹುದು. ಬರೋಡೆಯಂತೂ ಮೊದಲೆ ಆ ಹಾದಿಹಿಡಿದು ಮುಸ್ಲಿಂ ಬಹುಸಂಖ್ಯಾಕ ಪ್ರಾಂತಗಳಿಗೆ ಹೊಂದಿಕೊಂಡಿರುವ ಸಂಸ್ಥಾನಗಳ ಅಧಿಪತಿಗಳು ಲೀಗಿನೊಡನೆ ಚಿನ್ನಾಟವಾಡುವದರ ಗಂಡಾಂತರವನ್ನು ಸಹಜವಾಗಿ ಮನಗಂಡಿದ್ದಾರೆ. ಇತ್ತ ಸರ್ ಸಿ. ಪಿ. ರಾಮಸ್ವಾಮಿಯವರೂ ನರೇಂದ್ರ ಮಂಡಲದೊಡನೆ ಮಾಡಿಕೊಂಡಿದ್ದ ಅಲ್ಪಾಯು ಸಂಪರ್ಕವನ್ನು ತ್ಯಜಿಸಿ ೧೯೪೮ ರಲ್ಲಿ "ಸ್ವತಂತ್ರ ತಿರ್ವಾಂಕೂರು" ಸ್ಥಾಪಿಸುವ ಕನಸು ಕಾಣತೊಡಗಿದ್ದಾರೆ. ಇದರಿಂದ ನರೇಂದ್ರರ ಅಪಾಯಕಾರಿ ಶಕ್ತಿ ಕಡಿಮೆಯಾಗಿದೆ ಪ್ರಬಲ ಕೇಂದ್ರಬೇಕೆಂದು ಮೊನ್ನೆ ಮೊನ್ನೆ ಹೇಳಿದ ಸರ್ ಸಿ. ಪಿ. ಯವರು ಯಾವ ಉದ್ದೇಶದಿಂದ ಸ್ವತಂತ್ರ ತಿರ್ವಾಂಕೂರನ್ನು ಪ್ರತಿಪಾದಿಸ ತೊಡಗಿರುವರೋ ಅದು ದುರೂಹ್ಯ. ನರೇಂದ್ರ ಸ್ಥಾಯಿ ಸಮಿತಿ ನಿರುಪಾಯವಾಗಿ ಈಗ ಘಟನಾ ಸಮಿತಿಯಲ್ಲಿ ಸೇರುವ ಸಮಯವನ್ನು ಆಯಾ ಸಂಸ್ಥಾನಗಳ ನಿರ್ಣಯಕ್ಕೆ ಬಿಟ್ಟಿದೆ.

ಮುಂಬಯಿಯಲ್ಲಿ ವಸಂತೋತ್ಸವ

ಮುಂಬಯಿಯಲ್ಲಿ ಸಂಯುಕ್ತ ಕರ್ನಾಟಕ ಸಂಘದವರು ವಸಂತ ಸಾಹಿತ್ಯೋತ್ಸವವನ್ನು ಜರಗಿಸಲು ನಿರ್ಧರಿಸಿರುವರು. ರವಿವಾರ ಎಪ್ರಿಲ ೬ ಕ್ಕೆ ಸಂಜೆ ೫ ಗಂಟೆ ದಾದರದಲ್ಲಿ ವನಮಾಲಿ ಸಭಾಮಂದಿರದಲ್ಲಿ ಉತ್ಸವದ ಉದ್ಘಾಟನೆ ಸಮಾರಂಭ ಜರಗುವದು. ಮಾನ್ಯ ಮಂತ್ರಿ ಶ್ರೀ ಪಾಟೀಲ ಮಲ್ಲನಗೌಡರು ಅದರ ಪ್ರಾರಂಭೋತ್ಸವ ಜರಗಿಸುವರು. ಶ್ರೀ ಜಾಗಿರದಾರ ರಂಗಾಚಾರರು ಪ್ರಾಸ್ತಾವಿಕ ಭಾಷಣ ಮಾಡುವರು. ಶ್ರೀ ವಿ ಕೆ ಗೋಕಾಕರು 'ಜೀವನದಲ್ಲಿ ವ್ಯಕ್ತಿತ್ವ ವಿಕಾಸ' ಎಂಬ ವಿಷಯದ ಮೇಲೆ ಮಾತಾಡುವರು ಮನರಂಜನ ಕಾವ್ಯ ಪಠನ ಶ್ರೀ ಗೋದಾವರಿ ಕುಲಕರ್ಣಿ. ತಂತು ವಾದ್ಯ ಶ್ರೀ ಹೆಬ್ಬಾರ.

ರವಿವಾರ ೧೩ ಎಪ್ರಿಲ ಸಾಯಂಕಾಲ ೫ ಕ್ಕೆ ಗಿರಗಾವದಲ್ಲಿಯ ವಾಗಳೆ ಸಭಾ ಮಂದಿರದಲ್ಲಿ ಶ್ರೀ ಸ್ವಾದಿ ವಿಠ್ಠಲರಾಯರ ಅಧ್ಯಕ್ಷತೆಯಲ್ಲಿ ಶ್ರೀ ದಿನಕರ ದೇಸಾಯರು ಕರ್ನಾಟಕದ ಆರ್ಥಿಕ ವಿಕಾಸದ ಬಗ್ಗೆ ಮಾತಾಡುವರು. ಮನರಂಜನ ಶಕ್ತಿಪ್ರದರ್ಶನ ದಕ್ಷಿಣ ಕನ್ನಡ ವ್ಯಾಯಾಮ ಸಂಘ ವೀರಗಾನ ಮೊಗವೀರ ವ್ಯವಸ್ಥಾಪಕ ಮಂಡಳಿಯ ರಾತ್ರಿ ಶಾಲೆಯ ಮಕ್ಕಳು.

ರವಿವಾರ ೨೦ ನೆ ಎಪ್ರಿಲ ಸಾಯಂಕಾಲ ೫ ಗಂಟೆ ಮಾತುಂಗದಲ್ಲಿಯ ಪಾಲಕಾ ಕಾಲೇಜಿನ ಸಭಾ ಮಂದಿರದಲ್ಲಿ ಶ್ರೀ ಎನ್. ವಿ. ಎಸ್. ಮೂರ್ತಿಯವರ ಅಧ್ಯಕ್ಷತೆಯಲ್ಲಿ ಶ್ರೀ ಪಾಟೀಲ ಕಲ್ಲನಗೌಡರು ಪ್ರಭುತ್ವದ ಪ್ರಶ್ನೆ ಬಗ್ಗೆ ಮಾತಾಡುವರು— ಮನರಂಜನ— ಏಕಾಂಕ ದೃಶ್ಯ. ಶ್ರೀಮತಿ ಶಾಂತಾದೇವಿ ಮತ್ತು ಶ್ರೀ ಧೀರೇಂದ್ರ ಅಥಣಿ ಇವರು ನೃತ್ಯಭಾರತಿ ಕಲಾ ಮಂಡಲ.

ರವಿವಾರ ೨೭ ಎಪ್ರಿಲ ಸಂಜೆ ೫ ಕ್ಕೆ ಸುಂದರಾಬಾಯಿ ಸಭಾ ಮಂದಿರ ನ್ಯಾ. ಲೋಕೂರ ನಾರಾಯಣ ರಾಯರ ೬೧ ನೆಯ ಹುಟ್ಟುಹಬ್ಬ ಪ್ರಾಸ್ತಾವಿಕ ಭಾಷಣ ಶ್ರೀ ಜಾಗೀರದಾರ ರಂಗಾಚಾರ್ಯ. ಮಾನಪತ್ರ ಸಮರ್ಪಣೆ— ನ್ಯಾಯಮೂರ್ತಿಗಳ ಚರಿತ್ರ ಗ್ರಂಥದ ಪ್ರಕಟನೆ ಸಂಗೀತ ಶ್ರೀ. ಸುಂದರಮ್ಮ ರಾಘವಯ್ಯ ಶ್ರೀ ದೇಶಪಾಂಡೆ ಗುರುರಾಯರು.

ಬೆಂಗಳೂರಲ್ಲಿ ಜಾತೀಯ ಗಲಭೆ

೫ ಮರಣ—೬೩ ಜನರಿಗೆ ಗಾಯ

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಗೌರಿಂಗ ಪೇಟೆ ಅಧಿವೇಶನದಲ್ಲಿ ಸತ್ಯಾಗ್ರಹ ಗೊತ್ತುವಳಿ ಸ್ವೀಕರಿಸಲ್ಪಟ್ಟ ೪೮ ತಾಸಿನೊಳಗೆ ಬೆಂಗಳೂರು ನಗರದಲ್ಲಿ ಜಾತೀಯ ದಂಗೆ ಪ್ರಾರಂಭವಾದುದು ಕೇವಲ ಕಾಕತಾಲೀಯವೋ ಮತ್ತೇನಾದರೋ ಹೇಳ ಬರುವದಿಲ್ಲ. ಅರಳೇ ಪೇಟೆಯಲ್ಲಿ ಒಂದು ಹಿಂದೂ ಉತ್ಸವ ಮಸೀದೆಯ ಮುಂದೆ ವಾದ್ಯಘೋಷ ಸಹಿತವಾಗಿ ತಾ. ೩೧ ಕ್ಕೆ ಹೋಗಹೊರಟಾಗ ಉಂಟಾದ ತಿಕ್ಕಾಟ ಇದು ವರೆಗೆ ೫ ಮರಣ, ೬೩ ಜನರಿಗೆ ಗಾಯದಲ್ಲಿ ಪರಿಣಮಿಸಿದೆ. ಪರಿಸ್ಥಿತಿ ಇನ್ನೂ ಉದ್ರಿಕ್ತವಾಗಿಯೆ ಇದ್ದು ಇರಿತಗಳು ನಿಂತಿಲ್ಲ. ಮೆಜೆಸ್ಟಿಕದಿಂದ ವಿಶ್ವೇಶ್ವರಪುರದ ವರೆಗೆ ರಾತ್ರಿ ೯ ರಿಂದ ಮುಂಜಾನೆ ೫ ರ ವರೆಗೆ ಕರ್ಫ್ಯೂ ಹುಕುಮು ವಿಧಿಸಲ್ಪಟ್ಟಿದೆ. ಮೈಸೂರು ಕಾಲ್ದಳದ ಎರಡು ಪಡೆಗಳನ್ನು ನಗರಕ್ಕೆ ಕರೆಸಲಾಗಿದೆ.

ವಿವರಗಳು

ವಾಡಿಕೆಯಂತೆ ಅಣ್ಣಮ್ಮ ದೇವತೆ ಉತ್ಸವ ತಾ ೩೧ ಕ್ಕೆ ರಾತ್ರಿ ೧೧-೩೦ ಕ್ಕೆ ಹೊರಟು ಅರಳೇ ಪೇಟೆಯ ರಾಣಾಸಿಂಗ ಪೇಟೆಯ ಜಾಲಿ ಮಸೀದೆಯ ಬಳಿ ಬಂದಾಗ ಮೆರವಣಿಗೆ ವಾದ್ಯಘೋಷ ಸಹಿತ ಮಸೀದಿಯ ಮುಂದೆ ಸಾಗಬಾರದೆಂದು ಯಾರೋ ಒಬ್ಬರು ಆತಂಕ ಪಡಿಸಿದರಂತೆ. ಸ್ವಲ್ಪ ಮಾತಿಗೆ ಮಾತು ಹತ್ತಿದ ನಂತರ ಮೆರವಣಿಗೆ ಮಸೀದೆಯ ಹಿಂಭಾಗದ ರಸ್ತೆಯಲ್ಲಿ ಹೊರಟಿತು. ಆದರೆ ಜವರಪ್ಪನವರ ಮನೆಯ ಸಮೀಪದಲ್ಲಿ ದೇವರ ಪೂಜೆ ನಡೆದಿದ್ದಾಗ ಕಟುಕರ ಪೇಟೆಯ ಕಡೆಯಿಂದ ಅನೇಕರು ಆಯುಧಪಾಣಿಗಳಾಗಿ ಬಂದು ಉತ್ಸವದ ಪೆಟ್ರೋಮ್ಯಾಕ್ಸ ದೀಪ ಆರಿಸಿದರೆಂದೂ ಅದೇ ತಿಕ್ಕಾಟಕ್ಕೆ ಕಾರಣವಾಯಿತೆಂದೂ ಹೇಳಲಾಗಿದೆ. ದೇವರನ್ನು ಸುರಕ್ಷಿತವಾಗಿ ಪಾರು ಮಾಡಿದರೂ ಅದು ಮಾಯವಾಗಿದೆಯೆಂಬ ಸುದ್ದಿ ಹಬ್ಬಿದ್ದರಿಂದ ಉತ್ಸವದಲ್ಲಿದ್ದ ಜನರು ಮಸೀದೆಯ ಮುಂದೆ ನುಗ್ಗಿದರೆಂದೂ ಆಗ ಮಸೀದೆಯ ಮುಂದಿದ್ದ ಗುಂಪು ಅವರನ್ನು ತಡೆದುದರಿಂದ ಹೋರಾಟವಾದುದಲ್ಲದೆ ಕೆಲ ಜಟಕಾ ಗಾಡಿಗಳನ್ನು ಸುಟ್ಟು ಅಂಗಡಿಗಳನ್ನು ಲೂಟಿಮಾಡಲಾಗಿದೆಯೆಂದೂ ತಿಳಿಯುತ್ತದೆ. ಅಂದು ಮೆರವಣಿಗೆ ಮುಂದುವರಿಯಲಿಲ್ಲ. ಪೋಲೀಸ ಇನಸ್ಪೆಕ್ಟರ ಜನರಲ್ಲರೂ ಇತರ ಅಧಿಕಾರಿಗಳೂ ಬಂದು ಯೋಗ್ಯಕ್ರಮ ಕೈಕೊಂಡರು. ಅಂದು ಇಬ್ಬರು ಪೋಲೀಸ ಅಧಿಕಾರಿಗಳನ್ನೊಳಗೊಂಡು ೧೩ ಜನರಿಗೆ ಗಾಯವಾಗಿದೆಯೆಂದು ಸರಕಾರಿ ಪ್ರಕಟನೆ ಹೊರಟಿತು.

ಕಾರ್ಯಕಾರಿಕ ದಿವಾಣರಾದ ಡಾ. ರಾಯನ್ನರೂ ಗೃಹ ಮಂತ್ರಿಗಳೂ ಗಲಭೆ ಪ್ರದೇಶವನ್ನು ಸಂದರ್ಶಿಸಿದರು. ನಗರ ಸಭಾಧ್ಯಕ್ಷ ಶ್ರೀ ಖಲೀಲರೂ ನಗರ ಸಭಾ ಕಮೀಶನರ ಸಿಫಿ ಪಾರಾಶಾ ಅವರೂ ಬೇರೆ ಕೆಲ ಸದಸ್ಯರೂ ಪ್ರಕ್ಷುಬ್ಧ ಪ್ರದೇಶಕ್ಕೆ ಭೆಟ್ಟಿಕೊಟ್ಟು ಹೋದರು. ನಗರ ಸಭೆಯ ವಿಶೇಷ ಸಭೆಯೊಂದರಲ್ಲಿ ಪರಿಸ್ಥಿತಿಯನ್ನು ಹಿಡಿತಕ್ಕೆ ತರುವ ಬಗ್ಗೆ ಚರ್ಚೆಯಾಯಿತು.

ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಟಿ. ಭಾಷ್ಯಂ ಅವರು ಒಂದು ಹೇಳಿಕೆ ಹೊರಡಿಸಿ ಆಸ್ತಿಕರಾದ ಎಲ್ಲ ಜಾತಿಯ ಜನರೂ ದುರ್ಘಟನೆಯನ್ನು ತಡೆಯಲು ಮುಂದೆ ಬರಬೇಕೆಂದು ಸೂಚಿಸಿದ್ದಾರೆ.

ಪಂಜಾಬದಲ್ಲಿ ಸಂಕಷ್ಟಕ್ಕೀಡಾದವರಿಗೆ ಹಾಲು ಮತ್ತು ಮೆಟ್ಟುಗಳ ಕೊರತೆ ಬಹಳಿದೆ. ಅದುದರಿಂದ ಹೆಪ್ಪುಗಟ್ಟಿಸಿದ ಹಾಲು ಮತ್ತು ಮೆಟ್ಟುಗಳಿದ್ದ ವ್ಯಾಪಾರಸ್ಥರು ಕಳಿಸಿಕೊಡಬೇಕೆಂದು ಪರಿಹಾರ ಸಮಿತಿಯವರು ಬಿನ್ನವಿಸಿಕೊಂಡಿದ್ದಾರೆ.

ಅಂತರರಾಷ್ಟ್ರೀಯ

ಸೂಚನೆಗಳು ಮತ್ತು ನಿರಾಕರಣೆಗಳು

ಜರ್ಮನಿಯ ಭವಿತವ್ಯ ನಿರ್ಣಯಕ್ಕಾಗಿ ಮಾಸ್ಕೋದಲ್ಲಿ ಈಗ ಮೂರುವಾರಗಳಿಂದ ನಡೆಯುತ್ತಿರುವ ಚತುರ್ ರಾಷ್ಟ್ರ ವಿದೇಶ ಮಂತ್ರಿಗಳ ಸಭೆ ಇನ್ನೂ ಸೂಚನೆ-ಪ್ರತಿ ಸೂಚನೆ, ನಿರಾಕರಣೆ—ಪ್ರತಿ ನಿರಾಕರಣೆಗಳ ಅಂಕವನ್ನು ಮುಗಿಸಿ ಮುಂದೆ ಸಾಗಿಲ್ಲ. ಜರ್ಮನಿಯ ಬಗ್ಗೆ ರಶಿಯನ್ ವಿದೇಶ ಮಂತ್ರಿ ಮೊಲಟೋವರು ಮಾಡಿದ ಸೂಚನೆಗಳನ್ನು ಆಂಗ್ಲೋ—ಅಮೇರಿಕನ್ನರು ನಿರಾಕರಿಸಿದರು. ಮಾತ್ರವಲ್ಲ ಈ ಸೂಚನೆ ಮಾಡುವಲ್ಲಿ ರಶಿಯನ್ನರ ಸದುದ್ದೇಶವನ್ನೇ ನಂಬಲಿಲ್ಲ. ಈಗ ಬಂದು ನಿಂತಿರುವ ದೊಡ್ಡ ತೊಡಕುಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದು.

❋ ರೂಹ್ರ ಔದ್ಯೋಗಿಕ ಪ್ರದೇಶದ ಮೇಲೆ ಚತುರ್ ರಾಷ್ಟ್ರ ನಿಯಂತ್ರಣ ಸ್ಥಾಪಿತವಾದ ಹೊರತು ಜರ್ಮನಿಯ ಆರ್ಥಿಕ ಐಕ್ಯಕ್ಕೆ ರಶಿಯಾ ಒಪ್ಪುವದಿಲ್ಲ.

❋ ಜರ್ಮನಿಯ ದೈನಂದಿನ ಉತ್ಪಾದನೆಯಿಂದ ಯಾಲ್ಟಾ ಒಪ್ಪಂದದಿಂದ ತನಗೆ ಪರಿಹಾರ ಸಿಗಲೇಬೇಕೆಂದು ರಶಿಯಾ ಹಟಹಿಡಿದಿದೆ.

ಇವೆರಡಕ್ಕೂ ಬೆವಿನ್, ಮಾರ್ಶಲರು ಸಿದ್ಧರಿಲ್ಲ. ದೈನಂದಿನ ಉತ್ಪಾದನೆಯಿಂದ ರಶಿಯಾಕ್ಕೆ ಪರಿಹಾರ ಕೊಡುವದು ಜರ್ಮನ್ ಆರ್ಥಿಕ ಶಕ್ತಿಗೆ ಹೊರಗಿನದೆಂದು ಅವರು ವಾದಿಸುತ್ತಾರೆ. ಇದನ್ನು ರಶಿಯನ್ನರು ನಿರಾಕರಿಸುತ್ತಾರೆ. ಅಮೇರಿಕೆಗೆ ನಾಜೀ ಮುತ್ತಿಗೆ ಬಿದ್ದಿಲ್ಲವಾದುದರಿಂದ ಅವರಿಗೆ ರಶಿಯನ್ನರ ಸುಖದುಃಖ ಗೊತ್ತಾಗುವದಿಲ್ಲೆಂದು ಅವರ ದೂರು.

ಈ ಭಿನ್ನಾಭಿಪ್ರಾಯಗಳು ಸದ್ಯಕ್ಕಂತೂ ತೀರ ಅಪರಿಹಾರ್ಯವಾಗಿವೆಯೆಂದು ತೋರುತ್ತವೆ. ಅದರೂ ವಿದೇಶ ಮಂತ್ರಿ ಮೊಲಟೋವರು ಒಪ್ಪಂದ ಸಾಧ್ಯವೆಂದು ಪದೇಪದೇ ಹೇಳುತ್ತಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಮಾಸ್ಕೋ ಪರಿಷತ್ತಿನ ಹಣೆಬರಹ ಗೊತ್ತಾಗುವದೆಂದು ನಂಬಲಾಗಿದೆ.

❋ ಬ್ರಿಟಿಶ ವಿದೇಶ ಮಂತ್ರಿ ಬೆವಿನ್ನರು ಹೊಸ ಸೂಚನೆಗಳನ್ನು ಸಭೆಯ ಮುಂದಿಟ್ಟು ೧೯೪೭ ಜುಲೈ ೧ ರಿಂದ ಜರ್ಮನಿಯ ಆರ್ಥಿಕ ಅಖಂಡತೆಯನ್ನು ಸಾಧಿಸಿ ಅದಕ್ಕೆ ಆರ್ಥಿಕ ಸ್ವಾವಲಂಬನ ಶಕ್ತಿಯನ್ನು ಕೊಡಬೇಕೆಂದು ಪ್ರತಿಪಾದಿಸಿದ್ದಾರೆ. ಅದರಲ್ಲಿ ಪಾಟ್ಸಡ್ಯಾಂ ಕರಾರುಗಳನ್ನು ಬದಲಿಸುವ ಅಂಶಗಳಿದ್ದು ರಶಿಯಾಕ್ಕೆ ಕೊಡಬೇಕಾದ ಪರಿಹಾರ ದ್ರವ್ಯದ ಪ್ರಶ್ನೆ ಮೂಲೆಗೆ ತಳ್ಳಲ್ಪಟ್ಟಿರುವದರಿಂದ ರಶಿಯನ್ನರ ಬೆಂಬಲ ಅದಕ್ಕೆ ದೊರೆಯುವದು ಸಂದೇಹಕರ.

ಆಂಗ್ಲೋ—ರಶಿಯನ್ ಒಪ್ಪಂದ

ವಿದೇಶ ಮಂತ್ರಿ ಬೆವಿನ್ನರು ಮಾಸ್ಕೋದಲ್ಲಿರುವ ಸಂಧಿ ಸಾಧಿಸಿ ಈಚೆಗೆ ಬಹಳ ಚರ್ಚೆಗೆ ಕಾರಣವಾಗಿರುವ ಆಂಗ್ಲೋ—ರಶಿಯನ್ ಒಪ್ಪಂದದ ಪುನರ್ನಿರ್ಮಿತಿಯನ್ನೂ ಸಾಧಿಸುವ ಪ್ರಯತ್ನ ನಡೆದಿದೆ. ಈಗಿರುವ ಒಪ್ಪಂದ ಯುದ್ಧಕಾಲದ್ದಾಗಿದ್ದು ಅದರ ಅವಧಿ ೨೦ ವರ್ಷ ಇದೆ. ಆಂಗ್ಲೋ—ಫ್ರೆಂಚ ಒಪ್ಪಂದದ ಮಾತುಕತೆ ನಡೆದಾಗ ವಿದೇಶ ಮಂತ್ರಿ ಬೆವಿನ್ನರು ಆಡಿದ ಕೆಲ ಮಾತುಗಳಿಂದ ಈ ಒಪ್ಪಂದವನ್ನು ಬ್ರಿಟಿಶರು ಇಲ್ಲದಂತೆ ಬಗೆದ ಹಾಗೆ ಕಾಣುವದೆಂದು ಸೋವಿಯಟ ವರ್ಗಗಳಲ್ಲಿ ಟೀಕೆಗಳು ಹೊರಟಿದ್ದವು. ಆ ತಪ್ಪು ತಿಳವಳಿಕೆಯನ್ನು ಹೋಗಲಾಡಿಸಿ ಒಪ್ಪಂದದ ಅವಧಿಯನ್ನು ೫೦ ವರ್ಷಕ್ಕೇರಿಸಿ ಆಂಗ್ಲೋ ಸೋವಿಯೆಟ್ ಸಂಬಂಧವನ್ನು ದೃಢಗೊಳಿಸಲು ಬ್ರಿಟಿಶರು ಬಯಸಿದ್ದರು. ಈ ಬಗ್ಗೆ ಈಗ ಬ್ರಿಟಿಶ ಮತ್ತು ರಶಿಯನ್ ರಾಜನೀತಿಜ್ಞರ ನಡುವೆ ಆರಂಭವಾಗಿರುವ ಮಾತುಕತೆ ಜರ್ಮನ್ ಆಕ್ರಮಣದ ವಿರುದ್ಧ ಉಭಯತರ ಸಹಕಾರದ ಸಂಬಂಧದ ಕಲಮುಗಳನ್ನು ಬದಲಿಸಿ ಈ ಒಪ್ಪಂದವನ್ನು ಯುಕ್ತ ರಾಷ್ಟ್ರದ ಪ್ರವೇಶದಿಂದ ಹೊರತುಪಡಿಸಬೇಕೆಂದು ರಶಿಯನ್ನರು [illegible]ಸಿದ್ದಾರೆ.

[illegible]ಶ ಮಂತ್ರಿಮಂಡಳದಲ್ಲಿ [illegible]ಲಾವಣೆ?

[illegible]ಟಿಶ ಮಂತ್ರಿಮಂಡಳದಲ್ಲಿ ಮಹತ್ವದ ಬದ[illegible]ಣೆಗಳಾಗಲಿವೆಯೆಂಬ ಸುದ್ದಿಗಳು ಬ್ರಿಟಿಶ ಪ[illegible]ಕೆಗಳಲ್ಲಿ ತಿರುತಿರುಗಿ ಪ್ರಕಟವಾಗುತ್ತಿವೆ. ಕಾ[illegible]ರ್ವೇಟಿವರನ್ನೊಳಗೊಂಡು ಸಂಮಿಶ್ರ ರಾಷ್ಟ್ರೀಯ ಸರಕಾರ ರಚಿಸಲಾಗುವದೆಂಬ ಆಶೆಯನ್ನೀಗ ಅವರು ತೊರೆದಿದ್ದಾರೆ. ಮಾತ್ರವಲ್ಲ, ಕೂಲಿಕಾರರನ್ನು ಅವರ ಕೋಟೆಗುಂಡಿಯಲ್ಲಿ ಬಿಟ್ಟರೆ ಮುಂದಿನ ಚುನಾಪಣೆಯ ಕಾಲಕ್ಕೆ ಅವರನ್ನು ಮತ್ತೆ ಒಗೆಯಬಹುದೆಂಬ ಹೊಸ ಆಸೆಯನ್ನು ಅವರು ಕಲ್ಪಿಸಿಕೊಂಡಿದ್ದಾರೆ. ಈಗ ಮುಂಗಾಣಲ್ಪಟ್ಟಿರುವ ಮಂತ್ರಿಮಂಡಲ ಬದಲಾವಣೆಗಳು ಕೂಲಿಕಾರ ಪಕ್ಷದೊಳಗೇ ಎಂದು ನಂಬಲಾಗಿದೆ. ಬೆವಿನ್ನರ ಉದ್ದಾಮ ವ್ಯಕ್ತಿತ್ವವನ್ನು ಅನುಲಕ್ಷಿಸಿ ಅವರಿಗೆ ಗೃಹರಂಗದ ಗೊಂದಲವನ್ನು ಹಿಡಿತಕ್ಕೆ ತರುವ—ಅಂದರೆ ರಾಷ್ಟ್ರೀಯ ಪುನರ್ನಿರ್ಮಾಣದ— ಮಂತ್ರಿಪದವನ್ನು ಕೊಡಬಹುದು. ಕೆಲವರಂತೂ ಮುಖ್ಯ ಮಂತ್ರಿ ಅಟ್ಲಿಯವರು ತಮ್ಮ ಪದವನ್ನೇ ತೆರವು ಮಾಡಿ ಬೆವಿನ್ನರಿಗೊಪ್ಪಿಸಬಹುದೆಂದು ಊಹಿಸತೊಡಗಿದ್ದಾರೆ. ವಿದೇಶ ಮಂತ್ರಿಪದಕ್ಕೆ ಹರ್ಬರ್ಟ ಮಾರಿಸನ್ (ಉಪಪ್ರಧಾನ) ಅಥವಾ ಹಣಕಾಸಿನ ಮಂತ್ರಿ ಡಾ. ಡಾಲ್ಟನ್ನರ ಹೆಸರುಗಳು ಉಲ್ಲಿಖಿತವಾಗಿವೆ.

ಈ ಬದಲಾವಣೆಗಳು ಅವಶ್ಯವೆನಿಸುವಷ್ಟು ಬ್ರಿಟಿಶ ಕೂಲಿಕಾರ ಪಕ್ಷದಲ್ಲಿ ಅಸಂತುಷ್ಟಿ ಒಡೆದು ಕಾಣುತ್ತಿದೆ. ಉದಾಹರಣೆಗೆ:

❋ ರಾಷ್ಟ್ರವ್ಯಾಪಿ ಶಾಂತಿ ಕಾಲದ ಒತ್ತಾಯದ ಮಿಲಿಟರಿ ಸೇವೆಯ ಸರಕಾರಿ ಯೋಜನೆಯನ್ನು ೭೫ ಕೂಲಿಕಾರ ಪಾರ್ಲಮೆಂಟ ಸದಸ್ಯರು ವಿರೋಧಿಸ ಹೊರಟಿರುವದರಿಂದ ಪಕ್ಷದಲ್ಲಿ ಇನ್ನಷ್ಟು ಒಡಕುಂಟಾಗಿದೆ.

❋ ಬೆವಿನ್ನರ ವಿದೇಶ ಧೋರಣೆಯ ವಿರುದ್ಧ ಅಸಂತುಷ್ಟಿ ಹಾಗೆಯೆ ಇದೆ. ಸಾಮ್ರಾಜ್ಯವಾದಿ ಬ್ರಿಟನ್ನು ಬಂಡವಲವಾದಿ ಅಮೇರಿಕೆಯ ಸೆರಗಿಗೆ ಜೋತು ಬಿದ್ದಿದೆಯೆಂದು ಕೂಲಿಕಾರರು ಆಡಿಕೊಳ್ಳುತಿದ್ದಾರೆ.

❋ ಕೆಲಸದ ತಾಸುಗಳನ್ನು ಕಡಿಮೆ ಮಾಡಿದರೆ ಉತ್ಪಾದನೆ ಕಡಿಮೆಯಾಗುವದೆಂಬ ಸರಕಾರದ ವಾದಕ್ಕೆ ಕೂಲಿಕಾರ ಸಂಘಗಳ ವಿರೋಧವಿದೆ.

❋ ಟ್ರೇಡ ಯೂನಿಯನ್ ಕಾಂಗ್ರೆಸ್ಸಿನವರು ನೇಮಿಸಿದ ೧೨ ಸದಸ್ಯರುಳ್ಳ ಸಮಿತಿಯೊಂದು ಸರಕಾರದ ಅರೆಮನಸಿನ ಯೋಜನೆಗಳೇ ಗೊಂದಲಕ್ಕೆ ಕಾರಣವೆಂದು ಟೀಕಿಸಿದೆ.

❋ ನಾಳೆ ಮೇ ತಿಂಗಳಲ್ಲಿ ಜರಗಲಿರುವ ಕೂಲಿಕಾರ ಪಕ್ಷದ ಮಹಾ ಪರಿಷತ್ತಿನಲ್ಲಿ ಸರಕಾರದ ವಿವಿಧ ಧೋರಣೆಗಳನ್ನು ತೀಕ್ಷ್ಣವಾಗಿ ಟೀಕಿಸುವ ಅನೇಕ ಗೊತ್ತುವಳಿಗಳು ಮಂಡಿಸಲ್ಪಡುವವು.

ಬ್ರಿಟಿಶ ವಿಧ್ಯಾರ್ಥಿಗಳ ಮನವಿ

ದಕ್ಷಿಣ ಆಫ್ರಿಕೆಯಲ್ಲಿರುವ ವರ್ಣದ್ವೇಷವನ್ನು ಪ್ರತಿಭಟಿಸುವ ಮನವಿಯೊಂದು ಬ್ರಿಟಿಶ ವಿದ್ಯಾರ್ಥಿ ಕೂಲಿಕಾರ ಮಹಾಮಂಡಲದ ನೇತೃತ್ವದಲ್ಲ ೬೫೦೦ ಸಹಿಗಳೊಂದಿಗೆ ಅರಸರ ಬಕಿಂಗ್‌ಹ್ಯಾಮ ಅರಮನೆಯಲ್ಲಿ ಒಪ್ಪಿಸಲ್ಪಟ್ಟಿದ್ದು ಅದನ್ನು ದಕ್ಷಿಣ ಆಫ್ರಿಕೆಯಲ್ಲಿ ಸಂಚರಿಸುತ್ತಿರುವ ಬ್ರಿಟಿಶ ಅರಸರಿಗೆ ಕಳಿಸಬೇಕೆಂದು ಪ್ರಾರ್ಥಿಸಲಾಗಿದೆ.

ದಕ್ಷಿಣ ಆಫ್ರಿಕೆಯ ಶಾಲೆ ಕಾಲೇಜುಗಳಲ್ಲಿರುವ ವರ್ಣಬಹಿಷ್ಕಾರ ಪದ್ಧತಿ ಮತ್ತು ಬಿಳಿ ಮತ್ತು ಇತರ ಪ್ರಜೆಗಳ ಶಿಕ್ಷಣ ವಿಷಯದಲ್ಲಿರುವ ಪಕ್ಷಪಾತದ ಕಾಯದೆಗಳು; ಬಿಳಿಯರಲ್ಲದವರಿಗೆ ಮತಾಧಿಕಾರವಿಲ್ಲದಿರುವದು; ಯುರೋಪಿಯನ್ನರಲ್ಲದ ಕೂಲಿಕಾರರ ಸಂಘ ಸ್ಥಾಪನೆಗೆ ಇರುವ ಅಡ್ಡಿ ಆತಂಕಗಳು; ಆಫ್ರಿಕನ್ ಜನರ ಓಡಾಟಕ್ಕಿರುವ ಕಾಯಿದೆಯ ನಿಯಂತ್ರಣಗಳು (ಇವುಗಳಿಂದಾಗಿ ವರ್ಷಕ್ಕೆ ೧ ಲಕ್ಷ ಮೂಲನಿವಾಸಿಗಳು ಸೆರೆಮನೆ ಕಾಣುತ್ತಾರೆ); ಇವೆಲ್ಲವನ್ನು ಖಂಡಿಸಲಾಗಿದ್ದು "ಇಂಥ ಪಕ್ಷಪಾತ, ವರ್ಣದ್ವೇಷಗಳು ನಮ್ಮ ಮನಸಿಗೆ ಬರುವದಿಲ್ಲೆಂದು" ಅರಸರು ದಕ್ಷಿಣ ಆಫ್ರಿಕೆಯ ಸಂಚಾರ ಕಾಲದಲ್ಲಿ ಬಹಿರಂಗವಾಗಿ ಸಾರಿಬಿಡಬೇಕೆಂದು ಪ್ರಾರ್ಥಿಸಲಾಗಿದೆ.

ಜರ್ಮನರ ಹಸಿವು

ಮಾಸ್ಕೋದಲ್ಲಿ ಮಂತ್ರಿ ಚತುಷ್ಟಯವು ರೂಹ್ರದ ಸ್ವಾಮಿತ್ವದ ಬಗ್ಗೆ ತೀಕ್ಷ್ಣ ಚರ್ಚೆಯಲ್ಲಿ ಆಸಕ್ತರಾಗಿರುವಾಗಲೆ ಇತ್ತ ಅದೇ ಜರ್ಮನ್ ಪ್ರಾಂತದ ಹಸಿದ ಜನರು ಅಭೂತಪೂರ್ವ ಪ್ರದರ್ಶನಗಳನ್ನು ಕಳೆದ ವಾರ ಜರಗಿಸಿದರು. ಡುಸೆಲಡಾರ್ಫ ನಗರದ ಇಡಿ ೧,೦೦,೦೦೦ ಪ್ರಜೆಗಳೂ ಪ್ರಚಂಡ ಮೆರವಣಿಗೆ ಹೂಡಿದರು. ಮೊದಲನೆ ಬಾರಿ ಆಕ್ರಮಣಸೇನೆಯ ವಿರುದ್ಧ ಹಿಂಸೆಯನ್ನು ಜರ್ಮನ್ ಪ್ರಜೆಗಳು ಉಪಯೋಗಿಸಿ, ಹಿಂದು ಬ್ರಿಟಿಶ ಮೋಟಾರ ಕಾರಿನಿಂದ ಒಳಗಿದ್ದವರನ್ನು ಎಳೆದು ಹಾಕಿ ಅದನ್ನು ಒಂದು ಕೊಳದಲ್ಲಿ ಮುಳುಗಿಸಿದರು. ಸುದ್ದಿಗಾರರ ಮೋಟಾರೊಂದರ ಮೇಲೆ ಅವರು ಕಲ್ಲೆಸೆದರು. ಹಸಿವಿನ ಕೂಗಿನೊಡನೆ ಬೇರೆ ಅನೇಕ ರಾಜಕೀಯ ಕೂಗುಗಳನ್ನೂ ಅವರು ಬೆರಸಿ ಹಗಲಿಡೀ ರಸ್ತೆಗಳಲ್ಲಿ ಅಲೆದಾಡುತಿದ್ದರು. ಟ್ರಾಂ, ಬಸ್ ಮೊದಲಾದ ವಾಹನಗಳ ಓಡಾಟ ನಿಂತು ಹೋಗಿತ್ತು. ನಾಜಿಗಳ ಉಚ್ಚಾಟನೆಯನ್ನು ತ್ವರೆಯಿಂದ ಮುಗಿಸಬೇಕು ಮೊದಲಾದ ಕೂಗುಗಳು ಗಗನವನ್ನು ಭೇದಿಸಿದವು. ಇಡಿ ರೂಹ್ರ ಪ್ರಾಂತದ ಅನೇಕ ಕಡೆಗಳಲ್ಲಿ ಇಂಥ ಪ್ರದರ್ಶನಗಳು ನಡೆದವು.

ಬ್ರಿಟಿಶ ಆಕ್ರಮಣಾಧಿಕಾರಿಗಳು ತಾವು ಸಾಧ್ಯವಿದ್ದುದನ್ನೆಲ್ಲ ಮಾಡುತಿರುವದಾಗಿ ಹೇಳುತಿದ್ದಾರೆ.

ಸ್ಪೇನದಲ್ಲಿ ಅರಸೊತ್ತಿಗೆ

ಸ್ಪೇನ ದೇಶದಲ್ಲಿ ಪುನಃ ಅರಸೊತ್ತಿಗೆ ಸ್ಥಾಪಿಸಲ್ಪಡುವದೆಂದು ಎಪ್ರಿಲ ೧ ನೆ ದಿನ ಜನರಲ್ ಫ್ರಾಂಗೋನು ಮಾದ್ರಿದ ಆಕಾಶವಾಣಿ ಮೂಲಕ ಸಾರಿದನು.

ಸದ್ಯಕ್ಕಂತೂ ಜನರಲ್ ಫ್ರಾಂಕೋನೇ ಸರಕಾರದ ವರಿಷ್ಠನಾಗಿ ಉಳಿಯುವನು. ಅವನು ಬದುಕಿರುವ ವರೆಗೆ ಅಥವಾ ಕೆಲಸ ಮಾಡಲು ಅಶಕ್ತನಾಗದಿರುವ ವರೆಗೆ ಅರಸೊತ್ತಿಗೆಯನ್ನು ಔಪಚಾರಿಕವಾಗಿ ಸ್ಥಾಪಿಸುವದಿಲ್ಲವೆಂದು ಸ್ಪಷ್ಟಗೊಳಿಸಲಾಗಿದೆ.

ರೀಜನ್ಸಿ ಸಮಿತಿಯೊಂದು ಬೇಗನೆ ಸ್ಥಾಪಿಸಲ್ಪಡಬಹುದು. ಅದರಲ್ಲಿ ಒಬ್ಬ ಹಿರಿಯ ಮಠಾಧಿಪತಿ, ಒಬ್ಬ ವರಿಷ್ಠ ಸೈನ್ಯಾಧಿಕಾರಿ, ವರಿಷ್ಠ ನ್ಯಾಯಾಧಿಪತಿ, ಮತ್ತು ಸ್ಪೇನದ ಪಾರ್ಲ[illegible] ಅಧ್ಯಕ್ಷ ಇರುವರು. ಕಾರ್ಟೆಸ್ (ಪಾರ್ಲಮೆಂಟ್)ಯಲ್ಲಿ ಕೂಲಿಕಾರ ಸಂಘಗಳು, ನ್ಯಾಯಶಾ[illegible]ಗಳು, ವಿಶ್ವವಿದ್ಯಾಲಯ, ಕಾಲೇಜುಗಳು [illegible]ಗಳ ಪ್ರತಿನಿಧಿಗಳಿದ್ದು ಅದು ರೀಜನ್ಸಿ ಸಮಿತಿ[illegible] ಒಬ್ಬ ಪ್ರತಿನಿಧಿಯನ್ನು ಕಳಿಸುವದು.

"ಸ್ಪೇನು ಕೆಥೋಲಿಕ ಧರ್ಮದ ಸಾಮಾಜಿ[illegible] ರಾಜ್ಯವಾಗಿದ್ದು ತನ್ನ ಪರಂಪರೆಯನ್ನು ಅ[illegible]ಸರಿಸಿ ರಾಜಸತ್ತೆಯಾಗುತದು," ಎಂದು [illegible] ಸಂಬಂಧದ ಕಾಯಿದೆಯಲ್ಲಿ ಹೇಳಲಾಗಿದೆ. ರೀಜನ್ಸಿ ಸಮಿತಿ ಅರಸನಿಗೆ ಸಲಹೆ ಕೊಡುವದ[illegible]ಲ್ಲದೆ ಅರಸನು ಉತ್ತರಾಧಿಕಾರಿಯಿಲ್ಲದೆ ಸತ್ತರೆ ಇಲ್ಲವೆ ಆಳಲು ಅಯೋಗ್ಯನಾದರೆ ಕಾರ್ಟೆಸಿ[illegible] ರಾಜವಂಶಕ್ಕೆ ಸೇರಿದ ಹೊಸ ಅರಸನನ್ನು ಸೂಚಿ[illegible]ಸುವ ಅಧಿಕಾರವೂ ಇದೆ. ಕಾರ್ಟೆಸ್ನು [illegible] ನೇಮಕವನ್ನು ಎರಡು ಮೂರಾಂಶ ಬಹುಮ[illegible]ತದಿಂದ ಮಂಜೂರು ಮಾಡಬೇಕಾಗುವದು.

ಸ್ಪೇನದಲ್ಲಿ ಅರಸೊತ್ತಿಗೆಯ ಕೊನೆ ೧೯೩೧ರಲ್ಲಿ ಎಪ್ರಿಲ ೧೪ಕ್ಕೆ ಆಯಿತು. ೧೯೩೧ರ ಅಲ್ಫೋನ್ಸೋ ಅರಸನನ್ನು ರಾಜತ್ಯಾಗ ಮಾಡುವಂತೆ ದೊಡ್ಡ ನಗರಗಳ ನಗರಸಭೆಗಳು ಒತ್ತಾಯಗೊಳಿಸಿದ್ದರಿಂದ ಅವನು ಹೊರಬಿದ್ದು ಹೋದನ[illegible] ತಿರುಗಿ ದೇಶದಲ್ಲಿ ಕಾಲಿಡಲಿಲ್ಲ.

ಮಡೆಗಾಸ್ಕರದಲ್ಲಿ ಸ್ವಾತಂತ್ರ್ಯದ ಕಹಳೆ

ಫ್ರೆಂಚ ಇಂಡೋಚೀನದ ಸ್ವಾತಂತ್ರ್ಯ ಕ್ರೇನು[illegible]ಗಳ ಮೂಳೆ ಮುರಿಯುವ ಕೆಲಸ ಇನ್ನೂ ಮುಗಿಯದೆ ಉಳಿದಿರುವಾಗ ಆಫ್ರಿಕೆಯ ಬಳಿಯ ಫ್ರೆಂಚ ದ್ವೀಪವಾದ ಮಡಗಾಸ್ಕರದಲ್ಲಿ ಅವರಿಗೆ ಫ್ರೆಂಚರಿಗೆ ಹೊಸ ಗಂಡಾಂತರವೊಂದು ಎದುರಾಗಿ ಬಿದ್ದಿದೆ. ಮಡಗಾಸ್ಕರದ ಮೂಲ ನಿವಾಸಿಗಳು ದಂಗೆಯೆದ್ದಿದ್ದಾರೆ. ತಾ ೧ ನೇ ದಿನ ೧೦೦ ಜನರ ತಂಡವೊಂದು ಮೂರಮಾಂಗ್ ಎಂಬಲ್ಲಿ ಬರ್ಚಿ ಚೂರಿಗಳೊಡನೆ ಫ್ರೆಂಚ ಸೈನ್ಯದ ಮೇಲೇರಿ ಹೋಯಿತು. ೨೦ ಫ್ರೆಂಚರು ಸತ್ತರು. ದಿಂಗೊ ಸೋರೇಜ ಎಂಬಲ್ಲಿಯೂ ಫ್ರೆಂಚ ಶಸ್ತ್ರಾಗಾರದ ಮೇಲೆ ದಾಳಿಯಾಯಿತು. ದೇಶದ ಇತರ ಭಾಗಗಳಲ್ಲಿಯೂ ದಂಗೆ ಆರಂಭವಾಗಿದೆ. ಇದೆಲ್ಲ ಸ್ವಾತಂತ್ರ್ಯ ಚಳವಳಿಯ ಅಂಗವೆಂದೂ ಫ್ರೆಂಚ ಕಮ್ಯುನಿಸ್ಟರ ಕೈ ಇದರಲ್ಲುಂಟೆಂದೂ ನಂಬಲಾಗಿದೆ.

ಚೀನದಲ್ಲಿ ಹಿಂದೀ ರಾಯಭಾರಿ

ಹಿಂದುಸ್ತಾನದ ಪ್ರಥಮ ರಾಯಭಾರಿಗಳಾದ ಶ್ರೀ ಕೆ. ಪಿ. ಎಸ್. ಮೆನೋನರು ಚೀನದಲ್ಲಿ ದಂಡನಾಯಕ ಚಿಯಾಂಗ ಮುಂದೆ ತಮ್ಮ ಅಧಿಕಾರ ಪತ್ರವನ್ನು ಸಾದರು ಪಡಿಸಿದರು. ರಾಯಭಾರಿಗಳು, ಹಿಂದೀ ಸ್ವಾತಂತ್ರ್ಯ ಚಳವಳಿಗೆ ಚೀನ ತೋರಿಸಿದ ಸಹಾನುಭೂತಿಗೆ ಅಭಾರ ಮನ್ನಿಸಿ, ಈ ಎರಡು ದೇಶಗಳ ಅತ್ಯಂತ ದೀರ್ಘವಾದ ಇತಿಹಾಸದಲ್ಲಿ ಉಭಯತರಲ್ಲಿ ಯುದ್ಧದಂತಿರಲಿ ಗಡಿ ತಿಕ್ಕಾಟಗಳು ಕೂಡ ಸಂಭವಿಸಿಲ್ಲವೆಂಬುದನ್ನು ನೆನಪಿಗೆ ತಂದುಕೊಟ್ಟರು. ಎರಡೂ ರಾಷ್ಟ್ರಗಳು ಜಾತೀಯ ಅಥವಾ ಸಾತ್ವಿಕ ಅಂತಃಕಲಹಗಳನ್ನು ಬದಿಗಿಟ್ಟು ಒಂದಾದರೆ ಏಶಿಯಾಕ್ಕೆ ಸ್ಥೈರ್ಯವನ್ನೂ ಜಗತ್ ಶಾಂತಿಗೆ ಸಹಾಯವನ್ನೂ ನೀಡಬಲ್ಲವೆಂದೂ ಅವರು ಹೇಳಿದರು. ಚಿಯಾಂಗರು ೩೨ ವರ್ಷದ ಸಾಧನೆಯ ನಂತರ ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ದೊರೆತದ್ದಕ್ಕೆ ಸಂತೋಷಪಟ್ಟು ಚೀನ ಪ್ರಜಾತಂತ್ರದ ದಿಶೆಯಲ್ಲಿ ಮುಂದಿಟ್ಟ ಹೆಜ್ಜೆಗಳನ್ನು ವಿವರಿಸಿದರು.



ಇಸ್ಲಿಂಗ್ಟನ್ ಮನೆ

ಇಸ್ಲಿಂಗ್ಟನ್‌ದಲ್ಲಿ ಬಾಂಬಿನಿಂದ ಉಧ್ವಸ್ತವಾದ ಈ ಸ್ಥಳವನ್ನು ವೃದ್ಧರ ವಾಸಸ್ಥಳವೆಂದು ಮಾರ್ಪಡಿಸಲು ವಿಶ್ವಸ್ತರು ಅನುಮತಿಸಿದ್ದಾರೆ. ೪೦ ವೃದ್ಧರಿಗೆ ಇಲ್ಲಿರಲು ಅವಕಾಶ ಕಲ್ಪಿಸಿಕೊಡಲಾಗಿದೆ. ಮೇಲಂತಸ್ತಿನಲ್ಲಿ ೪೨ ಬೇರೆ ಕುಟುಂಬಗಳಿಗೆ ವಸತಿಯ ವ್ಯವಸ್ಥೆ ಮಾಡಿದೆ. ಉಳಿದ ಎಲ್ಲ ಸೌಕರ್ಯಗಳೂ ಇದರಲ್ಲಿ ನಿರ್ಮಿಸಲ್ಪಟ್ಟಿವೆ.

ವಿಶ್ವ ಕಿರಣಗಳು

ಪರಮಾಣು ಶಕ್ತಿಯನ್ನು ಮೀರುವ ಮತ್ತೊಂದು ಅತ್ಯದ್ಭುತ ಶಕ್ತಿ

ಲೇಖಕ:— ಟಿ. ಕೃ. ನಾಯಕ ಬಿ. ಎಸ್ಸಿ.

ಜಗತ್ತಿನಲ್ಲಿ ಮಾನವನ ಬುದ್ಧಿ ವಿಕಾಸಕ್ಕೆ ಬೇಕಾದಷ್ಟು ಅವಕಾಶವಿದೆ. ಅವನ ಜಾಣ್ಮೆಯಿಂದ ದಿನಂಪ್ರತಿ ಎಷ್ಟೋ ಸಂಗತಿಗಳು ಬಯಲಿಗೆ ಬಂದವು ಹಾಗೂ ಬರಲಿಕ್ಕೆ ಹತ್ತಿರುತ್ತವೆ. ಹೋದ ಶತಮಾನದಲ್ಲಿ ವಿಜ್ಞಾನದ ಕ್ಷೇತ್ರದಲ್ಲಿ ಅತಿ ಗಮನಾರ್ಹವಾದ ಸಂಗತಿಗಳು ತಿಳಿದವು. ಸೃಷ್ಟಿಯ ಹೊಟ್ಟೆಯಲ್ಲಿ ಹುದುಗಿಕೊಂಡಿರುವ ಅನೇಕ ಧಾತುಗಳ ಮೂಲವು ಕಂಡು ಬಂದ ಬಳಿಕ ಧಾತುಗಳಲ್ಲಿಯೇ ವಿಲಕ್ಷಣವಾದ ಘಟನೆಯೊಂದರ ರೇಡಿಯೋ ಚಲನವಲನವು (Radio Activity) ಎಂದು ತಿಳಿಯಿತು. ಈ ರೇಡಿಯೋ ಧಾತುಗಳಿಂದ ಒಂದು ಹೊಸ ಅಧ್ಯಾಯವೇ ಪ್ರಾರಂಭವಾಯಿತಲ್ಲದೆ ಮುಂದಿನ ಶೋಧದಲ್ಲಿಯೂ ಅಣು-ಪರಮಾಣುಗಳ ಅಂತರ್ (Internal Structure) ರಚನೆಯನ್ನು ಕಂಡು ಹಿಡಿಯುವದರಲ್ಲಿ ಅತಿ ಸಹಾಯವಾಯಿತು. ಇವುಗಳ ಪರಮಾಣು ಶಕ್ತಿಯು (Atomic energy) ಹಿರೋಶಿಮಾ ನಗರವನ್ನು ಹೇಳಹೆಸರಿಲ್ಲದೆ ಪ್ರತಿಯೊಬ್ಬನ ಹೃದಯವನ್ನು ಕಲುಕಿತು. ಇದರಲ್ಲಿಯೇ ಕೆಲವರು ಹಿರಿಯ ನಾಗರಿಕತೆಯ ಅಂತವನ್ನೂ ಕಾಣ ಹೇಳತೊಡಗಿದ್ದಾರೆ. ಏನೇ ಇದ್ದರೂ ಇದೆಲ್ಲವೂ ನಮ್ಮ ಮುಂದಿನ ಅತಿ ಮಹತ್ವದ ಹಾಗೂ ಪ್ರಚಂಡ ಶಕ್ತಿಗೆ ಪೂರ್ವಭಾವಿಯಾಗಿ ನಿಂತಿದೆ. ಅದೆಂದರೆ ಅತ್ಯದ್ಭುತ ಶಕ್ತಿಯುತವಾದ "ವಿಶ್ವ ಕಿರಣಗಳು." (Cosmic rays). ಮುಂದಿನ ಕೆಲವರುಷಗಳಲ್ಲಿ ಈ ಕಿರಣಗಳ ಗುಟ್ಟು ಹೊರಬೀಳುವದು. ಮೇಲೆ ವಿವರಿಸಿದ ರೇಡಿಯೋ ಧಾತುಗಳಿಂದಲೇ ವಿಶ್ವಕಿರಣದ ವ್ಯಾಪ್ತಿಯನ್ನು ಕಂಡು ಹಿಡಿಯಲು ಸುಲಭವಾಗುವದು.

ರೇಡಿಯೋ ಧಾತುಗಳು ಯಾವಾಗಲೂ ಕೆಲವು ಕಿರಣಗಳನ್ನು ಹೊರಸೂಸುತ್ತಿರುತ್ತವೆ. ಇದಕ್ಕೆ ಧಾತುವಿನ ಅಸ್ಥಿರತೆ ಹಾಗೂ ಭೇದನವೇ ಕಾರಣವೆಂದು ಹೇಳಬಹುದು. ಆ ಕಿರಣಗಳಿಗೆ ಅಲ್ಫಾ, ಬಿಟಾ, ಗಾಮಾ ಕಿರಣಗಳೆಂದು ನಾಮಾಂಕಿತವಿರುತ್ತವೆ. ಇವುಗಳಲ್ಲಿ ಗಾಮಾ ಕಿರಣವು ಕ್ಷ—ಕಿರಣಗಳನ್ನು ಹೋಲುತ್ತದೆ. ಈ ಕಿರಣದ ಮೇಲೆ ಲೋಹಚುಂಬಕತ್ವದ ಪರಿಣಾಮವಿಲ್ಲ. ಮೇಲಿನ ಮೂರು ಪ್ರಕಾರದ ಕಿರಣಗಳನ್ನು ಅವುಗಳ ಅಂತಃಪ್ರವೇಶ ಶಕ್ತಿ (Penetrating Power)ದಿಂದ ಬೇರೆ ಬೇರೆಯಾಗಿ ವಿಂಗಡಿಸಬಹುದು. ಈ ಕಿರಣಗಳು ೧೮೯೬ರಲ್ಲಿ ಹೆನ್ರಿ ಬೆಕ್ವೆರಲ್‌ರಿಂದ ಶೋಧಿಸಲ್ಪಟ್ಟವು. ಇಂಥ ಧಾತುಗಳೆಂದರೆ ಯುರೇನಿಯಮ್, ಥೋರಿಯಮ್, ರೇಡಿಯಮ್ ಮೊದಲಾದವುಗಳು. ಮೆಡ್ಯಾಮ ಕ್ಯೂರಿಯೇ ಈ ಕ್ಷೇತ್ರದಲ್ಲಿ ಅತಿ ಪ್ರಯಾಸ ಪಟ್ಟು ಧೈರ್ಯದಿಂದ ಅವುಗಳನ್ನು ಶುದ್ಧ ರೀತಿಯಲ್ಲಿ ದೊರಕಿಸಿದಳು. ಇದು ೧೯೦೨ರಲ್ಲಿ.

ಪರಮಾಣು ಶಕ್ತಿ ಸಂಶೋಧನೆಯ ಕಾರ್ಯ ಮಾಡಿದವರಲ್ಲಿ ಒಬ್ಬರಾದ ಅಮೇರಿಕನ್ ಸುಪ್ರಸಿದ್ಧ ವಿಜ್ಞಾನಿಗಳಾದ ಆರ್. ಎ. ಮಿಲಿಕನ್ನರೂ ವಿಶ್ವಕಿರಣ ಸಂಶೋಧನೆಯ ಕಾರ್ಯದಲ್ಲಿ ಮುಂದಾಳುತನವನ್ನು ವಹಿಸಿದ್ದಾರೆ. ಸ್ವಿಝರ್ಲಂಡದ ವಾಕ್‌ಲರ್ ಎಂಬವರು ೧೯೧೦ರಲ್ಲಿ ವಿದ್ಯುದ್ದರ್ಶಕ (Electroscope)ವನ್ನು ಒಂದು ಬಲೂನಿನ ಸಹಾಯದಿಂದ ಆಕಾಶದಲ್ಲಿ ಒಯ್ದರು. ಅದು ೪ ಕಿಲೋಮೀಟರದಷ್ಟು ಎತ್ತರ ಹೋದ ಬಳಿಕ ಅತಿ ತೀವ್ರವಾಗಿ ನಿರ್ಗಮನ (Discharge) ಹೊಂದಿತು. ಮುಂದೆ ೧೯೧೧ರಲ್ಲಿ ಹೆಸ್ಸನೆಂಬ ಆಸ್ಟ್ರೇಲಿಯನ್ ವಿಜ್ಞಾನಿಯು ಇಂಥ ಕಿರಣಗಳು ಪೃಥ್ವಿ ಬಿಟ್ಟು ಉನ್ನತ ಸ್ಥಳಗಳಲ್ಲಿರುತ್ತವೆಂದು ಸಾರಿದನು. ಅದರಂತೆ ನಿರ್ಗಮನ ಪರಿಣಾಮವು (Discharging effect) ಸೂರ್ಯನ ಸಮಾನದ ಮೇಲೆ ಅವಲಂಬಿಸಿರುವದಿಲ್ಲೆಂದು ಕಂಡು ಹಿಡಿದನು. ಎರಡು ವರ್ಷಗಳ ನಂತರ ಕೋಲ್‌ಹೊಸ್ಟರ ಎಂಬ ಜರ್ಮನ್ ವಿಜ್ಞಾನಿಯು ಹತ್ತೊಂಬತ್ತು ಸಾವಿರ ಅಡಿ ಆಕಾಶದಲ್ಲಿ ಹೋಗಿ ಅಲ್ಲಿ ನಿರ್ಗಮನ ಪರಿಣಾಮವು ಭೂಮಿಯ ಮೇಲಿನದಕ್ಕಿಂತಲೂ ೮—೧೦ ಪಟ್ಟು ಹೆಚ್ಚಾಗಿರುವದನ್ನು ಕಂಡನು. ಮಿಲಿಕನ್ ಹಾಗೂ ಸಂಗಡಿಗರು ೧೯೨೨ರಲ್ಲಿ ಒಂದು ಸ್ವಲಿಖಿತ ವಿದ್ಯುದ್ದರ್ಶಕ (self registering electroscope) ವನ್ನು ೩೦ ಸಾವಿರ ಅಡಿ ಎತ್ತರ ಬಿಟ್ಟು ಇದೇ ಪರಿಣಾಮವನ್ನು ಮನಗಂಡರು. ಅಂದರೆ ನಿರ್ಗಮನವು ಭೂಮಿಯ ಮೇಲಿನದಕ್ಕಿಂತಲೂ ಉನ್ನತ ಸ್ಥಾನಗಳಲ್ಲಿ ಹೆಚ್ಚಾಗಿರುವದು. ಅದರಂತೆ ೬೦ ಅಡಿ ನೆಲದ ಕೆಳಗೆಯೂ ಇದನ್ನು ಕಂಡರು. ಈ ರೀತಿಯಾಗಿ ವಿದ್ಯುದ್ದರ್ಶಕದ ಮೇಲೆ ಪರಿಣಾಮವನ್ನು ಮಾಡುತ್ತಿರುವ ಶಕ್ತಿಗೆ "ವಿಶ್ವ ಕಿರಣ"ಗಳೆಂದು ಶ್ರೀ. ಮಿಲಿಕನ್ನರು ೧೯೨೫ರಲ್ಲಿ ಕರೆದರು. ಅಖಿಲ ವಿಶ್ವದಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಪ್ರಸರಣ ಹೊಂದಿರುವದರಿಂದಲೇ "ವಿಶ್ವ" ಎಂಬ ಹೆಸರನ್ನು ಜೋಡಿಸಿರಬಹುದು. ಈ ಕಿರಣಗಳೇ ರೇಡಿಯೋ ಚಲನವಲನ ಧಾತುಗಳ ಪರಮಾಣು (Atom)ವಿನ ಅಂತರ್ ರಚನೆಯನ್ನು ಕಂಡು ಹಿಡಿಯುವದರಲ್ಲಿ ಸಹಾಯಕವಾದವು. ಸ್ವಚ್ಛ ಆಕಾಶವಿದ್ದಾಗಲೀ ಇಲ್ಲದಾಗಲೀ ಇವುಗಳ ಶಕ್ತಿಯು ಅಷ್ಟೇ ಇರುತ್ತದೆಂದು ತೋರಿಸಿದರು. ಇದರಿಂದ ಈ ಕಿರಣಗಳು ಪೃಥ್ವಿಯಲ್ಲಾಗಲೀ ಸೂರ್ಯ— ನಕ್ಷತ್ರಗಳಲ್ಲಾಗಲೀ ಉದಯಿಸುವದಿಲ್ಲೆಂದು ಸಿದ್ಧವಾಗುತ್ತದೆ.

ಇನ್ನು ಇವುಗಳ ಉಗಮಸ್ಥಾನವು ದೊಡ್ಡ ಸಮಸೆಯೇ ಇರುತ್ತದೆ. ಈ ಕಿರಣಗಳ ಬಗ್ಗೆ ತನ್ನ ಆಯುರ್ಮಾನವನ್ನು ಮುಡಿಪಾಗಿಟ್ಟ ಆರ್. ಎ. ಮಿಲಿಕನ್‌ರು ಮೇಲೆ ಹೇಳಿದ ಸ್ಥಾನಗಳು ಅಲ್ಲವೆಂದು ಅಂದರು. ಯಾಕಂದರೆ ಇಂಥಲ್ಲಿ ದ್ರವ್ಯವು ವಿಪುಲವಾಗಿ ದೊರಕುತ್ತದೆ. ಹಾಗೂ ಪೃಥ್ವಿಯು ತನ್ನ ಮಾರ್ಗದಲ್ಲಿ ಯಾವ ಗಮನಿಸುವಂಥ ದ್ರವ್ಯವನ್ನೂ ದಾಟಬರುವದಿಲ್ಲ. ಇವು ಸೂರ್ಯನ ಕಡೆಗೆ ಧಾವಿಸುವ ಮುಂದೆ ಅವನ ಲೋಹಚುಂಬಕತ್ವದ ಪರಿಣಾಮವಾಗಿ ಮಣಿದಿರುತ್ತವೆ. ಗಗನದಲ್ಲಿಯ ವಿದ್ಯುತ್ ಕ್ಷೇತ್ರದಲ್ಲಿ ಉಗಮವಾಗಿಲ್ಲವೆನ್ನಲಿಕ್ಕೆ ಅವು ಎಲ್ಲ ಕಡೆಗೆ ಒಂದೇ ರೀತಿಯಲ್ಲಿ ಪಸರಿಸುವದು ಕಾರಣವಾಗಿರುತ್ತದೆ. ಹಾನ್ಸ ಅಲ್ಫವೆ (Hannes Alvenes)ರು ಎರಡು ತಿರುಗುತ್ತಿರುವಂಥ ನಕ್ಷತ್ರಗಳ ವಿದ್ಯುತ್ ಕಿರಣಗಳ ತಿಕ್ಕಾಟವೇ ವಿಶ್ವ ಕಿರಣದ ಉತ್ಪತ್ತಿಯ ಮೂಲವೆಂದು ಹೇಳಿರುವರು. ಆದರೆ ಇದಕ್ಕೆ ಇನ್ನೂ ಪುಷ್ಟಿ ದೊರೆತಿಲ್ಲ. ಐನಸ್ಟಯಿನನಾದರೂ ಒಂದು ಕಾರಣವನ್ನು ಹೇಳಿದ್ದಾರೆ. ಈಗ ಅದೇ ಸುಲಭವಾದ ಕಾರಣವಾಗಿರುತ್ತದೆ.

ವಿಶ್ವ ಕಿರಣಗಳ ಗುಣಧರ್ಮಗಳು ಅತಿ ಮಹತ್ವದ್ದಿರುತ್ತವೆ. ಅವೆಂದರೆ ಅವುಗಳ ಅಂತಃಪ್ರವೇಶ ಶಕ್ತಿ ಹಾಗೂ ಅವುಗಳಲ್ಲಿಯ ಅತ್ಯದ್ಭುತ ಶಕ್ತಿ (Colossal energy) ಇವುಗಳ ಅಂತಃಪ್ರವೇಶ ಶಕ್ತಿಯು ಯಾವದೇ ರೇಡಿಯೋ ಚಲನವಲನ ಧಾತುಗಳ ಕಿರಣಗಳ ಮತ್ತು ಕ್ಷ—ಕಿರಣಗಳ ಅಂತಃಪ್ರವೇಶ ಶಕ್ತಿಯನ್ನು ಮೀರುತ್ತದೆ. ಈ ಕಿರಣಗಳ ಅತಿ ಹೆಚ್ಚಾದ ವೇಗವು ಸೆಕೆಂದಿಗೆ ೩೬,೦೦೦,೦೦೦ ಮೈಲಾಗಿರುತ್ತದೆ. ಪ್ರತಿ ದಿವಸ ಈ ಪಿ. ಜಾರ್ಜನೆಂಬವನು ಲಂಡನದಲ್ಲಿ ನೂರು ಅಡಿ ಕೆಳಗಿನ ನೆಲಮನೆಯಲ್ಲಿ ಹೋಗಿ ಪರಮಾಣು ಶಕ್ತಿಗಿಂತಲೂ ಮಿಗಿಲಾದ ಈ ವಿಶ್ವ ಕಿರಣಗಳ ಸಂಶೋಧನೆಯಲ್ಲಿ ತೊಡಗಿರುತ್ತಾನೆ ಈ ಕಿರಣಗಳು ಮಾಂಸ, ಸಿಮೆಂಟ ಗೋಡೆ, ಮಣ್ಣು ಮೊದಲಾದವುಗಳಿಂದ ಪಾರಾಗಿ (pene trate) ಹೋಗುತ್ತದೆ. ಡಾ. ನೆಹಾರ ಎಂಬವರು ಮದ್ರಾಸಕ್ಕೆ ಬಂದು ಹಿಂದುಸ್ಥಾನ ಸರಕಾರದ ಹವಾಮಾನ ಸಂಶೋಧನ ಶಾಖೆಯವರ ಸಹಾಯದಿಂದ ಈ ವಿಶ್ವ ಕಿರಣಗಳ ಬಗ್ಗೆ ಮಿಲಿಕನ್ನರು ಹೇಳಿದ್ದನ್ನು ಮನಗಂಡರು. ಒಂದು ಯುರೇನಿಯಮ್ ಪರಮಾಣುವನ್ನು ಭೇದಿಸಿದರೆ ಹತ್ತು ದಶಕೋಟಿ ಹೋಲ್ಟದಷ್ಟು ಶಕ್ತಿ ಹೊರಹೊಮ್ಮಿ ಅದು ಕೆಲವು ಫೂಟು ನೆಲವನ್ನು ಸೀಳುವದು. ಆದರೆ ಒಂದು ವಿಶ್ವ ಕಿರಣ ಪರಮಾಣುವನ್ನು ಭೇದಿಸಿದರೆ ೧೦ ಕೋಟ್ಯಾನುಕೋಟಿಯಷ್ಟು ಹೋಲ್ಟ ಶಕ್ತಿಯು ಹೊರಹೊಮ್ಮಿ ಅದು ಎಷ್ಟೋ ನೂರು ಫೂಟು ನೆಲವನ್ನು ಕೊರೆಯುವದು. ಇದರಿಂದ ಅದರ ಶಕ್ತಿಯು ಮನನವಾಗುವದು. ಈ ಎಲ್ಲ ಕಾರಣಗಳಿಗಾಗಿಯೇ ಮುಂದಿನ ದಿವಗಳಲ್ಲಿ ವಿಶ್ವ ಕಿರಣಗಳು ವಿಶ್ವದಲ್ಲಿ ಅತಿ ಅಗ್ರಸ್ಥಾನವನ್ನು ವಹಿಸಲಿವೆಯೆಂದು ಧೈರ್ಯದಿಂದ ಹೇಳಬಹುದು.

ಅದೇನೇ ಆದರೂ ಮಾನವನ ನವ ನಾಗರಿಕತೆಯು ಅದನ್ನೇ ಅವಲಂಬಿಸಿದೆಯೆಂದು ಸಾರಬಹುದು. ಇತ್ತೀಚೆಗೆ ರಾಷ್ಟ್ರಗಳಲ್ಲಿ ಮೈತ್ರಿಯು ಕೆಟ್ಟು ಇಂಥ ಅಗಾಧವಾದ ಶಕ್ತಿಗಳನ್ನು ವಶಪಡಿಸಿಕೊಳ್ಳುವದರಲ್ಲಿ ತಿಕ್ಕಾಟ ನಡೆದಿದೆ. ಇದೆಲ್ಲ ವಿಜ್ಞಾನದ ವಂಚನೆ. ಅಧಿಕಾರಮದಾಂಧತೆಯೇ ಇದಕ್ಕೆ ಕಾರಣ. ಅವರು ಜಾಗತಿಕ ಸುಖಶಾಂತಿಗಳ ಪ್ರಗತಿಗಳಿಗಾಗಿ ಇಂಥ ಶಕ್ತಿಗಳನ್ನು ಉಪಯೋಗಿಸದೆ ಮಾನವನ ಅವನತಿಗಾಗಿ ಅವುಗಳನ್ನು ಬಳಸುತ್ತಾರೆ. ಇನ್ನಾದರೂ ಬುದ್ಧಿ ರಾಷ್ಟ್ರಗಳು ಬಿಚ್ಚು ಮನಸ್ಸಿನಿಂದ ಒಂದುಗೂಡಬೇಕು. ಇಲ್ಲದೆ ಹೋದರೆ ಜಗತ್ತಿನ ಜ್ವಾಲಾಮುಖಿಗೆ ಅವರೇ ಮೂಲರಾಗುವರು, ಇದಕ್ಕೆ ವಿಜ್ಞಾನಿಯು ಕಾರಣನಲ್ಲ. ಆದ್ದರಿಂದ ಮುಂದಿನ ಜಗತ್ತು ವಿಶ್ವ ಕಿರಣಗಳ ಶಕ್ತಿಯನ್ನೇ ಅವಲಂಬಿಸಿದೆ. ಇವು ಪರಮಾಣು ಬಾಂಬನ್ನು ಮರೆಯಿಸುವದರಲ್ಲಿ ಯಾವ ಸಂದೇಹವಿಲ್ಲ. ಸೋವ್ಹಿಯೆಟ್ ಸರಕಾರದವರು ಕಾಕೇಶಸ್ ಪರ್ವತ ಶಿಖರಗಳಲ್ಲಿ ೧೯೩೬ರಿಂದಲೂ ವಿಶ್ವ ಕಿರಣಗಳ ಗೋಪ್ಯವನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತಿದ್ದಾರೆ. ಈ ಸಂಶೋಧನೆಯನ್ನು ಮುಂದುವರಿಸಲು ಡಾ. ವೆಕ್‌ಸುಲರ್ (Dr. Veeksuller) ರ ನಾಯಕತ್ವದಲ್ಲಿ ಜಗತ್ತಿನಲ್ಲಿಯೇ ಅತಿ ಉನ್ನತವಾದ ಪಾಮಿರ್ ಪೀಠಭೂಮಿಗೆ (Pamir plateau) ಒಂದು ವಿಜ್ಞಾನಿಗಳ ಮಂಡಲವನ್ನು ಕಳುಹಿದ್ದಾರೆ. ಅವರ ಈ ಕಾರ್ಯವು ಕೆಲಮಟ್ಟಿಗೆ ಯಶಸ್ವಿಯಾಗಿದೆಯೆಂಬ ವಾರ್ತೆಯಿದೆ. ಇಂಥ ವಿಶ್ವ ಕಿರಣಗಳ ಯಾಂತ್ರಿಕ ವಿಚ್ಛೇದನದ ಗುಟ್ಟು ಹೊರಬಿದ್ದರೆ ಎಂಥ ಪರಮಾಣು ಶಕ್ತಿಯನ್ನು ಮರೆಯಿಸುವದರಲ್ಲಿ ಯಾವ ಶಂಕೆಯಿಲ್ಲ ಮುಂದೆ ಕ್ರಾಂತಿಕಾರಕ ಪರಿಣಾಮಗಳನ್ನು ಕಾಣಬಹುದು. ಏನೇ ಇದ್ದರೂ ಪರಮಾಣು ಶಕ್ತಿಯನ್ನು ನಾಗರಿಕತೆಯ ಸದುಪಯೋಗಕ್ಕಾಗಿ ವಿನಿಯೋಗಿಸುವಂತೆ ವಿಶ್ವ ಕಿರಣ ಶಕ್ತಿಯನ್ನೂ ಸದುಪಯೋಗ ಮಾಡಬಹುದು.

ಭಾರತದ ಪ್ರಾಚೀನತೆಯ ಮೇಲೆ ಹೊಸ ಬೆಳಕು

೬೦೦೦ ವರ್ಷ ಹಿಂದಿನ ನಾಗರಿಕತೆಯ ಅವಶೇಷಗಳು

ನರ್ಮದಾತೀರದಲ್ಲಿ ಹೊಸ ಸಂಶೋಧನ

೧೯೨೧ರ ವರೆಗೂ ಹಿಂದುಸ್ಥಾನದ ನಾಗರಿಕತೆಯ ದೃಷ್ಟಿಯಲ್ಲಿ ಅಷ್ಟೇನೂ ಹಳೆಯದಲ್ಲೆಂಬ ಭಾವನೆ ಪ್ರಚಲಿತವಾಗಿತ್ತು. ಆದರೆ ಆ ವರ್ಷ ಹರಪ್ಪಾ ಮತ್ತು ಮೊಹೆಂಜೊದಾರೊ(ಸಿಂಧು)ಗಳಲ್ಲಿ ಸಿಕ್ಕಿದ ಭೂಗತವಾದ ಇತಿಹಾಸಪೂರ್ವದ ಪ್ರಾಚೀನ ನಗರಗಳ ಅವಶೇಷಗಳಿಂದ ಈ ದೇಶದ ನಾಗರಿಕತೆ ಕ್ರಿಸ್ತಪೂರ್ವ ೩೦೦೦ ವರ್ಷಗಳಷ್ಟು ಹಳೆಯದೂ ಇಜಿಪ್ತ ಮತ್ತು ಇರಾಕ ನಾಗರಿಕತೆಗಳಿಗೆ ಸಮಕಾಲೀನವೂ ಎಂದು ಸಿದ್ಧವಾಯಿತು. ಆದರೆ ಈಗ ಶ್ರೀ ಅಮೃತ ಪಾಂಡ್ಯರು ನರ್ಮದಾ ನದೀ ತೀರದಲ್ಲಿ ನಡೆಸಿದ ಸಂಶೋಧನೆಗಳಿಂದ ರಾಜಪಿಪ್ಲ ಸಂಸ್ಥಾನದ ಕೆಲ ಭಾಗಗಳಲ್ಲಿಯೂ ಮಧ್ಯ ಹಿಂದುಸ್ಥಾನದಲ್ಲಿಯೂ ಹರಪ್ಪ ಸಂಸ್ಕೃತಿಗಿಂತಲೂ ಒಂದು ಸಾವಿರ ವರ್ಷ ಹಳೆಯ ನಾಗರಿಕತೆಯೊಂದು ಹಬ್ಬಿತ್ತೆಂದು ವಿದಿತವಾಗಿದೆ. ಲೋಹಯುಗಕ್ಕಿಂತ ಹಿಂದಿನ ನೂತನ ಶಿಲಾಯುಗದ ಮಟ್ಟದ ನಾಗರಿಕತೆಯ ಕಾಲದ ನಗರಗಳೆಂದು ಸಿದ್ಧವಾಗಿದೆ.

ಕೃಷಿ ಮೂಲ

ನರ್ಮದಾ ಸಂಸ್ಕೃತಿಯೆಂದು ಕರೆಯಬಹುದಾದ ಇದು ಕೃಷಿಮೂಲ ಸಂಸ್ಕೃತಿಯೆಂದು ತೋರುತ್ತದೆ. ಅದರ ಕರ್ತೃಗಳಿಗೆ ಲೋಹದ ಉಪಯೋಗ ಗೊತ್ತಿದ್ದಿಲ್ಲವಾದರೂ ಶಿಲಾ ಸಂಸ್ಕೃತಿಯಲ್ಲಿ ಅವರು ಬಹಳ ಮುಂ[...]ದಿದ್ದರು. ಔದ್ಯೋಗಿಕ ಮತ್ತು ಅಲಂ[...] ಕಲೆಗಳು ಮುಖ್ಯವಾಗಿ ಶಂಖದ ಕೆತ್ತನೆ, [...]ನ ಒಡವೆಗಳು ಮತ್ತು ಭಿತ್ತಿ ಚಿತ್ರಗಳು—[...]ವರಿಗೆ ಒಳ್ಳೆ ಕೈಗೂಡಿದ್ದವು. ಅದಕ್ಕಿಂತಲೂ ಹೆಚ್ಚಾಗಿ, ಅವರ ಸಂಸ್ಕೃತಿ ನಗರ ರಚನೆಯ ಮಟ್ಟಕ್ಕೆ ಮುಟ್ಟಿದ್ದಿತು. ಆ ಕಾಲದಲ್ಲಿ ಸುಮೇರು ಮತ್ತು ಇಜಿಪ್ತ ದೇಶಗಳಲ್ಲಿ ಕೂಡ ನಗರಜೀವನ ಇದ್ದಿದ್ದಿಲ್ಲವೆಂಬುದನ್ನು ಮರೆಯತಕ್ಕದ್ದಲ್ಲ.

ಕ್ರಿಸ್ತಪೂರ್ವ ೮೦೦೦ ವರ್ಷಗಳಷ್ಟು ಹಳೆಯ ಈ ನರ್ಮದಾ ಸಂಸ್ಕೃತಿ, ಅದಕ್ಕೂ ಒಂದು ಸಾವಿರ ವರ್ಷ ಹಿಂದೆ ಮಧ್ಯ ಏಶಿಯಾದಿಂದ ಅಫಗಾಣಿಸ್ತಾನ, ಇರಾಣ, ಇರಾಕ ಸಿರಿಯಾಗಳಲ್ಲಿ ಪ್ರಾರಂಭವಾದ ಕೃಷಿವಿದ್ಯೆಯ ವಿಸ್ತರಣದ ಪರಿಣಾಮವಾಗಿ ಹುಟ್ಟಿರಬೇಕು. ಆಗ ಇನ್ನೂ ನೀಲ, ಯುಫ್ರೆಟಿಸ್-ಟಿಗ್ರಾಸಾ, ಸರಸ್ವತೀ-ಗಂಗಾ, ಸಿಂಧು, ಹ್ವಾಂಗ್‌ಹೋ ನದೀತೀರಗಳ ಹುಲುಸು ಭೂಮಿಗಳು ಇನ್ನೂ ಸಮುದ್ರದಡಿಯಲ್ಲಿ ರೂಪಗೊಳ್ಳುತ್ತಿದ್ದವು. ಆದರೆ ನರ್ಮದೆಯಂಥ ಕೆಲ ಭಾರತೀಯ ನದಿಗಳು ಆಗಲೇ ರೂಪುಗೊಂಡುಬಿಟ್ಟಿದ್ದವು. ಇರಾಣ ಪೀಠಭೂಮಿಯಲ್ಲಿದ್ದ ಆದಿ ಕೃಷಕ ಜನರ ವೃದ್ಧಿ ರಭಸದಿಂದಾಗುತ್ತಿದ್ದುದರಿಂದ ಹೊಸ ಕೃಷಿಭೂಮಿಗಳನ್ನು ಹುಡುಕುತ್ತ ಅವರಲ್ಲಿ ಕೆಲವರು ವಿಂಧ್ಯ—ಸಾತಪುಡ ಪರ್ವತ ಮಾಲೆಗಳ ನಡುವೆ ಹಬ್ಬಿದ ನರ್ಮದಾ ತೀರದ ಸುಫಲ ಭೂಮಿಗೆ ಅವರಲ್ಲಿ ಕೆಲವರು ವಲಸೆ ಬಂದಿರಬೇಕು. ಆಗ ಸಿಂಧೂ—ಸರಸ್ವತಿ ನದಿಗಳಾಗಲಿ, ಯುಫ್ರಟಿಸ್—ಟಿಗ್ರಿಸಗಳಾಗಲಿ ಇನ್ನೂ ಇದ್ದೇ ಇಲ್ಲ.

ಭೂಗರ್ಭ ಸಂಶೋಧನೆಯಿಂದ ಈ ನರ್ಮದಾ ಸಂಸ್ಕೃತಿಯ ಪ್ರಥಮ ಸ್ವರೂಪ ಹಿಂದುಸ್ಥಾನವನ್ನು ಪಶ್ಚಿಮದಿಂದ ಪ್ರವೇಶಿಸಿ ಪೂರ್ವಕ್ಕೆ ಹಬ್ಬುತ್ತ ಗಂಗಾ ತೀರದ ವರೆಗೆ ಹಬ್ಬಿತೆಂದು ತೋರಬರುತ್ತದೆ. ಈ ಪ್ರಾಚೀನ ಸಂಸ್ಕೃತಿಯ ಕಾಲದ ಅನೇಕ ಹಳ್ಳಿಗಳನ್ನೂ ನಗರಗಳನ್ನೂ ರಾಜಪಿಪ್ಲ ಮತ್ತು ಮಧ್ಯ ಹಿಂದುಸ್ಥಾನ ಪ್ರದೇಶಗಳಲ್ಲಿ ಕಂಡು ಹಿಡಿಯಲಾಗಿದೆ.

ಲೋಹದ ಕುರುಹಿಲ್ಲ

ನರ್ಮದಾ ಸಂಸ್ಕೃತಿಯ ಜನರು ಕಲ್ಲುಹೂರು ಮಣ್ಣುಗಳಿಂದ ಕಟ್ಟಿದ ಮನೆಗಳಲ್ಲಿ ವಾಸಿಸುತ್ತಿದ್ದರು. ಅವರ ಶಸ್ತ್ರಾಸ್ತ್ರ, ಆಯುಧ ಮೊದಲಾದ ಸಾಮಗ್ರಿಗಳೆಲ್ಲವೂ ಹಲ ಬಗೆಯ ಕಲ್ಲುಗಳಿಂದ ರಚಿಸಲ್ಪಡುತ್ತಿದ್ದವು. ಲೋಹದ ವಸ್ತುಗಳ ಕುರುಹು ಎಲ್ಲಿಯೂ ನೋಡ ಸಿಕ್ಕಿಲ್ಲ. ಅವರ ಮಣ್ಣಿನ ಪಾತ್ರೆ ಪದಾರ್ಥಗಳಲ್ಲಿ ಸರಳ ರೇಖಾ ಚಿತ್ರಗಳನ್ನು ಕೆತ್ತಿದ್ದು ಇವೆಲ್ಲ ಕೆಂಪು ಬಣ್ಣದ ಮೇಲೆ ಕರಿ ಗೆರೆಗಳನ್ನು ಚಿತ್ರಿಸಿದ್ದು ಕಾಣಬಂದಿದೆ. ಅವರಿಗೆ ಗಾಜ ಹಚ್ಚುವವಿದ್ಯೆಯೂ ಗೊತ್ತಿತ್ತು. ಕಲ್ಲುಗಳಿಂದ ಸುಂದರ ಬಳೆಗಳನ್ನೂ ಭಾಂಡೆಗಳನ್ನೂ ಕೆತ್ತುತ್ತಿದ್ದರು ಆದರೆ ಅವರಿಗೆ ಗೊತ್ತಿದ್ದ ಅತಿ ಮಹತ್ವದ ವಿದ್ಯೆಯೆಂದರೆ ಗಾಜಿನ ಉದ್ಯಮ ಸುಮೇರಿಯನ್ನರಿಗೂ ಇಜಿಪ್ಶನ್ನರಿಗೂ ಆ ಕಾಲದಲ್ಲಿ ಗೊತ್ತಿಲ್ಲದ ವಿದ್ಯೆಯಿದು. ಅವರು ಒಂದು ಸಾವಿರ ವರ್ಷದ ನಂತರ ಅದನ್ನು ಕಲಿತರು. ನಿಜವಾಗಿ ಇಜಿಪ್ತದಲ್ಲಿಯೂ ಸುಮೇರುವಿನಲ್ಲಿಯೂ ಸಿಕ್ಕುವ ಪ್ರಾಚೀನ ಗಾಜಿನ ಒಡವೆಗಳು ನರ್ಮದಾ ತೀರದಿಂದ ಕಳಿಸಿದವಿರಬೇಕು.

ಹುಶಿಂಗಾಬಾದ, ಪಂಚಮಾಢಿ, ಮೊದಲಾದ ಸ್ಥಳಗಳಲ್ಲಿ ಈ ಮೊದಲೇ ಸಿಕ್ಕಿದ್ದ ಅಜ್ಞಾತ ಕಾಲದ ಅನಾದಿ ಬಣ್ಣದ ಚಿತ್ರಗಳು ಈ ನರ್ಮದಾ ಸಂಸ್ಕೃತಿಗೇ ಸೇರಿದವೆಂದು ಸಂಶೋಧನಗಳು ತೋರಿಸಿವೆ.

ಬೆರಗುಪಡಿಸುವ ಶೋಧ

ಆದರೆ ಎಲ್ಲಕ್ಕಿಂತ ಬೆರಗುಪಡಿಸುವ ಶೋಧವೆಂದರೆ ಈ ಸಂಸ್ಕೃತಿಯುಗಕ್ಕೆ ಸೇರಿದ ವಿಶಾಲ ನಗರವೊಂದರ ಅವಶೇಷಗಳ ಉಪಲಬ್ಧಿ. ಈ ನಗರ ಮೊಹೆಂಜೊದಾರೊಗಿಂತ ಒಂದು ಸಾವಿರ ವರ್ಷ ಪುರಾತನವಾಗಿದೆ. ಅದರಲ್ಲಿಯೂ ಈ ಲೋಹದ ಅರಿವಿಲ್ಲದ ಶಿಲಾಯುಗದ ಅವಶೇಷಗಳು ಪುರಾಣಗಳಲ್ಲಿ ಮಾಹಿಷ್ಮತಿ (ಕಾರ್ತವೀರ್ಯನ ರಾಜಧಾನಿ) ಯೆಂದು ಹೆಸರಾದ ಅಂದಿನ ಅನೂಪದೇಶದ ರಾಜಧಾನಿಯಿತ್ತೆಂದು ಉಲ್ಲೇಖಿಸಲ್ಪಟ್ಟ ಸ್ಥಳದಲ್ಲಿಯೆ ಸಿಕ್ಕಿದ್ದು ಇನ್ನಷ್ಟು ಕೌತುಕದ ಸಂಗತಿ. ಮಾಹಿಷ್ಮತಿ ನಗರವನ್ನು ಚಂದ್ರಗುಪ್ತನಿಗಿಂತ ೧೩೭ ಪೀಳಿಗೆ ಪೂರ್ವದಲ್ಲಿ ಒಂದು ಭಾರತೀಯ ಆರ್ಯಭಾಷೆಯನ್ನಾಡುವ ಪ್ರಾಚೀನ ರಾಜವಂಶದವರು ಸ್ಥಾಪಿಸಿದರೆಂದು ಪುರಾಣಗಳು ಹೇಳುತ್ತವೆ. ಆ ಭಾಷೆಯಲ್ಲಿ ಅವರು ಕಟ್ಟಿದ ಸೂಕ್ತಗಳು ಋಗ್ವೇದದಲ್ಲಿ ದೊರಕುತ್ತವೆ.

ಈ ಪ್ರಕಾರ ಭಾರತೀಯ ಸಂಶೋಧನೆಯ ಇತಿಹಾಸದಲ್ಲಿಯೆ ಮೊಟ್ಟ ಮೊದಲಾಗಿ ವೇದಪುರಾಣಗಳಲ್ಲಿ ಉಲ್ಲೇಖಿಸಲ್ಪಟ್ಟ ಐತಿಹ್ಯಗಳಿಗೂ ಅನಾದಿ ಕಾಲದ ಭೂಗರ್ಭ ಸಂಶೋಧನೆಗೂ ತಾಳೆಬಿದ್ದಂತಾಗಿದೆ.

ಇದರಿಂದ ನರ್ಮದಾ ತೀರದ ಸಂಸ್ಕೃತಿಯ ಕರ್ತೃಗಳು ಮಧ್ಯ ಏಶಿಯಾದಿಂದ ವಲಸೆ ಬಂದವರೆಂಬ ಪೌರಾಣಿಕ ಉಲ್ಲೇಖಗಳಿಗೆ ಭೂಗರ್ಭ ಸಂಶೋಧನೆಗಳ ಬೆಂಬಲ ದೊರೆತಂತಾಗಿದೆ. ಪೌರಾಣಿಕ ಜನರು ಪಾಮೀರ ಪೀಠಭೂಮಿಯ ಸಮೀಪದಿಂದ ಇಳಿದು ಬಂದವರೆಂದು ಪುರಾಣಗಳು ಹೇಳುವದೂ ನಿಜವಿರಬಹುದೆಂದು ಇದು ತೋರಿಸುತ್ತದೆ. ಈ ಸಂಶೋಧನೆಗಳನ್ನು ಇನ್ನಷ್ಟು ಮುಂದೆ ಸಾಗಿಸಿದರೆ ದಕ್ಷಿಣ ಏಶಿಯಾದ ಪ್ರಾಚೀನ ಇತಿಹಾಸದ ಬಗ್ಗೆ ನಾವು ಮಾಡಿಕೊಂಡಿರುವ ಕಲ್ಪನೆಗಳ ಬುಡವೇ ಬದಲಾಗಬಹುದೇನೋ.

ಕರ್ಮವೀರ
ಹರಿಜನ ಪುರವಣಿ

ರೊಕ್ಕ ಕೊಟ್ಟು ಕುರುಡುತನ ಕೊಳ್ಳುವದು

ವನಸ್ಪತಿ ತುಪ್ಪದ ದುಷ್ಪರಿಣಾಮಗಳನ್ನು ಕುರಿತು ನಾವು ಈ ಮೊದಲೇ ಬರೆದಿದ್ದೇವೆ. ಮುಂಬಯಿಯ ಹ್ಯಾಫಕಿನ್ ಪ್ರತಿಷ್ಠಾನದ ನಿರ್ದೇಶಕರಾದ ಸರ್. ಎಸ್. ಎಸ್. ಸೋಖಿಯವರು ಹ್ಯಾಫಕಿನ್ ಪ್ರತಿಷ್ಠಾನದಲ್ಲಿ ಹಾಯಡ್ರೋಜಿನ ಕೂಡಿಸಿದ (ಅಂದರೆ ಹೆಪ್ಪುಗಟ್ಟುವಂತೆ ರಾಸಾಯನಿಕ ಕ್ರಿಯೆ ಮಾಡಿದ) ಎಣ್ಣೆಯ ಪೋಷಕತೆಯ ಬಗ್ಗೆ ಮಾಡಿದ ಪ್ರಯೋಗಗಳಿಂದ ಈ ಕೆಳಗಿನ ವಿದ್ಯಮಾನಗಳು ಕಂಡುಬಂದಿವೆಯೆಂದು ಹೇಳುತ್ತಾರೆ:

೧. ಹೆಪ್ಪುಗಟ್ಟಿಸಿದ ಎಣ್ಣೆಗಳನ್ನು ಸೇವಿಸಿದ್ದರಿಂದ ಬೆಳವಣಿಗೆ ಕುಂಠಿತವಾಯಿತು.

೨. ದೇಹದಲ್ಲಿ ಕ್ಯಾಲ್ಸಿಯಂ ಸಾರಗ್ರಹಣಕ್ಕೆ ಅವುಗಳ ಸೇವನೆಯಿಂದ ಅಡ್ಡಿಯಾಯಿತು.

೩. ಅವುಗಳ ಸೇವನೆಯಿಂದ ದೇಹದಲ್ಲಿನ ಕೊಬ್ಬಿನ ರಚನೆ ಬದಲಾಯಿತು.

ಮೊನ್ನೆ ಮೊನ್ನೆ ಡಾ. ರಾಜೇಂದ್ರ ಪ್ರಸಾದರು ಕೌನ್ಸಿಲ ಆಫ ಸ್ಟೇಟದಲ್ಲಿಒಂದು ಹೇಳಿಕೆ ಕೊಟ್ಟು ವನಸ್ಪತಿಯ ತುಪ್ಪದ ಸೇವನೆ ಆರೋಗ್ಯಕ್ಕೆ ಹಾನಿಕರವೆಂದೂ ಅದು ದೃಷ್ಟಿದೋಷವನ್ನುಂಟು ಮಾಡುವದೆಂದು ಇಝ್ಝತನಗರ ಸಂಶೋಧನ ಪ್ರತಿಷ್ಠಾನದಿಂದ ವರದಿ ಬಂದಿದೆಯೆಂದೂ ತಿಳಿಸಿದರು. ಇಲಿಗಳ ಮೇಲೆ ಮಾಡಿದ ಪ್ರಯೋಗದಿಂದ ಅವು ಮೂರನೆ ಪೀಳಿಗೆಯಲ್ಲಿ ಕುರುಡಾದುದು ಕಂಡುಬಂತು. ಈ ಶಾಸ್ತ್ರೀಯ ಸಂಶೋಧನೆಗಳ ಪರಿಣಾಮ ತಿಳಿದ ಮೇಲೆ ಜನಹಿತ ದೃಷ್ಟಿಯುಳ್ಳ ಯಾವುದೇ ಸರಕಾರ ವನಸ್ಪತಿ ತುಪ್ಪದ ಉತ್ಪಾದನೆಯನ್ನು ಪ್ರತಿಬಂಧಿಸಿ ವನಸ್ಪತಿ ಉತ್ಪಾದಕರನ್ನು ಸಮಾಜದ್ರೋಹಿ ಸತ್ವಗಳೆಂದು ಬಂಧನದಲ್ಲಿಡಬಹುದಾಗಿತ್ತು. ಆದರೆ ಹಿಂದುಸ್ತಾನ ತನ್ನ ಅಹಿತಕಾರಿಗಳನ್ನು ಕೂಡ ಅವಚಿಕೊಳ್ಳುವ ಸಹನಶೀಲ ರಾಜ್ಯ.

ಸರಕಾರದವರು ತುಪ್ಪದೊಡನೆ ವನಸ್ಪತಿಯ ಮಿಶ್ರಣ ಮಾಡುವದನ್ನು ಕಂಡು ಹಿಡಿಯಲು ಅನುಕೂಲವಾಗುವಂತೆ ನೂರಕ್ಕೈದರಷ್ಟು ಅಂಶ ಮೂಲ ಎಣ್ಣೆಯನ್ನು ವನಸ್ಪತಿಯಲ್ಲಿ ಸೇರಿಸಿ ಅದಕ್ಕೆ ಬಣ್ಣವನ್ನು ಮಿಶ್ರ ಮಾಡಬೇಕೆಂಬ ನಿಯಮ ಮಾಡುವ ವಿಚಾರದಲ್ಲಿರುವರೆಂದು ಕೇಳುತ್ತೇವೆ. ತಜ್ಞ ಸಲಹೆಗಾರರ ಈ ವರದಿಯಂತೆ ಮಾಡಿದರೆ ಏನೂ ಪ್ರಯೋಜನವಿಲ್ಲೆಂದು ನಮಗೆ ಸಂಶಯವುಂಟು. ವನಸ್ಪತಿಯನ್ನು ಸಾಮಾನ್ಯವಾಗಿ ಶೇಂಗಾ ಎಣ್ಣೆಯಿಂದಲೋ ಸತ್ತಿಕಾಳಿನ ಎಣ್ಣೆಯಿಂದಲೋ ಸಿದ್ಧಗೊಳಿಸುತ್ತಾರೆ. ಈ ಎಣ್ಣೆಗಳನ್ನು ಅಲ್ಪ ಪ್ರಮಾಣದಲ್ಲಿ ಬೆರೆಸುವದರಿಂದ ಮಿಶ್ರಣವನ್ನು ಕಂಡುಹಿಡಿಯಲು ಯಾವ ಸಹಾಯವೂ ಆಗುವಂತಿಲ್ಲ. ನೂರಕ್ಕೆ ಹತ್ತರಷ್ಟಾದರೂ ಎಳ್ಳಿನ ಎಣ್ಣೆಯನ್ನು ಬೆರೆಸಿದರೇನೇ ಉಪಯೋಗವಾಗುವದೆಂದೂ ಎಳ್ಳೆಣ್ಣೆಯಲ್ಲದೆ ಬೇರಾವ ಎಣ್ಣೆಯೂ ಪ್ರಯೋಜನವಿಲ್ಲೆಂದೂ ವೈಜ್ಞಾನಿಕರ ಮತ. ಇದೂ ಇಲ್ಲದೆ ಬಣ್ಣ ಹಾಕಿದ್ದನ್ನು ಬಹಳ ಕಡಿಮೆ ವೆಚ್ಚದಲ್ಲಿ ತೆಗೆಯಲು ಬರುತ್ತದೆ. ಇಷ್ಟೆಲ್ಲ ದಾವಿಡ ಪ್ರಾಣಾಯಾಮದ ಅವಶ್ಯಕತೆಯೇನೋ ದೇವರೇ ಬಲ್ಲ.

ಈ ಉದ್ದಿಮೆಗಾರರು ಮಾಡುವ ವೆಚ್ಚದಿಂದ ರಾಷ್ಟ್ರಕ್ಕೆ ಯಾವ ಪ್ರಾಪ್ತಿಯೂ ಇಲ್ಲವೆಂಬದು ನಿಚ್ಚಳವಾಗಿಯೆ ಇದೆ. ದೇಶದ ಕೊಬ್ಬನ್ನೇನು ಅವರು ಎಳ್ಳಷ್ಟು ಹೆಚ್ಚಿಸುವದಿಲ್ಲ. ಅವರೇನಾದರೂ ಮಾಡುತಿದ್ದರೆ ಆ ಕೊಬ್ಬನ್ನು ಅಜೀರ್ಣಕರವಾಗುವಂತೆ ಮಾಡುತ್ತಾರೆ. ಅಷ್ಟು ಮಟ್ಟಿಗೆ ದೇಶದ ಕೊಬ್ಬಿನ ಸಂಪತ್ತಿಯನ್ನು ಅವರು ನಾಶಮಾಡುತ್ತಾರೆಂದಾಯಿತು. ಕಡಿಮೆ ಬೆಲೆಯಲ್ಲಿ ತಯಾರಿಸಲ್ಪಡುವ ತಾಜಾ ಎಣ್ಣೆಗಳನ್ನು ಅವರು ಇಮ್ಮಡಿ ಬೆಲೆ ಕೊಟ್ಟು ಕೊಂಡು ಕೊಳ್ಳುವದಲ್ಲದೆ, ಅವುಗಳ ನೈಸರ್ಗಿಕ ಆಹಾರ ಮೂಲ್ಯಗಳನ್ನು ಹಾಳು ಮಾಡಿ, ರಾಷ್ಟ್ರವನ್ನು ನಾನಾ ವಿಧದ ಅಪೌಷ್ಟಿಕತೆಯ ರೋಗಗಳಿಗೆ ಗುರಿಮಾಡುತ್ತಾರೆ. ಈ ಅಪಕಾರಕ್ಕೆ ಪ್ರತಿಯಾಗಿ ದೇಶ ತನ್ನ ಜನಶಕ್ತಿ, ಬಂಡವಲು, ಮಾನವ ಪ್ರಯತ್ನಗಳ ರೂಪದಲ್ಲಿ ಅವರಿಗೆ ಬೆಲೆ ತೆರಬೇಕು. ಸಾವಧಾನದಿಂದ [illegible]ಕ್ಷೆಯ ಪೂರ್ವಾಪರಗಳನ್ನು ಚಿಂತಿಸಿದಾಗ ನಮ್ಮ ಕೃತಿಯ ಬಗ್ಗೆ ನಮಗೇ ಆಶ್ಚರ್ಯವಾಗದಿರದು.

ಗೌಳಿಗರ ತುಪ್ಪದಲ್ಲಿ ಮಿಶ್ರಣ ಮಾಡುವದೇ ವನಸ್ಪತಿ ಉದ್ದಿಮೆಯ ಮುಖ್ಯ ಉದ್ದೇಶವಾಗಿರುವಷ್ಟು ಮಟ್ಟಿಗೆ ಅದು ಗೌಳಿಗರ ಉದ್ಯೋಗಕ್ಕೆ ಪ್ರತ್ಯಕ್ಷ ಉಪದ್ರವವೇ ಸರಿ. ಬಹುತೇಕ ಸಸ್ಯಾಹಾರಿಯಾಗಿರುವದೇಶದಲ್ಲಿತುಪ್ಪದ ಸೇವನೆ ಯಾವುದೇ ರೀತಿಯಿಂದ ಕಡಿಮೆಯಾದರೂ ಅದು ಜನರ ಆರೋಗ್ಯಕ್ಕೆ ಹಾನಿ ತರುತ್ತದೆ. ಪಾಶ್ಚಿಮಾತ್ಯ ರಾಷ್ಟ್ರಗಳು ಮಾರ್ಗರಾಯಿನ ಉಪಯೋಗಿಸುವವೆಂಬ ವಾದ ನಮ್ಮ ದೇಶಕ್ಕೆ ಅನ್ವಯಿಸುವದಿಲ್ಲ. ಅಲ್ಲಿ ಮಾರ್ಗರಾಯನನ್ನು ಬ್ರೆಡ್ಡಿನ ತುಣುಕುಗಳ ಮೇಲೆ ಬೆಣ್ಣೆಯ ಬದಲು ಉಪಯೋಗಿಸುತ್ತಾರೆ. ಅಲ್ಲದೆ ಅಲ್ಲಿಯ ವಾಯುಗುಣ ಸಮಶೀತೋಷ್ಣವಾಗಿರುವದರಿಂದ ಎಣ್ಣೆಯ ಮೇಲೆ ಹೆಚ್ಚು ಹಾಯಡ್ರೋಜಿನ ಕ್ರಿಯೆ ಬೇಕಾಗುವದಿಲ್ಲ. ನಮ್ಮ ದೇಶದಲ್ಲಿ ಹಾಗೆ ಮಾಡಿದರೆ ಎಣ್ಣೆ ಹೆಪ್ಪುಗಟ್ಟದೆ ಇನ್ನೂ ದ್ರವರೂಪದಲ್ಲೆ ಉಳಿಯುವದು. ಯುರೋಪಿಯನ್ನರು ಮಾಂಸಾಹಾರಿಗಳಾಗಿರುವರಿಂದಲೂಪ್ರಾಣಿಜನ್ಯ ಕೊಬ್ಬಿ (ಲಾರ್ಡ) ನಲ್ಲಿಯೆ ಅವರು ಅಡಿಗೆ ಮಾಡುವದರಿಂದಲೂ ಬೇರೆ ಬಗೆಯಿಂದ ಬೇಕಾದಷ್ಟು ಕೊಬ್ಬು ಅವರ ಮೈಸೇರುವದು. ಆದುದರಿಂದ ಬೇರೆ ದೇಶಗಳೊಡನೆ ಹೋಲಿಸುವದು ಬರಿ ಹಗರಣ.

ಹಿಂದುಸ್ತಾನದ ಅರ್ಥಿಕ ಪ್ರಣಾಲಿ ಗೋಪ್ರಧಾನವಾದುದು. ನೇಗಿಲಿಗೆ, ಸಾರಿಗೆಗೆ, ವಾಹನಕ್ಕೆ, ಹಾಲು ಕರೆಯಲಿಕ್ಕೆ ಎಲ್ಲಕ್ಕೂ ನಮಗೆ ಗೋವು ಬೇಕು. ಅದುದರಿಂದ ಗೋಸಂಗೋಪನೆಗೆ ಅಹಿತಕಾರಿಯಾದ ಯಾವುದೇ ಕ್ರಮದಿಂದ ನಮ್ಮ ರಾಷ್ಟ್ರೀಯ ಅರ್ಥಪ್ರಣಾಲಿಯೂ ಹಾನಿಗೊಳಗಾಗುತ್ತದೆ. ವನಸ್ಪತಿ ಉತ್ಪಾದನೆಯ ಹಿಂದು ಮುಂದನ್ನೆಲ್ಲ ಸರಿಯಾಗಿ ವಿಚಾರ ಮಾಡಿದರೆ, ಆ ಉದ್ಯೋಗ ಗೋಹತ್ಯೆಗೆ ಸಮಾನವೆಂದು ಗೊತ್ತಾಗದಿರದು. ಗೋವಿನಲ್ಲಿ ಪೂಜ್ಯಬುದ್ಧಿಯುಳ್ಳವರಾದರೂ ಪ್ರಶ್ನೆಯ ಈ ಸ್ವರೂಪವನ್ನು ಮನಸ್ಸಾಕ್ಷಿ ಪೂರ್ವಕ ಭಾವಿಸಿಕೊಂಡು ರಾಷ್ಟ್ರೀಯ ಹಿತಕ್ಕೆ ಘಾತಕವಾದ, ಕೇವಲ ಲೋಭ ಮೂಲವಾದ ಈ ಉದ್ದಿಮೆಯಿಂದ ದೂರ ಉಳಿಯಬೇಕೆಂದು ಹಾರೈಸುವೆವು.

ಇನ್ನು ಅರ್ಥಿಕ ದೃಷ್ಟಿಯಿಂದ ನೋಡಿದರೆ, ವನಸ್ಪತಿ ಕಾರಖಾನೆಗಳು ವನಸ್ಪತಿ ಎಣ್ಣೆಗಳ ಪೇಟೆಯಲ್ಲಿ ನುಗ್ಗುವದರಿಂದ ಸಾಮಾನ್ಯ ಎಣ್ಣೆಯ ಬೆಲೆಗಳು ಮೇಲೇರುವಂತೆ ಮಾಡುತ್ತವೆ. ಅದುದರಿಂದ ವನಸ್ಪತಿ ಎಣ್ಣೆಗಳನ್ನು ಸೇವಿಸುವ ಬಡವರು ತಮಗೆ ದೊರೆಯುವ ಏಕಮಾತ್ರ ಕೊಬ್ಬಿನ ಸಾಧನಕ್ಕೆ ಹೆಚ್ಚು ಬೆಲೆ ತೆರಬೇಕಾಗುವದು. ಈ ವನಸ್ಪತಿ ತುಪ್ಪವನ್ನು ಉಪಯೋಗಿಸುವ ಅನುಕೂಲವಂತ ವರ್ಗಗಳಾದರೋ ತಮಗೆ ಬಹುಶಃ ಅಪಾಯಕರವಾದ ವಸ್ತುಗಳಿಗೆ ಹೆಚ್ಚಿನ ಬೆಲೆಯನ್ನು ತೆತ್ತರೂ ಪ್ರತಿಫಲವಾಗಿ ಹಾಯಡ್ರೋಜಿನ್ ಪ್ರಯೋಗದಿಂದ ಪಾಚಕತೆಯನ್ನು ಕಳೆದುಕೊಂಡ ಈ ಎಣ್ಣೆಯಿಂದ ಏನನ್ನೂ ಪಡೆಯುವದಿಲ್ಲವೆನ್ನಬಹುದು. ನಿಯಂತ್ರಿತವಿದ್ದರೂ ಎಣ್ಣೆಯ ಬೆಲೆಗಳನ್ನು ಇದು ಏರಿಸುವದು ಮಾತ್ರವಲ್ಲ, ಪೇಟೆಯಲ್ಲಿ ಬಂಡವಳಗಾರರ ಪ್ರವೇಶವಾಗುವದರಿಂದ ಕಳ್ಳ ಪೇಟೆಯ ಕಡೆಗೆ ಬಲವು ಹೆಚ್ಚದಿರದು. ಬಡ ಬಳಕೆಗಾರರ ಆಯವ್ಯಯ ಪತ್ರಿಕೆಯ ಮೇಲೆ ಇದರ ದುಷ್ಪರಿಣಾಮ ಮತ್ತೆ ಆಗೇ ತೀರುವದು.

ಸಲಹೆ ಯೋಜನಾ ಮಂಡಲದವರು ಈ ತರಕಿನ ಉತ್ಪಾದನೆಯನ್ನು ೧೯೪೧ ರಲ್ಲಿದ್ದ ೬೨,೦೦೦ ಟನ್ನುಗಳಿಂದ ೧೯೫೦ರಲ್ಲಿ ೪,೦೦,೦೦೦ ಟನ್ನುಗಳಿಗೇರಿಸಬೇಕೆಂದು ಶಿಫಾರಸು ಮಾಡಿದ್ದನ್ನು ನೋಡಿ ನಮಗೆ ಆಚ್ಚರಿಯಾಗಿದೆ. ಉದ್ದಿಮೆಗಳೆಂದರೆ ಹಲ ಕೆಲವರಿಗೆ ಹಣಮಾಡುವ ಸಾಧನವೆಂದು ನಮ್ಮ ಎಣಿಕೆಯೋ ಅಥವಾ ಮಾನವ ಅವಶ್ಯಕತೆಗಳನ್ನು ಪೂರೈಸುವ ಸಾಧನೆಗಳೆಂದೊ ? ಈ ವಿಷಯದಲ್ಲಿ ನಮ್ಮ ಮಾರ್ಗದರ್ಶನಕ್ಕೆ ನೈತಿಕ ನಿಯಮಗಳೇನೂ ಇರಬೇಡವೆ ? ನಮ್ಮ ಔದ್ಯೋಗಿಕ ಧೋರಣೆ ಭೂತಯಾಶೂನ್ಯವಾಗಿರಬೇಕೆ? ಹಾಗಿದ್ದರೆ ನಾವು ವನ್ಯಪಶುತ್ವದ ದಾರಿ ಹಿಡಿದಿದ್ದೇವೆ. ಈ ಉದ್ಯೋಗಕ್ಕೆ ಇನ್ನು ತಡವಿಲ್ಲದೆ ಪ್ರತಿಬಂಧ ಹಾಕಲಾಗುವದೆಂದು ನಂಬುತ್ತೇವೆ.

ಜೆ. ಸಿ. ಕುಮಾರಪ್ಪ.

ಉಜ್ಜನಕ ಸ್ವಾತಂತ್ರ್ಯ

(ಅಲಹಾಬಾದದಲ್ಲಿ ಸೇರಿದ್ದ ಪ್ರಾಂತಿಕ ಕಾಂಗ್ರೆಸ ಸಮಿತಿಗಳ| ಅಧ್ಯಕ್ಷರು ಹಾಗು ಕಾರ್ಯದರ್ಶಿಗಳ ಪರಿಷತ್ತಿನಲ್ಲಿ ಅಚಾರ್ಯ ಕೃಪಲಾನಿಯವರು ಮಾಡಿದ ಭಾಷಣದ ತಿರುಳು ಹೀಗಿದೆ.)

ಹಿಂದೆ ತಮ್ಮ ಶಾಲೆ ಕಾಲೇಜುಗಳನ್ನು ಹಾಗು ವೃತ್ತಿವ್ಯವಸಾಯಗಳನ್ನು ಬಿಟ್ಟು ಸೆರೆಮನೆಗೆ ಹೋದವರೂ ಲಾಠಿಯ ಪೆಟ್ಟುಗಳನ್ನು ತಿಂದವರೂ ನಮ್ಮಲ್ಲಿರುವರು. ಅಗ ನಮ್ಮನ್ನು ಪ್ರೇರಿಸಿದ ತ್ಯಾಗದ ಹಾಗೂ ಸಾದಾ ಜೀವನದ ಧ್ಯೇಯಗಳೇ ನಮ್ಮನ್ನು ಬದುಕಿಸುತ್ತ ಹೋಗುವವೆಂದು ನಾನು ಆಶಿಸುತ್ತೇನೆ.

ಪ್ರತಿಫಲಾಪೇಕ್ಷೆ

ಆಗ ನಮ್ಮ ತ್ಯಾಗಕ್ಕೆ ಭೌತಿಕ ಪ್ರತಿಫಲ ಬೇಕೆಂದು ಕನಸಿನಲ್ಲಿ ಕೂಡ ನಾವು ಬಯಸಲಿಲ್ಲ. ಆದರೆ ಇಂದು ಇಂತಹ ಪ್ರತಿಫಲದ, ಸಂಭವವು ಹೆಚ್ಚೆಚ್ಚು ಪ್ರತ್ಯಕ್ಷವಾಗಹತ್ತಿದಂತೆ ಭೀಕರವಾದ ಆಮಿಷಗಳಿಗೆ ನಾವು ಬಲಿಯಾಗಹತ್ತಿದ್ದೇವೆ. ಅವುಗಳನ್ನೆಲ್ಲ ಪ್ರತಿಭಟಿಸುವಷ್ಟು ನಮ್ಮಲ್ಲೆಲ್ಲರೂ ಸಮರ್ಥರಾಗಿಲ್ಲ. ನಾವು ಬಹಳ ಮೃದು ಹಾಗು ಸುಖಲೋಲುಪರಾಗ ಹತ್ತಿರುವೆವು. ನಾವು ಅಧಿಕಾರ ಸ್ಥಳಗಳ ಮತ್ತು ಮಂತ್ರಿಪದಗಳ ಬೆನ್ನುಹತ್ತಿದ್ದೇವೆ. ಮತ್ತು ಅವುಗಳನ್ನು ಪಡೆದವರನ್ನು ಕಂಡು ನಾವು ಅಸೂಯೆಪಡುತ್ತಿದ್ದೇವೆ.

ಅಧಿಕಾರ ಸ್ಥಳದಲ್ಲಿರುವಾಗ ಯಾವ ಬ್ರಿಟಿಶ ಅಧಿಕಾರಿಗಳ ರೀತಿಗಳನ್ನು ಧಿಕ್ಕರಿಸುತ್ತಿದ್ದೆವೋ ಈಗ ಅವುಗಳನ್ನೇ ನಾವು ಅನುಕರಿಸುತ್ತಿದ್ದೇವೆ. ಸ್ವಯಂಸ್ಫೂರ್ತಿ, ತ್ಯಾಗ ಹಾಗು ಸಂಯಮದ ನೆಲೆಗಟ್ಟಿನ ಮೇಲೆ ನಿಂತಿದೆ ನಮ್ಮ ಸಂಸ್ಥೆ. ಈ ಧ್ಯೇಯಗಳನ್ನು ನಾವು ಇಷ್ಟು ಸುಲಭವಾಗಿ ಬಿಟ್ಟುಕೊಟ್ಟರೆ ನಮ್ಮ ಜನರಿಗೆ ನಿಜವಾದ ಸ್ವರಾಜ್ಯವನ್ನು ನಾವು ತಂದುಕೊಡಲಾರೆವು.

ಆತ್ಮ ಸಂಯಮ

ವಸ್ತುತಃ ಆತ್ಮಸಂಯಮವಿಲ್ಲದೆ ನಿಜವಾದ ಸ್ವರಾಜ್ಯ ಇರಲಾರದು. ಪ್ರತಿಯೊಬ್ಬನಿಗೆ ಮನಸ್ಸಿಗೆ ಬಂದಂತೆ ಮಾಡುವ ಅಧಿಕಾರವೇ ಸ್ವಾತಂತ್ರ್ಯವೆಂದಾದರೆ ಜಗತ್ತಿನಲ್ಲಿ ಬೇರೆಡೆಯಲ್ಲಿ ಇರುವದಕ್ಕಿಂತಲೂ ಹೆಚ್ಚಿನ ಇಂತಹ ಸ್ವಾತಂತ್ರ್ಯವು ಹಿಂದುಸ್ತಾನದಲ್ಲಿದೆ.

ಬೇಕಾದಲ್ಲಿ ನಾವು ಉಗುಳಬಹುದು; ಮೂತ್ರ ವಿಸರ್ಜನ ಮಾಡಬಹುದು. ನಮ್ಮ ಮನೆಯೊಡತಿಯರು ತಪ್ಪದೆ ಮನೆಯಲ್ಲಿಯ ಕಸವನ್ನು ಬೀದಿಯಲ್ಲಿ ಚಲ್ಲುವರು. ನಮ್ಮ ಮಕ್ಕಳನ್ನು ಅಶಿಕ್ಷಿತರನ್ನಾಗಿಡಲು ಮತ್ತು ನಮ್ಮ ಮನೆಯಲ್ಲಿ ಬೆಳೆಸಿದ ಬೇನೆಗಳಿಂದ ನೆರೆಮನೆಯವರಿಗೆ ತೊಂದರೆಕೊಡಲು ನಾವು ಸ್ವತಂತ್ರರಿದ್ದೇವೆ.

ನಮಗೆ ಪೂಜ್ಯವೆಂದು ಹೇಳುವ ಗಂಗಾನದಿಯನ್ನು ಮಲಿನಗೊಳಿಸುವ ಸ್ವಾತಂತ್ರ್ಯವು ಥೇಮ್ಸ ನದಿಯು ತನಗೆ ಪೂಜ್ಯವೆಂದು ಸುಳ್ಳು ಬಡಿವಾರ ಬಡಿಯದಿರುವ ಆಂಗ್ಲೇಯನ ಸ್ವಾತಂತ್ರ್ಯಕ್ಕಿಂತಲೂ ಹೆಚ್ಚಿನದಾಗಿದೆ. ಇನ್ನೊಂದು ಉದಾರಣೆಯನ್ನು ಹೇಳುವದಾದರೆ, ಜೀವನದ ಅನುಭವವಿಲ್ಲದ ನಮ್ಮ ತರುಣ ವಿದ್ಯಾರ್ಥಿಗಳು ನಮಗೆ ಕೆಲವು ವಿಧಿಗಳನ್ನು ಹೇಳಿಕೊಡಲು ಹಿಂಜರಿಯುವದಿಲ್ಲ. ಆದರೆ ಜರ್ಮನಿಯ ವಿರುದ್ಧ ಯುದ್ಧವನ್ನು ಹೀಗೇಯೇ ಸಾಗಿಸಬೇಕೆಂದು ಹೇಳುವ ಧೈರ್ಯವು ಯಾವ ಅಂಗ್ಲ ವಿದ್ಯಾರ್ಥಿಗೂ ಇಲ್ಲ. ಬಿಹಾರದ ಪಕ್ಷ ಪ್ರವಾಸ ಸಂಚಾರದಲ್ಲಿ ತರುಣ ವಿದ್ಯಾರ್ಥಿಗಳು ಟಿಕೆಟಿಲ್ಲದೆ ನಿರಂತರವಾಗಿ ತನ್ನ ಗಾಡಿಯನ್ನು ಹತ್ತಿ ಯಾರ ಪರಿವೆಯೂ ಇಲ್ಲದೆ ಕಾಂಗ್ರೆಸ ಅಧ್ಯಕ್ಷನನ್ನು ಗೌರವಿಸುವ ಬಹಿರಂಗ ಉದ್ದೇಶದಿಂದ ಅನೇಕ ಸಲ ತರಪಳಿಯನ್ನು ಜಗ್ಗಿದರು. ಸ್ವಾತಂತ್ರ್ಯದ ಇಂತಹ ಪ್ರದರ್ಶನಗಳು ಇಂಗ್ಲಂಡೇ ಮೊದಲಾದ ಸ್ವತಂತ್ರದೇಶಗಳಲ್ಲಿ ಕಣ್ಣಿಗೆ ಬೀಳುವದಿಲ್ಲ.

ನಿಜವಾದ ಸ್ವಾತಂತ್ರ್ಯ

ನಿಜವಾದ ಸ್ವಾತಂತ್ರ್ಯವು ಉಜ್ಜನಕವಾಗಿರುವದು; ಅದೆಂದೂ ಆತ್ಮವಿನಾಶಕವಾಗಿರದು. ಸಂಯಮದಿಂದಲೇ ಅದರ ಅಭಿವೃದ್ಧಿ. ನಮ್ಮಲ್ಲಿ ಮ. ಗಾಂಧಿಯವರು ಸ್ವತಂತ್ರತಮ ವ್ಯಕ್ತಿಯಾಗಿದ್ದರೂ ಬೇಕಾದಾಗ ಹೊಗೆಸೊಪ್ಪು ಸೇದಲು ಇಲ್ಲವೆ, ಕುಡಿಯಲು ಇಲ್ಲವೆ ಸಿನೇಮಕ್ಕೆ ಹೋಗಲು ಅವರು ಸ್ವತಂತ್ರರಿಲ್ಲ. ಕತ್ತಿಯ ಧಾರೆಯ ಮೇಲೆ ಕುಣಿಯುವ ನರ್ತಕನ ಸ್ವಾತಂತ್ರ್ಯವೇ ಅವರ ಸ್ವಾತಂತ್ರ್ಯ.

ಅವರು ಏಕಕಾಲಕ್ಕೆ ಸ್ವತಂತ್ರತಮರೂ ಅಹುದು. ಬದ್ಧರೂ ಅಹುದು. ಅವರು ನ ಮ ಗೆ ಸ್ವಾ ಂ ತ ಪಾ ಠ ವ ನ್ನು ಕಲಿಸಿದರು; ನಿಗ್ರಹವನ್ನೂ ಬೋಧಿಸಿದರು. ಮೊದಲಿನದು ಸುಲಭಪಾಠವಾದುದರಿಂದ ನಾವು ಅವನ್ನು ಬೇಗ ಕಲಿತೆವು. ಎರಡನೆಯದನ್ನು ಕಲಿಯಲು ನಾವು ಮನಸ್ಸುಮಾಡಿಲ್ಲ. ಮಹಾಕಾರ್ಯ ಕ್ಷುದ್ರಮನಸ್ಸು ಎಂದೂ ಹೊಂದಲಾರವು.

ಹೆಚ್ಚಿನ ಹಿತಕ್ಕೆ ಕಡಿಮೆಯದನ್ನು ಬಲಿಗೊಡಲು ಕಲಿಯುವವರೆಗೆ ನಮಗೆ ಸ್ವರಾಜ್ಯ ದೊರೆಯದು.

ಬಿಹಾರದಲ್ಲಿಯ ನನ್ನ ಇತ್ತೀಚಿನ ಅನುಭವದಿಂದ ಒಂದು ದೃಷ್ಟಾಂತವನ್ನು ಹೇಳುವೆ. ಒಂದು ಉಗಿಬಂಡಿಗಳ ಕೂಟಕ್ಕೆ ಬರಲು ನಮಗೆ ತಡವಾಯಿತು. ನಾನು ಬಹಳ ಉದ್ವಿಗ್ನನಾದೆ. ಆದರೆ ಸ್ಥಳೀಯ ಕಾಂಗ್ರೆಸ ಕಾರ್ಯದರ್ಶಿಯು ನನ್ನ ಸಲುವಾಗಿ ಉಗಿಬಂಡೆಯನ್ನು ತಡೆಹಿಡಿಯಲಾಗಿದೆಂದು ಭರವಸೆಯನ್ನಿತ್ತು ನನ್ನ ತಳಮಳವನ್ನು ನಿವಾರಿಸಲು ಯತ್ನಿಸಿದ. ಇದು ನನಗೆ ಭೂಷಣವೊ? ಅಥವಾ ಅಗೌರವವೊ?

ಜನರ ಸೇವಕರೆಂದು ತಿಳಿಯದೆ ಅವರ ಮೇಲಿನ ಅರಸರು ತಾವೆಂದು ಕಾಂಗ್ರೆಸಿಗರು ನಡೆಯಹತ್ತಿದರೆ ನಮಗೆ ದೊರೆತಿರುವ ಸರಕಾರಗಳು ಕಾಂಗ್ರೆಸ ಸರಕಾರಗಳೇ ಹೊರತು ಜನರ ಸರಕಾರಗಳಲ್ಲೆಂದು ಹೇಳುವಲ್ಲಿ ಏನೂ ತಪ್ಪಾಗಲಾರದು. ಇಂತಹ ಆಳಿಕೆಯು ಹಿಂದಿನ ಇತಿಹಾಸದಲ್ಲಿಯ ಪಠಾಣ, ಮೊಗಲ, ರಜಪೂತ, ಮರಾಠಾ ಅಥವಾ ಶೀಖ ಆಳಿಕೆಗಿಂತ ಉತ್ತಮವಾಗದು.

ದಿಲ್ಲಿಯು ಸಾಮ್ರಾಜ್ಯಗಳ ಸಿಂಹಾಸನವೂ ಆಗಿದೆ; ಸ್ಮಶಾನವೂ ಆಗಿದೆ. ದಿಲ್ಲಿಯಲ್ಲಿಯ ಅಧಿಕಾರವು ಕೈಸೇರಿದರೆ ಸ್ವರಾಜ್ಯ ಬಂದಂತಾಯ್ತೆಂದು ಭಾವಿಸಿದರೆ ಅದು ತಿಳಿಗೇಡಿತನ. ಜನರ ಸೇವೆಯಿಂದಲೇ ಹಳ್ಳಿಗಳಲ್ಲಿ ನಮ್ಮ ಸ್ವರಾಜ್ಯವನ್ನು ಗಳಿಸಿಕೊಳ್ಳಬಹುದು. ಏರಲು ನೆರವಾದ ಏಣಿಯನ್ನೇ ಒದೆದು ಬಿಡುವದು ಆತ್ಮಘಾತ.

ಹಿಂಸೆಯಿಂದ ಅಪಾಯ

ಭೌತಿಕ ಅಮಿಷಗಳಿಗೆ ಆಹುತಿಯಾಗುವ ಹಾಗು ಪಕ್ಷ, ಜಾತಿ, ಪಂಗಡಗಳ ಸಂಕುಚಿತ ಹಿತಗಳಿಗೆ ವ್ಯಾಪಕವಾದ ರಾಷ್ಟ್ರೀಯ ಹಿತವನ್ನು ಬಲಿಗೊಡುವ ಉಭಯ ಗಂಡಾಂತರಗಳನ್ನು ಕುರಿತು ನಾನು ಮಾತಾಡಿದ್ದೇನೆ. ನಮ್ಮ ಮೂರನೆಯ ಮತ್ತು ಎಲ್ಲ ಗಂಡಾಂತರಗಳಿಗಿಂತ ಮಿಗಿಲಾದ ಗಂಡಾಂತರವೆಂದರೆ ಹಿಂಸೆ.

ಹಿಂಸೆ ಅಹಿಂಸೆಗಳ ಗುಣಾವಗುಣಗಳ ಬಗೆಗೆ ವಾದವನ್ನೆಬ್ಬಿಸುವ ಇಚ್ಛೆ ನನಗಿಲ್ಲ. ಈ ಕ್ಷಣಕ್ಕೆ ನನಗೆ ಹೇಳಬೇಕಾದುದಿಷ್ಟೇ; ನಾವಿಂದಿರುವ ಪರಿಸ್ಥಿತಿಯಲ್ಲಿ ಹಿಂಸೆಯು ನಮಗೆ ಘಾತಕವಾಗಿದೆ. ಬ್ರಿಟಿಷರ ವಿರುದ್ಧ ಹಿಂಸೆಯನ್ನು ನಾವು ಆಶ್ರಯಿಸಿದರೆ ಇಂದಿಲ್ಲ ನಾಳೆ-ನಾಳೆಗಿಂತಲೂ ಇಂದೇ-ಒಬ್ಬರೊಬ್ಬರ ವಿರುದ್ಧ ಅದನ್ನು ಪ್ರಯೋಗಿಸಲಿಳಿಸುತ್ತೇವೆ.

ಅವಶ್ಯಕವಾದ ಆತ್ಮಾನುಶಾಸನ ಮತ್ತು ಅದರ ಪ್ರಯೋಗವನ್ನು ನಿಯಮಿಸುವ ಅವಶ್ಯಕ ಸಂಕೇತಗಳು ಬ್ರಿಟಿಷರಲ್ಲಿದಂತೆ ನಮ್ಮಲ್ಲಿಲ್ಲ.

ನಮ್ಮಲ್ಲಿರುವದಕ್ಕಿಂತಲೂ ಬ್ರಿಟನ್ನಿನಲ್ಲಿ ವಿವಿಧ ರಾಜಕೀಯ ಪಕ್ಷೋಪಪಕ್ಷಗಳಲ್ಲಿ ಪರಸ್ಪರ ಸ್ಪರ್ಧೆ, ಈರ್ಷಾಸೂಯೆಗಳಿಗೇನೂ ಕಡಿಮೆಯಿಲ್ಲ. ಆದರೂ ಎರಡನೆಯ ಪಕ್ಷವನ್ನು ಬೆದರಿಸಲು ಯಾವ ಪಕ್ಷವೂ ಹಿಂಸೆಯನ್ನಾಶ್ರಯಿಸ ಬಯಸುವದಿಲ್ಲ. ಇಷ್ಟೇ ಅಲ್ಲ, ಜರ್ಮನ್ನರ ಕೂಡ ಇಲ್ಲವೆ ಹಿಂದೀಯರ ಕೂಡ ಚರ್ಚಿಲ್ಲರು ಎಷ್ಟೇ

—೧೧ನೇ ಪುಟಕ್ಕೆ

ಬಿಹಾರ ಯಾತ್ರೆ

೧೭—೩—೪೭

ಮಸೌಡಿಯಲ್ಲಿ ನೆರೆದ ಜನಗುಂಪು ಹತ್ತು ಸಾವಿರಕ್ಕೂ ಮಿಕ್ಕಿತ್ತೆಂದು ಅಧಿಕೃತ ಅಂದಾಜಿತ್ತು. ರಾಮಧುನಿ ನಡೆವಾಗ ಅವರಲ್ಲಿ ಬಹ್ವಂಶ ಸ್ತ್ರೀಪುರುಷರು ಭಜನೆಯಲ್ಲಿ ಭಾಗವಹಿಸಿದ್ದರು. ಅದಕ್ಕಾಗಿ ಪ್ರೇಕ್ಷಕರನ್ನು ಅಭಿನಂದಿಸಿ ಗಾಂಧೀಜಿ ಭಾಷಣವನ್ನು ಪ್ರಾರಂಭಿಸಿದರು. ಆ ಮೇಲೆ, ತಾವು ಬಿಹಾರ ಯಾತ್ರೆಯನ್ನು ಅಹಿಂಸಾ ಪ್ರಯೋಗಕ್ಕಾಗಿ ಕೈಕೊಂಡಿರದೆ ಗಂಭೀರ ಗತಪಕಾರಣಗಳಿಗಾಗಿ ಕೈಕೊಂಡಿರುವದಾಗಿ ಅವರು ಹೇಳಿದರು. ಮುಸ್ಲಿಮರು ಕ್ಲೇಶಕ್ಕೊಳಗಾದ ಸ್ಥಳಗಳಿಗೆ ತಾವು ಹೋಗುತ್ತೇನೆ. ಹಿಂದೂಗಳು ಯೋಗ್ಯವೂ ಸಮಂಜಸವೂ ಆದ ನ್ಯಾಯಪ್ರವೃತ್ತಿಗಳಿಂದ ಪಶ್ಚಾತ್ತಾಪವನ್ನು ಪ್ರದರ್ಶಿಸಬೇಕೆಂದು ಉಪದೇಶಿಸುತ್ತಿದ್ದರು. ಸಮೀಪದ ಹಿಂದಿನ ದಿವಸಗಳಲ್ಲಿ ಜಂಗಮರು ಮಕ್ಕಳನ್ನು ನಿರ್ದಯೆಯಿಂದ ಕೊಲೆಗಯ್ಯಲಾಯಿತು. ಗಂಡಸರ ಕೊಲೆಯು ಸಂಖ್ಯೆಯಾದರೂ ನೌಖಾಲಿಯ ಸಾಕಷ್ಟು ಗಂಭೀರ ಸ್ವರೂಪದ ಘಟನೆಗಳನ್ನು ಕೂಡ ಮರೆಸುವಷ್ಟು ಭಯಂಕರವಾಗಿತ್ತು. ತಮ್ಮ ಜೇಸರು ಹಿಡಿದು ಜೈ ಎಂದು ಹಿಡಿಯುವ ಇದೇಲು ಬಿಹಾರದ ಹಿಂದುಗಳು ನಿಜವಾದ ಪಶ್ಚಾತ್ತಾಪವನ್ನು ಪ್ರದರ್ಶಿಸಬೇಕೆಂದು ಗಾಂಧೀಜಿ ಅಪೇಕ್ಷಿಸಿದರು. ಪರಿಹಾರ ನಿಧಿಗೆ ಅವರು ಉದಾರ ಕಾಣಿಕೆಗಳನ್ನು ಕೊಡಬೇಕಷ್ಟೇ ಅಲ್ಲ, ಅದಕ್ಕೂ ಹೆಚ್ಚಾಗಿ, ಅವರು ಮುಂದೆ ಬಂದು ಮಾಡಿದ ಅಪರಾಧಗಳನ್ನು ತಮ್ಮ ಮುಂದಾದರೂ ಒಪ್ಪಿಕೊಳ್ಳಬೇಕು. ಇದೊಂದೇ ತಮಗೆ ಸ್ವಜ ಮನಶ್ಶಾಂತಿಯನ್ನು ಕೊಡಬಲ್ಲದೆಂದು ಗಾಂಧೀಜಿ ತಿಳಿಸಿದರು.

ಬೇರೆ ಬೇರೆ ಕಡೆಗಳಿಂದ ದುರ್ಘಟನೆಗಳ ವರದಿಗಳನ್ನು ಬೇಡಿದ್ದೇನೆಂದು ಅವರು ಮುಂದುವರಿಸಿದರು. ಅವುಗಳಲ್ಲಿ ಒಂದರ ಪ್ರಕಾರ ಅತ್ಯಾಚಾರದ ಪ್ರಾರಂಭ ಮುಸ್ಲಿಮರಿಂದಲೇ ಆಯಿತಂತೆ. ಉಪದ್ರವದ ಪ್ರಾರಂಭ ಹೇಗೆಯೇ ಆಗಿರಲಿ; ಅದರ ಇಷ್ಟು ಪ್ರಚಂಡ ಬಹುಸಂಖ್ಯಾಕರಾಗಿರುವ ಹಿಂದುಗಳು ನಿರಪರಾಧಿಗಳ ಹತ್ಯೆಗೆಳಸುವಷ್ಟು ನೀಚತನಕ್ಕೆ ಹೇಗೆ ಇಳಿದರೆಂಬುದೀಗ ತಿಳಿಯದಾಗಿದೆ. ನಿಜವಾದ ಪಶ್ಚಾತ್ತಾಪವೂ ಅದರೊಡನೆ ಪರಿಹಾರ ರೂಪದ ಪ್ರಾಯಶ್ಚಿತ್ತವೂ ಬಂದರೆ ಮಾತ್ರ ಈ ಬಂಧು— ಜಾತಿಗಳಲ್ಲಿ ಶಾಶ್ವತ ಶಾಂತಿ ನೆಲೆಯೂರಬಲ್ಲದು.

ಮುಸ್ಲಿಮರ ಕೈಯಲ್ಲಿ ಹಿಂದುಗಳು ಅನುಭವಿಸಿದ ಅನ್ಯಾಯಗಳನ್ನು ಸರಕಾರ ಅಲಕ್ಷಿಸುತಿದೆಯೆಂದೂ ಆ ವರದಿ ಆರೋಪಿಸುತ್ತದೆ. ಮುಸ್ಲಿಂ ಪಕ್ಷದಿಂದಲೂ ಮುಸ್ಲಿಮರ ದೂರನ್ನು ಕಡೆಗಣಿಸಿದ ಆರೋಪಗಳು ಬಂದಿವೆ. ಇವೆರಡೂ ವರದಿಗಳನ್ನು ನಂಬಲು ತಮಗೆ ಮನಸ್ಸಿಲ್ಲವೆಂದು ಗಾಂಧೀಜಿ ಹೇಳಿದರು. ಒಂದು ಪಕ್ಷಕ್ಕೆ ಪೂರ್ಣ ಉಪೇಕ್ಷೆಯನ್ನು ಅಥವಾ ಪಕ್ಷಪಾತವನ್ನು ತೋರಿಸುವ ಯಾವುದೇ ಲೋಕನಿಯುಕ್ತ ಸರಕಾರ ಬಹಳ ದಿನ ಬಾಳಲಾರದು. ಎಲ್ಲ ದೂರುಗಳನ್ನು ಕೇಳಿ, ಈ ಭಯಂಕರ ಗಲಭೆಗಳ ಕಾರಣವನ್ನು ಪರಿಶೀಲಿಸಿ, ಅಂಥ ದುರಂತದ ಪುನರಾವೃತ್ತಿಯನ್ನು ತಪ್ಪಿಸುವ ಉಪಾಯಗಳನ್ನು ಕಂಡು ಹಿಡಿಯುವಸಲುವಾಗಿ ಒಂದು ನಿಷ್ಪಕ್ಷಪಾತ ವಿಚಾರಣಾ ಮಂಡಲವನ್ನು ನೇಮಿಸುವ ನಿರ್ಧಾರವನ್ನು ಈಗಾಗಲೆ ಸರಕಾರ ಪ್ರಕಟಿಸಿದೆ. ಸಂಕಷ್ಟಕ್ಕೊಳಗಾದವರಿಗೆ ಹೇಗೆ ಪರಿಹಾರವನ್ನೊದಗಿಸಬೇಕೆಂಬ ಬಗ್ಗೆಯೂ ಆ ಮಂಡಲ ವರದಿ ಮಾಡಲಿದೆ. ತಮಗೆ ಪತ್ರಗಳನ್ನು ಕಳಿಸುವವರೆಲ್ಲರೂ ವಿಚಾರಣಾ ಮಂಡಲದ ಮುಂದೆ ಒಂದಿಸಬೇಕಾದ ಪ್ರಮಾಣಗಳನ್ನು ಸಿದ್ಧವಾಗಿರಿಸಲೆಂದು ಗಾಂಧೀಜಿ ಸೂಚಿಸಿದರು. ತಮ್ಮದು ನ್ಯಾಯಾಧಿಪತಿಯದೂ ಅಲ್ಲ. ವಾದಿ ವಕೀಲನದೂ ಅಲ್ಲ. ತಮ್ಮದು ಸುಧಾರಕನ, ಭೂತದಯಾಪರನ ಪಾತ್ರ. ಅದರಿಂದ ಗೊತ್ತಾಗಿರುವ ವಿಷ್ಯಮಾನಗಳನ್ನಷ್ಟೇ ಅನುಸರಿಸಿ ದುಷ್ಕರ್ಮಿಗಳಿಗೆ ತಮ್ಮ ಪಾಪಕ್ಕಾಗಿ ಪಶ್ಚಾತ್ತಾಪ ಪಡಲಿಕೆ ಹೇಳಿಕೊಳ್ಳುತ್ತೇನೆಂದು ಅವರು ಮುಗಿಸಿದರು.

೧೮-೩-೪೭

ಗಾಂಧೀಜಿಯವರು ತಾವು ಮಸೌಡಿಗೆ ಭೆಟ್ಟಿಯಿತ್ತದ್ದನ್ನು ಉಲ್ಲೇಖಿಸಿ ಅಲ್ಲಿ ಕಣ್ಣಾರೆ ಕಂಡಿದ್ದ ನಾಶವನ್ನು ಆವೇಶದಿಂದ ಬಣ್ಣಿಸಿದರು. ಮುಸ್ಲಿಂಲೀಗಿನ ವರದಿಯನ್ನು ಅವರು ಓದಿದ್ದು, ಅತಿ ರಂಜಿಸಿರುವದೆಂದು ಅವರು ನಂಬಿದ್ದರೂ ನಾಗಿ ಹೇಳಲು ಅವರಿಗೆ ವ್ಯಸನವಾಗುತ್ತಿತ್ತು. ಆದರೆ ಮಸೌಡಿಯ ವರ್ಣನೆಯಲ್ಲಿಯ ಬಹು ಭಾಗವು ಸತ್ಯವಾದದ್ದೆಂದು ಅವರಿಗೆ ಖಂಡಿತವಾಯಿತು. ಎಷ್ಟೇ ಪ್ರಾಮಾಣಿಕತನದಿಂದ ಮಾಡಿದ ಒಂದು ಘಟನೆಯು ಬಣ್ಣನೆಯನ್ನು ಓದುವವರಿಗೂ ಅದನ್ನೇ ಕಣ್ಣಾರೆ ಕಾಣುವುದಕ್ಕೂ ಬಹಳ ವ್ಯತ್ಯಾಸವಿರುತ್ತದೆ. ಧೌಖಾಲಿ ದಿನಾಚರಣೆಯಂದಂದಿನ ಉದ್ರೇಕವೆ ಈ ದುರ್ಘಟನೆಗೆ ಕಾರಣವೆಂದು ಅವರಿಗೆ ತಿಳಿಸಲಾಯಿತು. ೨೩ ನೇ ತಾರೀಖಿಗೆ ಬಿಹಾರದಲ್ಲಿ ಪಂಜಾಬ ದಿವಸವನ್ನು ಆಚರಿಸಲಾಗುವದೆಂಬ ಸುದ್ದಿಯನ್ನು ಕೇಳಿ ಮುಸ್ಲಿಂರು ಕಂಗೆಟ್ಟಿದ್ದಾರೆ ಎಂಬುದನ್ನು ಅವರಿಗೆ ಅರುಹಲಾಯಿತು. ಇದೊಂದು ನಿರಾಧಾರವಾದ ಸುದ್ದಿಯಾಗಲೆಂದು ಅವರು ಹಾರೈಸಿದರು. ಇಂಥ ದಿನವನ್ನಾಚರಿಸುವದೆಂದರೆ ಬಾಂಧವರಲ್ಲಿ ಪರಸ್ಪರ ಕೊಲೆ ನಡೆಸಲು ಆಮಂತ್ರಣವಿತ್ತಂತೆ ಎಂಬುದು ಸ್ಪಷ್ಟ. ಇಂಥ ದುರ್ದೈವದ ಘಟನೆಯೇನಾದರೂ ಬಿಹಾರದಲ್ಲಿ ಸಂಭವಿಸಿದರೆ ತಾವು ಅಗ್ನಿನಾರಾಯಣನಿಗೆ ಆಹುತಿಯಾಗುವದಾಗಿ ಮುಸ್ಲಿಂ ಸ್ನೇಹಿತರಿಗೆ ಆವರು ತಿಳಿಸಿದ್ದಾರೆ. ಅವಮಾನಾಸ್ಪದವಾದ ಇಂಥ ಘೋರ ದೃಶ್ಯವನ್ನು ನೋಡಲು ತಮ್ಮನ್ನು ಉಳಿಸಬೇಡ ಎಂಬುದೆ ದೇವರಲ್ಲಿ ಅವರ ಅವ್ಯಾಹತವಾದದ ಅಖಂಡ ಪ್ರಾರ್ಥನೆಯಾಗಿದೆ.

ಬೀರ ಗ್ರಾಮಕ್ಕೆ ಹೋಗುತ್ತಿದ್ದಾಗ ನೆರೆಯ ಹಳ್ಳಿಗಳಿಂದ ತಮಗೆ ಬಂದ ಎರಡು ಪತ್ರಗಳನ್ನು ಗಾಂಧೀಜಿಯವರು ಓದಿ ತೋರಿಸಿದರು. ಒಂದು ಸೈನಗ್ರಾಮದಿಂದ, ಇನ್ನೊಂದು ಬರ್ಗಗ್ರಾಮದಿಂದ ಬಂದಿದ್ದವು. ಈ ಎರಡು ಗ್ರಾಮಗಳಲ್ಲಿ ಸೌಹಾರ್ದ ಭಾವನೆ ತುಂಬಿಕೊಂಡಿದೆಂದು ಅಲ್ಲಿಯ ನಿವಾಸಿಗಳು ಬರೆದು ತಿಳಿಸಿದ್ದರು. ಇಂಥ ಸೌಹಾರ್ದ ಭಾವನೆಯು ಎಲ್ಲೆಡೆಯಲ್ಲಿಯೂ ಹಬ್ಬಲಿ ಎಂದು ಗಾಂಧೀಜಿಯವರು ಆಶಿಸಿದರು.

ಭಾಷಣದ ನಂತರ ನಿಧಿಸಂಗ್ರಹ ನಡೆಯಿತು. ಆಗ ಗಾಂಧೀಜಿಯವರು ಸಭೆಯಲ್ಲಿಯೇ ಇದ್ದರು.

೨೧—೩—೪೭

. ಗಾಂಧೀಜಿಯವರು ಗರವಾನ ಗ್ರಾಮಕ್ಕೆ ತಾವು ಭೆಟ್ಟಿ ಕೊಟ್ಟದ್ದನ್ನುಲ್ಲೇಖಿಸಿ ಅಲ್ಲಿ ಸ್ತ್ರೀಯರನ್ನು ಬಾಲಕರನ್ನೂ ನಿರ್ದಯದಿಂದ ಸಂಹರಿಸಿದ್ದ ಸಂಗತಿಯನ್ನು ಸಭೆಗೆ ಅರುಹಿ ಆ ಮೃತಾತ್ಮರ ಬಗ್ಗೆ ದುಃಖಪ್ರದರ್ಶನಾರ್ಥ ಸಭಿಕರೆಲ್ಲ ಮೌನದಿಂದ ಕುಳಿತಿರಬೇಕೆಂದು ಹೇಳಿ ಇಂದಿನ ತಮ್ಮ ಭಾಷಣವನ್ನು ಪ್ರಾರಂಭಿಸಿದರು. ನಿರಪರಾಧಿ ಹೆಂಗಳೆಯರ, ಮಕ್ಕಳ ಕೊಲೆ ಏಕೆ ಮಾಡಲಾಯಿತು ಎಂಬುದನ್ನು ನೀವೇ ವಿಚಾರ ಮಾಡಿರಿ ಎಂದು ಸಭಿಕರಿಗೆ ಅವರು ಕೇಳಿದರು. ಯಾವದಾದರೂ ಧರ್ಮವನ್ನು ಉಳಿಸುವದಕ್ಕಾಗಿಯೇ? ನೆರೆಹೊರೆಯವರನ್ನು ಕೊಲ್ಲಬೇಕೆಂದು ಯಾವ ಧರ್ಮವೂ ಹೇಳುವದಿಲ್ಲ. ಈಗ ಎಸಗಿದ ಕೃತ್ಯಗಳೆಲ್ಲ ಬೇಕಾಗಿಯೆ ನಡೆಸಿದ ವಿನಾಶ. ಸ್ವಾರ್ಥದಿಂದಾಗಲಿ ಬೇರೆ ಯಾವ ಉದ್ದೇಶದಿಂದಾಗಲಿ ಇದನ್ನು ಮಾಡಲಾಯಿತೆ ಎಂಬುದನ್ನು ನಾನು ವಿಚಾರ ಮಾಡುವದಿಲ್ಲ.

ಕೆಲವು ದಿನಗಳ ಹಿಂದೆ ತುಂಬಿ ತುಳುಕುತ್ತಿದ್ದ ಮನೆಗಳೀಗ ಹಾಳು ಸುರಿಯುತ್ತಿವೆ. ಇದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಆದರೆ ಇನ್ನು ಮುಂದೆ ಏನು ಮಾಡಬೇಕು? ತಮ್ಮ ಪಾಪ ಕ್ಷಾಲನವಾಗುವನೆಂದು ಭಾವಿಸಿ ಜನರು ಗಂಗಾಸ್ನಾನಕ್ಕೆ ಹೋಗುತ್ತಾರೆ. ಕಣ್ಣೆದುರಿನ ಅನಕೇಪಗಳಿಂದ ಹೆಂಗಳೆಯರಿಗೂ ಬಾಲಕರಿಗೂ ತಾವು ಮಾಡಿದ ಅಪರಾಧದ ನೆನಪು ಜನರಿಗುಂಟಾಗಿ ಅವರು ಅಬಗ್ಗೆ ಪ್ರಾಯಶ್ಚಿತ್ತ ಪಡೆದುಕೊಳ್ಳಬೇಕು. ಯಾವ ರೀತಿಯಲ್ಲಿ ತಮ್ಮ ಈ ಪಾಪವನ್ನು ತೊಳೆದುಕೊಳ್ಳಬಹುದೆಂಬದನ್ನು ಅವರು ವಿಚಾರಿಸಬೇಕು. ಈಗ ಹಾಳು ಬೀಳಾದ ಮನೆಗಳನ್ನು ಅವರು ಸ್ವಚ್ಛಮಾಡಿ ವಾಸಯೋಗ್ಯವಾಗುವಂತೆ ಮಾಡಬೇಕು. ಹಿಂದಿನ ದುರ್ಘಟನೆಗಳಿಗಾಗಿ ತಮಗೆ ಪಶ್ಚಾತ್ತಾಪವಾಗಿದೆಂದು ತಮ್ಮ ಮುಸ್ಲಿಂ ಬಾಂಧವರಿಗೆ ಹೇಳಿ ಅವರು ತಿರುಗಿ ತಮ್ಮ ಹಳ್ಳಿಗಳಿಗೆ ಹೋಗುವಂತೆ ಮನವೊಲಿಸಬೇಕು. ನೀವು ಹಳ್ಳಿಗಳಿಗೆ ಹಿಂತಿರುಗಿದರೆ ತಮಗೆ ಮನಶ್ಶಾಂತಿ ದೊರೆಯುವದೆಂದೂ ಹೇಳಬೇಕು. ತಮ್ಮ ಅಪ್ರೇಷ್ಟರು ಸಂಹರಿಸಲ್ಪಟ್ಟ ಮನೆಗಳಲ್ಲಿ ತಾವು ಹೇಗೆ ವಾಸಿಸಬೇಕು ಎಂದು ಮುಸ್ಲಿಂರು ಕೇಳಲೂ ಬಹುದು. ಅವರು ಹಾಗೆ ಹೇಳಿದರೆ ನ್ಯಾಯವೇ ಅದೀತು. ಆದರೆ ಅಪರಾಧಿಯು ಪಶ್ಚಾತ್ತಪ್ತನಾಗಿ ತಾನೇ ಮುಸ್ಲಿಂರ ಹತ್ತಿರ ಹೋಗಿ ನಡೆದದ್ದು ನಡೆದು ಹೋಯಿತು, ಇನ್ನು ಅಂಥದು ಸಂಭವಿಸಲಿಕ್ಕಿಲ್ಲೆಂದು ಹೇಳಿದರೆ ಅಲ್ಲಿ ಕೂಡ ಇರಗುವದು ಎಂಬುದು ತಮಗೆ ಖಂಡಿತವಾಗಿದೆಂದು ಗಾಂಧೀಜಿ ಹೇಳಿದರು.

ಉಸುಬಿಚ ಅರಣ್ಯಗಳಲ್ಲಿ ಅಲ್ಲಲ್ಲಿ ಫಲವತ್ ಪ್ರದೇಶಗಳು (ಓಯಸಿಸ) ಇರುವ ಹಾಗೆ ಈ ದುರ್ಘಟನೆಗಳಲ್ಲಿಯೂ ಜನಜಂಗುಳಿಯ ಕೋಪಕ್ಕೆ ಪಾತ್ರರಾಗಿ ಅವರ ಹಿಂಸೆಯನ್ನು ಎದುರಿಸಿ ಅನೇಕ ಮುಸ್ಲಿಂರನ್ನೂ ಅವರ ಆಸ್ತಿಯನ್ನೂ ರಕ್ಷಿಸಿದ ಧೀರರೂ ಇದ್ದಾರೆ. ಇವರನ್ನು ಅಭಿನಂದಿಸುವ ಅವಶ್ಯಕತೆಯಿಲ್ಲದಿದ್ದರೂ ಇವರು ಅಭಿನಂದನೀಯರು. ತಾವು ಅವರನ್ನು ಭೆಟ್ಟಿಯಾಗಲಿಲ್ಲವೆಂದ ಮಾತ್ರಕ್ಕೆ ಅವರ ಸತ್ಕಾರ್ಯವನ್ನು ತಾವು ಗೌರವಿಸುವದಿಲ್ಲೆಂದಲ್ಲ. ಆದರೆ ಆರೋಗ್ಯವಂತರನ್ನು ಬಿಟ್ಟು ದುಃಖಿತರ ಕಡೆಗೆ ಧಾವಿಸುವ ಡಾಕ್ಟರನ ಸ್ವಭಾವ ತಮ್ಮದಾಗಿದೆ ಎಂದರು ಗಾಂಧೀಜಿ.

ಈ ದಂಗೆಯಲ್ಲಿ ಹಿಂದುಗಳಿಗೂ ಹಾನಿಯಾಗಿದೆಂದು ತಮಗೆ ತಿಳಿದಿದೆ. ಹಾಗಿದ್ದರೆ ಅವರಿಗೂ ಪರಿಹಾರ ನೀಡಬೇಕಾದುದಗತ್ಯ. ಪರಿಹಾರ ಕಾರ್ಯದಲ್ಲಿ ಅವರನ್ನೂ ಸೇರಿಸಿಕೊಳ್ಳಲಾಗುವದು ಎಂದು ತಿಳಿಸಿದರು ಗಾಂಧೀಜಿ.

ತಾವು ಮಸೌಡಿಗೆ ಬಂದ ಮರುದಿನವೇ ಕಳೆದ ದಂಗೆಯಲ್ಲಿ ಭಾಗವಹಿಸಿದ್ದ ಸುಮಾರು ೫೦ ಜನರು ತಾವಾಗಿಯೆ ಶರಣಾಗತರಾದರೆಂದು ಹೇಳಿ ಗಾಂಧೀಜಿಯವರು ಅವರ ಹೆಸರುಗಳನ್ನು ಓದಿ ತೋರಿಸಿದರು. ಇದರಿಂದ ತನಗೆ ಸಂತೋಷವಾಗಿದೆಂದು ತಿಳಿಸಿದ್ದಲ್ಲದೆ ದಂಗೆಯಲ್ಲಿ ಭಾಗವಹಿಸಿದ್ದ ಇತರರೂ ತಂತಮ್ಮ ಭಾಗದ ಅಧಿಕಾರಿಗಳಲ್ಲಿ ಹೋಗಿ ಹಾಜರಾಗಬೇಕೆಂದು ತಿಳಿಸಿದರು. ತಂತಮ್ಮ ಅಪರಾಧಗಳಿಗೆ ಯೋಗ್ಯ ದಂಡನೆಯನ್ನೂ ಸ್ವೀಕರಿಸಲು ಅವರು ಸಿದ್ಧರಾಗಬೇಕು. ಅಧಿಕಾರಿಗಳಲ್ಲಿ ಹೋಗಿ ಹಾಜರಾಗಲು ಧೈರ್ಯವಿಲ್ಲದವರು ತಮ್ಮ ತಪ್ಪು ಒಪ್ಪಿಕೊಳ್ಳುವದಕ್ಕಾಗಿ ನನ್ನ ಕಡೆಗಾಗಲಿ, ಬಾದಶಹಾನರ ಕಡೆಗಾಗಲಿ, ಮೇ.ಜ. ಶಹಾನವಾಜರ ಕಡೆಗಾಗಲಿ ಬರಲಿ.

ಕೊನೆಯದಾಗಿ ಗಾಂಧೀಜಿಯವರು ೨೩ ನೇ ತಾರೀಕಿಗೆ ಪಾಕಿಸ್ತಾನ ದಿನಾಚರಣೆಗಾಗಿ ಮುಸ್ಲಿಂರು ನಡೆಸಿರುವ ಸಿದ್ಧತೆಯನ್ನು ಕಂಡು ನೌಖಾಲಿಯ ಹಿಂದುಗಳು ವ್ಯಕ್ತಪಡಿಸಿದ ಭೀತಿಯನ್ನು ಕುರಿತು ಹೇಳಿದರು. ನೌಖಾಲಿಯ ಪರಿಸ್ಥಿತಿ ಪುನಃ ಕೆಡುತ್ತಿದೆ ಎಂದು ಸೋದೇಪುರದ ಖಾದೀ ಪ್ರತಿಷ್ಠಾನದಿಂದ ಬಂದ ಒಬ್ಬ ಮಿತ್ರನು ಹೇಳಿದ್ದಾನೆ. ಬಿಹಾರದಲ್ಲಿಯ ತಮ್ಮ ಕಾರ್ಯವು ಯಶಸ್ವಿಯಾದರೆ ಅದರ ಪರಿಣಾಮವು ಬಂಗಾಲದ ಮೇಲೆ, ಏಕೆ, ಇಡೀ ಭಾರತದ ಮೇಲೆ ಆಗಲಿರುವದರಿಂದ ಸದ್ಯಕ್ಕೆ ನೌಖಾಲಿಗೆ ಹೋಗುವಂತೆ ಯಾರೂ ತಮ್ಮ ಮನವೊಲಿಸಲಾರರು ಎಂದು ಗಾಂಧೀಜಿಯವರು ಆ ಮಿತ್ರನಿಗೆ ತಿಳಿಸಿದರು. ಬಿಹಾರದ ಮುಸ್ಲಿಂರೂ ಬಂಗಾಲದ ಹಿಂದುಗಳೂ ಎರಡನೇ ಪಂಗಡದವರಿಂದ ತಮ್ಮ ವಿತ್ತ-ಜೀವಿತಗಳ ರಕ್ಷಣೆಗಾಗಿ ನನ್ನನ್ನು ಜಾಮೀನೆಂದು ಭಾವಿಸಲಿ. 'ಮಾಡು ಇಲ್ಲವೆ ಮಡಿ' ಎಂಬ ಉದ್ದೇಶದಿಂದಲೆ ನಾನಿಲ್ಲಿ ಬಂದಿದ್ದೇನೆ. ಆದ್ದರಿಂದ ತಮ್ಮ ಸೇವೆಯನ್ನು ಇಲ್ಲಿಯ ಹಿಂದೂ ಮುಸ್ಲಿಂರು ಬೇಡವೆಂದು ಹೇಳುವವರೆಗೆ ಇಲ್ಲಿಂದ ಕದಲುವ ಮಾತೇ ಇಲ್ಲವೆಂದರು ಗಾಂಧೀಜಿ

೨೨—೩—೪೭

ಮಸೌಡಿ ಠಾಣೆಯ ಪ್ರದೇಶದಲ್ಲಿ ಆರು ದಿನ ಸಂಚರಿಸಿ ಇಂದು ಮುಂಜಾನೆ ಪಾಟಣಾಕ್ಕೆ ಹಿಂತಿರುಗಿದ ಗಾಂಧೀಜಿಯವರು ಬಾಂಕೀಪುರ ಮೈದಾನದಲ್ಲಿ ಸಾಯಂಕಾಲ ಸೇರಿದ್ದ ಪ್ರಾರ್ಥನಾ ಸಭೆಯಲ್ಲಿ ತಮ್ಮ ಸಂಚಾರದ ಅನುಭವಗಳನ್ನು ವಿವರಿಸಿದರು. ಗತದುರ್ಘಟನೆಗಳಿಗಾಗಿ ಹಳ್ಳಿಗರು ಅಂತಃಕರಣ ಪೂರ್ವಕ ಪಟ್ಟ ಪಶ್ಚಾತ್ತಾಪವನ್ನೂ ತಾವು ಹೇಳಿದ ರೀತಿಯಲ್ಲಿ ಪ್ರಾಯಶ್ಚಿತ್ತ ಪಡೆದುಕೊಳ್ಳಲು ಅವರು ಸಿದ್ಧರಾದುದನ್ನೂ ಕಂಡು ಗಾಂಧೀಜಿಯವರು ಸಮಾಧಾನವನ್ನು ವ್ಯಕ್ತಪಡಿಸಿದರು. ಭಾರತದ ಹಳ್ಳಿಗಳಲ್ಲಿ ದೊರೆಯಬಹುದಾದಷ್ಟು ಉದಾರ ದಾನವನ್ನು ಆ ಹಳ್ಳಿಗಳು ಮುಸ್ಲಿಂ ನಿಧಿಗಾಗಿ ನೀಡಿದರು. ಗಾಂಧೀಜಿಯವರು ಕಾರಿನಲ್ಲಿ ಪ್ರಯಾಣಿಸುತ್ತಿದ್ದರೂ ಅವರನ್ನು ತಡೆದು ನಿಲ್ಲಿಸಿ ಹಮ್ಮಿಣಿಗಳನ್ನು ಅರ್ಪಿಸಲಾಗುತ್ತಿತ್ತು. ಬರಿ ಹಮ್ಮಿಣಿಗಳನ್ನು ಕೊಡುವದಲ್ಲದೆ ಮುಸ್ಲಿಂರ ಪುನರ್ನಿವೇಶನದ ಕಾರ್ಯದಲ್ಲಿ ತಾವು ನೆರವಾಗಲು ಸಿದ್ಧರಿರುವದಾಗಿಯೂ ಅವರು ಗಾಂಧೀಜಿಯವರಿಗೆ ಪತ್ರ ಬರೆದಿದ್ದಾರೆ.

ಅನೇಕ ಗ್ರಾಮಗಳಲ್ಲಿ ಅಲ್ಲಿಯ ಹಿಂದುಗಳ ಕಳಕಳಿಯ ಮೂಲಕ ಯಾವ ದುರ್ಘಟನೆ ಸಂಭವಿಸಿಲ್ಲ. ದೀನಾಪುರ ಭಾಗದ ಮುಸ್ಲಿಂರು ಹೆದರಿ ಗುಡ್ಡ ಹೊಕ್ಕಿದ್ದರೂ ಅಲ್ಲಿ ಯಾವ ದುರ್ಘಟನೆಯೂ ಸಂಭವಿಸಲಿಲ್ಲೆಂದು ಮುಸ್ಲಿಂರೇ ಹೇಳಿರುವದಾಗಿ ಗಾಂಧೀಜೀ ತಿಳಿಸಿದರು.

ತಾವು ಇಂದು ಮುಂಜಾನೆ ಪಿಪ್ಪಲವಾನದಲ್ಲಿ ನಿರಾಶ್ರಿತ ಮುಸ್ಲಿಂ ಮಹಿಳೆಯರಿಗೆ ನಾಲ್ಕು ಉಪದೇಶದ ಮಾತುಗಳನ್ನು ಹೇಳಿದ್ದಾಗಿ ಗಾಂಧೀಜಿ ಅರುಹಿದರು. ಆ ಸ್ತ್ರೀಯರ ಭಾವನೆಗಳೇನಿದ್ದವು; ಅವರ ಪರಿಸ್ಥಿತಿಯೆಂಥದು ಎಂಬದನ್ನು ನಾನೇನೂ ಈಗ ಹೇಳುವದಿಲ್ಲ. ತಮ್ಮ ಹೃದಯ ತೀರ ತುಂಬಿ ಬಂದಿರುವದರಿಂದ ತಾವು ಕಣ್ಣೀರು ಸುರಿಸಬಹುದಾದಿಲ್ಲವೆಂದರು ಗಾಂಧೀಜಿ. ಹೇಗೆ ಪಶ್ಚಾತ್ತಾಪ ಹೊಂದಬೇಕು ಎಂಬುದನ್ನು ತಿಳಿಸುವೆನೆಂದರು. ಆ ಮುಸ್ಲಿಂ ಮಹಿಳೆಯರನ್ನು ಗಾಂಧೀಜಿಯವರು ಕೈಲಾದಷ್ಟು ಸಂತಯಿಸಿ ದೇವರನ್ನು ನಂಬಿ ಧೈರ್ಯದಿಂದ ಪುನಃ ತಂತಮ್ಮ ಹಳ್ಳಿಗಳಿಗೆ ಹಿಂತಿರುಗಬೇಕೆಂದು ಅವರಿಗೆ ಹೇಳಿದರು. ೨೩ ನೇ ತಾರೀಖಿಗೆ ಬಿಹಾರದಲ್ಲಿ ಪಂಜಾಬ ದಿನಾಚರಣೆ ನಡೆಯಲಿರುವದರಿಂದ ಇಲ್ಲಿಯ ಮುಸ್ಲಿಂ ಸ್ತ್ರೀಪುರುಷರೆಲ್ಲ ಹೆದರಿ ಹೋಗಿರುವದಾಗಿ ಈ ಸಭೆಯಲ್ಲಿ ಮಹಾತ್ಮರಿಗೆ ತಿಳಿಸಲಾಯಿತು. ಪಾಕಿಸ್ತಾನ ದಿನವಿರಲಿ, ಪಂಜಾಬ ದಿನವಿರಲಿ ಯಾವದೇ ರೀತಿಯ ಮತಪ್ರದರ್ಶನ ನಡೆಯಕೂಡದೆಂದು ಬಿಹಾರ ಸರಕಾರವು ಆಜ್ಞಾಪಿಸಿದೆ ಎಂದು ಗಾಂಧೀಜಿ ತಿಳಿಸಿದರು. ಯಾವ ವಿಧದ ಮತಪ್ರದರ್ಶನ ನಡೆಯಲಾರದು ಮತ್ತು ಈ ಅಜ್ಞೆಯನ್ನು ಇಡೀ ಪ್ರಾಂತಕ್ಕೆ ಕಟ್ಟುನಿಟ್ಟಿನಿಂದ ಅನ್ವಯಿಸಲಾಗುವದು ಎಂದು ಈ ಸಭೆಯಲ್ಲಿದ್ದ ಬಿಹಾರದ ಮಂತ್ರಿಗಳೊಬ್ಬರು ಆಶ್ವಾಸನ ಕೊಟ್ಟರು. ಕಿಸಾನ ಕೂಟವನ್ನೂ ಬಿಹಾರ ಸರಕಾರವು ನಿರ್ಬಂಧಿಸಿದೆ. ಹೀಗೆ ಮಾಡಿದ್ದು ನ್ಯಾಯವೆಂದು ತಮ್ಮ ಅಭಿಪ್ರಾಯವಾಗಿದೆಂದರು ಗಾಂಧೀಜಿ. ಯಾವದೇ ವಿಧದ ಕೂಟ ಇಲ್ಲವೆ ಪ್ರದರ್ಶನ ನಡೆದರೆ ಒಮ್ಮೆಲೆ ವಿಪತ್ತು ಸಂಭವಿಸುವ ಪರಿಸ್ಥಿತಿಯೀಗ ದೇಶದಲ್ಲಿದೆ. ಭಗವದ್ಗೀತೆಯ ಶಬ್ದಗಳಲ್ಲಿ ಹೇಳಬೇಕಾದರೆ "ಅನೇಕ ಸಲ ನಿಷ್ಕ್ರಿಯೆಯಲ್ಲಿಯೆ ಕ್ರಿಯೆಯೂ ಕ್ರಿಯೆಯಲ್ಲಿಯೆ ನಿಷ್ಕ್ರಿಯೆಯೂ ಕಂಡು ಬರುವದು." ಸುಸ್ಪಷ್ಟವಾದ ಆಧುನಿಕ ಉದಾಹರಣೆಗಳನ್ನು ಕೊಟ್ಟು ಮಹಾತ್ಮರು ತಮ್ಮ ಹೇಳಿಕೆಯನ್ನು ಸ್ಪಷ್ಟವಾಗಿಸಿದರು. ಆಧುನಿಕ ಯುದ್ಧವೈಖರಿಯಲ್ಲಿ ಅನೇಕ ಸಲ ನಿಷ್ಕ್ರಿಯೆಯನ್ನವಲಂಬಿಸುವದು ಅನಿವಾರ್ಯವಾಗುತ್ತದೆ. ಆದ್ದರಿಂದ ಅದನ್ನೇ ಆಗ ಕ್ರಿಯೆಯೆಂದು ಹೇಳಬೇಕಾಗುತ್ತದೆ. ಅಂಥ ಸಮಯದಲ್ಲಿ ಏನಾದರೂ (ಚಟುವಟಿಕೆ) ಕ್ರಿಯೆ ನಡೆಸುವದು ಅಪರಾಧವಾಗುವದು. ಆದ್ದರಿಂದ ಹಿಂದೂ ಮುಸ್ಲಿಂರಿಬ್ಬರೂ ಈ ದಿನಾಚರಣೆಗಳನ್ನು ಬಿಟ್ಟುಕೊಡಬೇಕೆಂದು ತಾವು ಬಯಸುತ್ತಿರುವದಾಗಿ ಗಾಂಧೀಜಿ ಹೇಳಿದರು. ತಾನೇ ಅಧಿಕಾರ ಪಟ್ಟಗಟ್ಟಿದ ಅಧಿಕಾರಿಗಳ ಅಜ್ಞೆಯ ಪರಿಪಾಲನೆ ಮಾಡುವವನೆ ನಿಜವಾದ ಸತ್ಯಾಗ್ರಹಿಯು. ಈ ಹೇಳಿಕೆ ಬರಿ ಮಾರ್ಚ ೨೩ ನೇ ತಾರೀಖಿನ ಮಟ್ಟಿಗೆ ಮಾತ್ರವಲ್ಲ; ಮುಂದೆ ಕೂಡ ಇದನ್ನು ಪಾಲಿಸಬೇಕು. ಇಂದಿನ ಪರಿಸ್ಥಿತಿ ಉಳಿದಿರುವ ವರೆಗೆ ಯಾವ ರೀತಿಯ ಮತಪ್ರದರ್ಶನಕ್ಕೆ ಇಳಿಯಬಾರದು ಎಂದು ಎಚ್ಚರಿಸಿದರು ಗಾಂಧೀಜಿ.

ಹಿಂದುಗಳಿಗೆ ತಮ್ಮ ಪಾಪಗಳ ಅರಿವುಂಟಾಗಿದ್ದರೆ ಹಾಳಾಗಿ ಹೋದ ಮನೆಗಳನ್ನು ಪುನಃ ಕಟ್ಟಲು ಅವರು ಕಾಯಾಕಷ್ಟದಿಂದ ನೆರವಾಗಬೇಕೆಂದು ತಮ್ಮ ಅಪೇಕ್ಷೆಯಿದೆಂದರು ಗಾಂಧೀಜಿ. ಸ್ವಯಂಪ್ರೇರಣೆಯಿಂದ, ಕಳಕಳಿಯಿಂದ ನೀವು ಈ ಕಾರ್ಯ ಪ್ರಾರಂಭಿಸಿದರೆ ಅಗಾಧ ವಿಶ್ವಾಸವನ್ನು ಹುಟ್ಟಿಸುವಿರಿ ಎಂದರು.

ತಾವು ಮಸೌಡಿಗೆ ಹೋದ ಕೂಡಲೆ ಹಿಂದಿನ ದಂಗೆಯಲ್ಲಿ ಅಪರಾಧಿಗಳಾಗಿದ್ದ ೫೦ ಜನರು ತಾವಾಗಿಯೆ ಬಂದು ಶರಣಾಗತರಾದರು. ಹೀಗೆ ತಾವಾಗಿಯೆ ಹಾಜರಾದವರ ಸಂಖ್ಯೆ ಈಗ ಇನ್ನೂ ಹೆಚ್ಚಾಗಿರಬಹುದು. ಇನ್ನೂ ಕೆಲವರು ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳಲು ಮುಂದೆ ಬರುವದಾಗಿ ಭಾವಿಸುತ್ತೇನೆ. ಹೀಗೆ ತಪ್ಪು ಒಪ್ಪಿಕೊಳ್ಳುವದರಿಂದ ಅವರ ಬಗ್ಗೆ ಜನರಲ್ಲಿ ಗೌರವವು ಹೆಚ್ಚುವದಲ್ಲದೆ ಪ್ರಾಂತದ ಪ್ರತಿಷ್ಠೆಯೂ ಬೆಳೆಯುವದು.

೨೩—೩—೪೭

ಮಹಾತ್ಮರ ಮೌನ ದಿನವು ಪ್ರಾರಂಭವಾದ್ದರಿಂದ ಅವರು ಹಿಂದಿಯಲ್ಲಿ ಬರೆದುಕೊಟ್ಟಿದ್ದ ಸಂದೇಶವನ್ನು ಪ್ರಾರ್ಥನಾ ಸಭೆಯಲ್ಲಿ ಓದಿ ತೋರಿಸಲಾಯಿತು. ಈ ಸಭೆಯಲ್ಲಿದ್ದವರೂ ತಮ್ಮ ವಾಣಿಯನ್ನು ಕೇಳಬಲ್ಲ ಇತರರೂ ಜೀವನದ ಧ್ಯೇಯವನ್ನು ಅರಿತುಕೊಳ್ಳಬೇಕು ಎಂಬುದೆ ತಮ್ಮ ಅಂತಃಕರಣದ ಪ್ರಾರ್ಥನೆಯಾಗಿದೆ. ಜನರೆಲ್ಲ ತಮ್ಮ ಜನನ ಮರಣಗಳ ಅಧಿಕಾರವನ್ನು ತನ್ನ ಕೈಯಲ್ಲಿಟ್ಟುಕೊಂಡಿರುವ ಆ ಶಕ್ತಿಯನ್ನು, ಅದು ಸೃಷ್ಟಿಸಿದ ವಸ್ತುಗಳಿಗೆ ಸೇವೆ ಸಲ್ಲಿಸಿ, ಆರಾಧಿಸುವದೇ ಅವರ ಜೀವನ ಧ್ಯೇಯವಾಗಬೇಕು. ಅದೆಂದರೆ ಎಲ್ಲೆಡೆಗೂ ಪ್ರೀತಿ ಕಂಡು ಬರಬೇಕೆ ಹೊರತು ಈಗಿನಂತೆ ಕಂಡು ಬರುವ ದ್ವೇಷವಿರಬಾರದು. ಆ ಧ್ಯೇಯವನ್ನೇ ಮರೆತು ಬಿಟ್ಟು ಈಗ ಪರಸ್ಪರರಲ್ಲಿ ಕಾದಾಡುತ್ತಿದ್ದೇವೆ ಇಲ್ಲವೆ ಆ ಕಾದಾಟದ ಸಿದ್ಧತೆ ನಡೆಸುತ್ತಿದ್ದೇವೆ. ಈ ಗಂಡಾಂತರವನ್ನು ತಪ್ಪಿಸಿಕೊಳ್ಳುವದು ಸಾಧ್ಯವಾಗದಿದ್ದರೆ ಭಾರತ ಸ್ವಾತಂತ್ರ್ಯವನ್ನು ಅವರು ಅಸಾಧ್ಯವಾದ ಕನಸೆಂದೇ ಭಾವಿಸಬೇಕು. ಬ್ರಿಟಿಶರು ಇಲ್ಲಿಂದ ತೊಲಗಿ

—ಇನ್ನೇ ಪುಟಕ್ಕೆ

ಬಿಹಾರ ಯಾತ್ರೆ

(೭ನೇ ಪುಟದಿಂದ)

ಹೋದ ಮಾತ್ರಕ್ಕೆ ತಮಗೆ ಸ್ವಾತಂತ್ರ್ಯ ಲಭಿಸುವದು ಎಂದು ಭಾವಿಸಿದ್ದರೆ ಅದು ತಪ್ಪು— ಕಲ್ಪನೆ. ಬ್ರಿಟಿಶರು ಭಾರತದಿಂದ ಹೊರಟು ಹೋಗುತ್ತಿದ್ದಾರೆ. ನಾವು ಹೀಗೇ ನಮ್ಮ ನಮ್ಮಲ್ಲಿ ಬಡಿದಾಡುತ್ತಿದ್ದರೆ ಬೇರೆ ರಾಷ್ಟ್ರವು ಇಲ್ಲಿ ಬಂದು ನಮ್ಮನ್ನು ಮೆಟ್ಟಬಹುದು. ಇಡೀ ಜಗತ್ತನ್ನೇ ತಾವು ತಮ್ಮ ಶಸ್ತ್ರದಿಂದ ಎದುರಿಸಬಹುದೆಂದು ಜನರು ಭಾವಿಸಿದ್ದರೆ ಅದೊಂದು ಮೂರ್ಖತನ.

ಸೈನಿಕ ಆಕ್ರಮಣದ ಮೂಲಕ ಪಂಜಾಬದಲ್ಲಿ ಒಂದು ವಿಧದ ಶಾಂತತೆ ನೆಲಸಿದೆಂದು ಒಬ್ಬ ಮಿತ್ರರು ಬರೆದಿದ್ದಾರೆ. ಅದು ಸ್ಮಶಾನ ಮೌನ. ಇನ್ನೊಂದು ಭೀಕರ ಹೋರಾಟಕ್ಕಾಗಿ ಜನರು ಗುಪ್ತ ಸಿದ್ಧತೆ ನಡೆಸುತ್ತಿದ್ದಾರೆ. ಆಯುಧಗಳ ಸಂಗ್ರಹ ನಡೆದಿದೆ. ಆ ನಂತರ ಶಾಂತತೆಯನ್ನು ಕಾಯ್ದುಕೊಳ್ಳುವದು ಸೈನಿಕರಿಗೂ ಅಸಾಧ್ಯವಾಗುವದು. ಸೈನಿಕರ ಇಲ್ಲವೆ ಪೋಲೀಸರ ಸಹಾಯದಿಂದ ಸ್ಥಾಪಿಸಿದ ಶಾಂತಿ ಶಾಂತಿಯೆ ಅಲ್ಲವೆಂದು ಗಾಂಧೀಜಿಯವರ ಅಭಿಪ್ರಾಯವಾಗಿದೆ. ಹೋರಾಡುವ ಉಭಯ ಪಕ್ಷಗಳಲ್ಲಿ ಕನಿಷ್ಠ ಒಂದು ಪಕ್ಷವಾದರೂ ಅಹಿಂಸೆಯ ನಿಜವಾದ ಶೌರ್ಯವನ್ನು ತೋರಿದಾಗ ಮಾತ್ರ ನಿಜವಾದ ಶಾಂತತೆಯು ಪ್ರಸ್ಥಾಪಿತವಾಗಬಲ್ಲದು.

ಹೆಂಗಳೆಯರನ್ನೂ ಮಕ್ಕಳನ್ನೂ ಕೊಲ್ಲುವದರಲ್ಲಿ ಕಲಿತನವಿಲ್ಲೆಂಬುದನ್ನು ಬಿಹಾರವು ಮನಗಂಡಿದೆ ಎಂದರು ಗಾಂಧೀಜಿ. ಅಂಥ ಕೃತಿ ಶುದ್ಧ ಹೇಡಿತನ. ಗುಪ್ತ ಸಾಮರ್ಥ್ಯದ ನಿಜವಾದ ಕಲಿತನವನ್ನು ಬಿಹಾರವು ಪ್ರದರ್ಶಿಸಿದರೆ ಅದೆಷ್ಟು ಅದ್ಭುತವಾದೀತು! ಅದರಿಂದ ಜಗತ್ತಿಗೆ ಒಂದು ದಾರಿಯನ್ನು ತೋರಿಸಿದಂತಾಗುವದು.

ಸೋಮವಾರದ ಸಾಯಂಪ್ರಾರ್ಥನಾ ಸಭೆಯು ಪೂಂಪೂನದಲ್ಲಿ ಸೇರುವದು ಎಂದು ಗಾಂಧೀಜಿಯವರು ಕೊನೆಗೆ ತಿಳಿಸಿದರು.

೨೪-೩-೪೭ (ರಾಜಘಾಟ)

ರಾಜಘಾಟದಲ್ಲಿಯ ಪ್ರಾರ್ಥನಾ ಸಭೆಯಲ್ಲಿ ಗದ್ದಲ ಬಹಳವಾಯಿತು. ಸಭೆಗಳ ರೂಢಿಯಿಲ್ಲದ ಹೆಂಗಳೆಯರನೇಕರು ನೆರೆದಿದ್ದರು. ಅವರು ಹರಟೆ ಪ್ರಾರಂಭಿಸಿಬಿಟ್ಟರು. ದೈನಂದಿನ ಪ್ರಾರ್ಥನೆಯು ಆ ಗದ್ದಲದಲ್ಲಿಯೆ ನಡೆಯಿತು. ಗಾಂಧೀಜಿಯವರ ಭಾಷಣ ಪ್ರಾರಂಭವಾಗಬೇಕಾದಾಗ ಅವರು ತಮ್ಮ ದನಿಯನ್ನು ತಾವೇ ಕೇಳಲು ಅಷ್ಟು ಉತ್ಸುಕರಿಲ್ಲೆಂದು ಹೇಳಿದರು. ಹರಟೆಯು ಹೀಗೆ ಸಾಗಿದರೆ ತಾವು ಭಾಷಣ ಮಾಡುವದಿಲ್ಲವೆಂದೂ ತಿಳಿಸಿದರು. ಸಾರ್ವಜನಿಕ ಸಭೆಯ ನಿಯಮಗಳನ್ನು ತಿಳಿಸಿ ಹೇಳಿ ಇಲ್ಲವೆ ಬೇರೆ ರೀತಿಯಿಂದ ಇಂದಿನಂಥ ವಿಚಿತ್ರ ಸಭೆಯನ್ನು ಹೇಗೆ ಶಾಂತವಾಗಿಡಬೇಕೆಂಬ ಬಗ್ಗೆ ಗಾಂಧೀಜಿಯವರು ಸ್ವಯಂಸೇವಕರನ್ನುದ್ದೇಶಿಸಿ ಮಾತಾಡಿದರು. ಹಸ್ತಪತ್ರಿಕೆಗಳನ್ನು ಮುದ್ರಿಸಿ ಹಂಚಬೇಕೆಂದೂ ಸೂಚಿಸಿದರು.

ತಾವು ಬಹ್ರಾವಾನಕ್ಕೆ ಭೆಟ್ಟಿ ಕೊಟ್ಟು ಅಲ್ಲಿ ಹಾಳಾಗಿ ಬಿದ್ದು ಹೋದ ಹಿಂದೂ ಜನರ ಮನೆಗಳನ್ನು ನೋಡಿದ್ದಾಗಿ ಗಾಂಧೀಜಿಯವರು ಹೇಳಿದರು. ಸರ್ ಸಯ್ಯದ ಅಹಮ್ಮದರು ಹೇಳಿದಂತೆ ನನಗೆ ಹಿಂದು-ಮುಸ್ಲಿಂರು ಎರಡು ಕಣ್ಣುಗಳಂತಿದ್ದಾರೆ. ಹಿಂದುಗಳಿಗೆ ಎಲ್ಲಿಯೋ ಒತ್ತಟ್ಟಿಗೆ ಹೀಗೆ ಉಂಟಾದ ಹಾನಿಯು ಅವರು ಮುಸ್ಲಿಂರಿಗೆಸಗಿದ ಅಪರಾಧದ ತೀವ್ರತೆಯನ್ನು ಕಡಿಮೆ ಮಾಡಬಾರದು.

೨೫—೩—೪೭

ಇಂದಿನ ಪ್ರಾರ್ಥನಾ ಸಭೆಯಲ್ಲಿ ಕೊನೆಯವರೆಗೂ ಸಭಿಕರು ಶಾಂತರಾಗಿದ್ದರು. ಹೀಗೆ ಶಾಂತತೆಯನ್ನು ಕಾಯ್ದುಕೊಂಡದ್ದಕ್ಕಾಗಿ ಗಾಂಧೀಜಿಯವರು ಅವರನ್ನು ಅಭಿನಂದಿಸಿದರು. ಹಿಂದುಗಳು ಮುಸ್ಲಿಂರನ್ನು ಬಹಿಷ್ಕರಿಸುತ್ತಿದ್ದಾರೆಂದು ತಮಗೆ ತಿಳಿದು ಬಂದಿದೆ, ಇದು ನಿಜವಿದ್ದರೆ ಇದೊಂದು ದುಶ್ಚಿಹ್ನವೆಂದು ಭಾವಿಸುತ್ತೇನೆಂದರು. ನಿಜವಾದ ಪಶ್ಚಾತ್ತಾಪವಾಗಬೇಕಾದರೆ ನಿಜವಾದ ಸ್ನೇಹವನ್ನು ತೋರಬೇಕು; ಬಹಿಷ್ಕಾರಕ್ಕೆ ಅಲ್ಲಿ ಎಡೆಯಿಲ್ಲ. ಅದ್ದರಿಂದ ನಿಮಗೆ ನಿಜವಾಗಿ ಪಶ್ಚಾತ್ತಾಪವಾಗಿದ್ದರೆ ಮುಸ್ಲಿಂರನ್ನು ಬಹಿಷ್ಕರಿಸಬಾರದು. ಮುಸ್ಲಿಂರ ಪುನರ್ನಿವೇಶನದಲ್ಲಿ ತಾವು ಸರ್ವವಿಧದ ಸಹಕಾರವನ್ನು ನೀಡಲು ಸಿದ್ಧರಿರುವದಾಗಿ ತಾವಿಂದು ಭೆಟ್ಟಿಯಾದ ಲೀಗಿನ ಮಿತ್ರರು ಹೇಳಿದ್ದಾರೆ. ಬಿಹಾರದ ಮುಸ್ಲಿಂಲೀಗಿನ ಮಿತ್ರರ ಸಹಕಾರವಿಲ್ಲದೆ ಪರಸ್ಪರ ಸದಿಚ್ಛಾವಲಂಬಿಯಾದ ಸೌಹಾರ್ದವನ್ನು ಸ್ಥಾಪಿಸುವದು ಸಾಧ್ಯವಿಲ್ಲ. ಬಂದೂಕಿನ ತಿವಿಗತ್ತಿಗಳ ಸಹಾಯದಿಂದ ಸೌಹಾರ್ದವುಂಟಾಗಲಾರದು.

"ನೌಖಾಲಿಯಲ್ಲಿ ನಿಮ್ಮ ನಿರ್ಗಮನದ ನಂತರ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ"ಎಂದು ನೌಖಾಲಿಯಿಂದ ಬಂದ ಮಿತ್ರರೊಬ್ಬರು ಗಾಂಧೀಜಿಯವರನ್ನು ಕಂಡು ಹೇಳಿದರು. ಬಿಹಾರದಲ್ಲಿ ತಾವು ನಡೆಸಿದ ಕಾರ್ಯದ ಸುಪರಿಣಾಮವು ನೌಖಾಲಿಯ ಮೇಲೆಯೂ ಆಗದಿರದು ಎಂದು ಗಾಂಧೀಜಿ ಆ ಮಿತ್ರರಿಗೆ ತಿಳಿಸಿದರು. ಪ್ರತಿಯೊಂದು ದುಷ್ಕೃತ್ಯವನ್ನು ಯೋಗ್ಯ ಅಧಿಕಾರಿಗೆ ತಿಳಿಸಬೇಕೆಂದು ಹೇಳಿದರು. ತಮಗೆ ಕಂಡು ಬಂದದ್ದನ್ನೆಲ್ಲ ತಾವು ವಿಶ್ವಾಸದಿಂದ ಅಧಿಕಾರಿಗಳಿಗೆ ತಿಳಿಸುವದಾಗಿ ಹೇಳಿದರು. ಏನೇ ಆದರೂ ನೀವು ಕಂಗೆಡದೆ ಶಾಂತರಾಗಿರಬೇಕು. ದೇವರೆ ನಿಜವಾದ ಸಹಾಯಕನೆಂದು ಅವನಲ್ಲಿ ದೃಢವಾದ ವಿಶ್ವಾಸ ಇಡಬೇಕು.

ಕೊನೆಯದಾಗಿ, ಕೆಲವು ಢೋರ ಸ್ನೇಹಿತರು ತಮ್ಮನ್ನು ಭೆಟ್ಟಿಯಾಗಿದ್ದರೆಂದರು. ಅವರ ಸ್ನೇಹ ಸಂಪಾದಿಸುವದು ಪ್ರತಿ ಹಿಂದುವಿನ ಧರ್ಮವಾಗಿದೆ. ಅವರು ಇಮ್ಮಡಿ ಅಸ್ಪೃಶ್ಯತೆಗೀಡಾಗಿದ್ದಾರೆ. ಹಿಂದುಗಳು ಅವರನ್ನು ಧರ್ಮಬಾಹಿರರೆಂದು ತಿಳಿಯುತ್ತಾರೆ. ಹರಿಜನರಲ್ಲಿಯೆ ಅವರು ತೀರ ಕೀಳು ವರ್ಜಿಯವರೆಂದು ಭಾವಿಸಲಾಗಿದೆ. ಇದನ್ನು ಹಿಂದುಗಳು ಆದಷ್ಟು ಬೇಗನೆ ನಷ್ಟಗೊಳಿಸದಿರುವದು ಲಾಂಛನಾಸ್ಪದ. ಹಿಂದು ಧರ್ಮವು ಉಳಿಯಬೇಕಾದರೆ ಈ ವೈಷಮ್ಯ ನಷ್ಟವಾಗಬೇಕು.

ಇತರರ ಅನುಭವದಿಂದ ಕಲಿ

[“ಜಾಣನು ತನ್ನ ಅನುಭವದಿಂದ ಕಲಿಯುವ; ಅವನಿಗಿಂತಲೂ ಜಾಣನು ಇತರರ ಅನುಭವದಿಂದ ಕಲಿಯುವ' ಎಂಬರ್ಥದ ಗಾದೆಯೊಂದು ಜನದಲ್ಲಿ ಬಳಕೆಯಲ್ಲಿದೆ. 'ರೀಡರ್ಸ ಡಾಯಜೆಸ್ಟ್' ಮಾಸಿಕದ ಕಳೆದ ಅಕ್ಟೋಬರ ಸಂಚಿಕೆಯಲ್ಲಿ ಬಂದ ಲುಯಿ ಬ್ರೊಮಫೀಲ್ಡನ ಈ ಕೆಳಗಿನ ಲೇಖದಿಂದ ಹಿರಿಯರು ನಾವು ಭೂಮಿಯನ್ನು ಅನಾದರದಿಂದ ನೋಡಕೂಡದು, ಬದಲಿಗೆ ಅದನ್ನು ವಿಧಾಯವಾಗಿಯೂ ಪೂಜ್ಯ ಬುದ್ಧಿಯಿಂದಲೂ ಉಪಯೋಗಿಸಿಕೊಳ್ಳಬೇಕೆಂದು ಕಲಿಯಬಹುದು— ವಿ. ಜಿ. ಡಿ.]

ಕಳೆದ ಶರತ್ಕಾಲದಲ್ಲೊಂದು ಸುಂದರ ದಿನ. ನಾನು ಟೆಕ್ಸಾಸದ ಅಸ್ಟಿನ್ನಿನಿಂದ ಚಿಕಾಗೋಕ್ಕೆ ವಿಮಾನದಿಂದ ಸಾಗುತಿದ್ದೆ. ಕೆಳಗೆ, ನಕಾಶೆಯಂತೆ, ಒಂದು ಕಾಲದಲ್ಲಿ ಜಗತ್ತಿನಲ್ಲೆಲ್ಲ ಅತ್ಯಂತ ಫಲವತ್ತಾದ ಭೂಮಿಯೆನಿಸಿದ ಮಿಸಿಸಿಪಿ ನದೀ ತೀರದ ಬಯಲು ಹಬ್ಬಿತ್ತು.

ಅದರಲ್ಲಿ ಈಗಲೂ ಅಲ್ಲೊಂದು ಇಲ್ಲೊಂದು ಫಲವತ್ತಾದ ತುಣುಕು ಇದ್ದೇ ಇದೆ. ಆದರೆ ಅದರ ಬಹುಭಾಗದ ಹುಲಸುತನ ಕಡಿಮೆ ಕಡಿಮೆಯಾಗುತ್ತ ಸಾಗಿದೆ. ಅದರ ಅಡವಿಗಳಲ್ಲಿ ಅಧಿಕಾಂಶವನ್ನು ಕಡಿಯಲಾಗಿವೆ; ಕೃಷಿ ಭೂಮಿಯಲ್ಲಿ ಎಷ್ಟೋ ಭಾಗ ಹಾಳುಗೆಡಹಲ್ಪಟ್ಟಿದೆ. ಇದೆಲ್ಲವೂ ೧೦೦ ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿ, ಕೆಲವೆಡೆಗಳಲ್ಲಂತೂ ಒಂದೇ ತಲೆಮಾರಿನಲ್ಲಿ ನಡೆದು ಹೋಯಿತು.

ಅಯೋವಾದ ಅರ್ಧಾಂಶವನ್ನು ಕ್ರಮಿಸಿದ ಮೇಲೆ ನನ್ನೊಡನಿದ್ದವನು ಕೆಳಗೆ ನೋಡುತ್ತ ಹೇಳಿದ: "ಅಯ್ಯೊ! ಇದಂತೂ ಬಲು ಸೊಗಸಾದ ನೋಟ! ಇಲ್ಲಿ ಕೆಳಗೆ ಭಾರಿ ಪ್ರಮಾಣದಲ್ಲಿ ಆಹಾರವನ್ನು ಬೆಳೆಸುತ್ತಾರೆ."

ಕಲಾದೃಷ್ಟಿಯಿಂದೇನೋ ಅದು ಬಹಳ ಸುಂದರ ದೃಶ್ಯವೇ ಆಗಿತ್ತು...

ತೋರಿಕೆಗೆ ಎಲ್ಲ ಸರಿಯಾಗೇ ಇತ್ತು. ಆದರೆ ನಗರವಾಸಿಯಾದ ನನ್ನ ಸಂಗಡಿಗನಿಗೆ ಬರೆ ಹೊರಗಿನ ಚಿಕ್ಕಪ್ಪೇ ತೋರುತಿತ್ತು— ಅವನ ಜೇಬಿನಿಂದ ಹಣ ಕತ್ತರಿಸುವ, ಬಹಳ ಮಾಡಿ ಅವನ ಎಲುಬಿನ ಕ್ಯಾಲ್ಸಿಯಮನ್ನೂ ಮೆದುಳಿನ ರಂಜಕವನ್ನೂ ಅಪಹರಿಸುವ ಭಯಾನಕ ಸಂಗತಿಗಳು ಅಲ್ಲಿ ಜರಗುತಿದ್ದವೆಂಬುದನ್ನು ಅವನು ಅರಿತಿರಲಿಲ್ಲ. ಟೆಕ್ಸಾಸದ ಕರಿ ನಾಡಿನಿಂದ ಮೇಲೇರಿದೊಡನೆ ಆ ಸುಂದರ ದೃಶ್ಯದ ಒಳಗೆ ಇದ್ದುದನ್ನು ನಾನು ಅವನಿಗೆ ತಿಳಿಹೇಳತೊಡಗಿದೆ.

ಅಲ್ಲಿನ ಆ ಕರಿಮಣ್ಣು ಇನ್ನೂ ಅಲ್ಲಿ ಕೃಷಿ ಪ್ರಾರಂಭವಾಗುವ ಮೊದಲು ಬಹಳ ಆಳದ ವರೆಗೆ, ಕೊಳೆತ ಜೀವಜನ್ಯ ವಸ್ತುಗಳಿಂದ ತುಂಬಿ, ಸುಣ್ಣದ ಅದಿರಿನ ಮೇಲೆ ಹಬ್ಬಿತ್ತು. ಇಂಥ ಮಣ್ಣು ಭೂಮಿಯ ಮೇಲೆ ವಿರಳವಾಗಿಯೆ ಕಾಣಸಿಗುತ್ತದೆ. ಟೆಕ್ಸಾಸ, ಅಲ್ಬಾಮಾ, ಮಿಸಿಸಿಪಿ ಮತ್ತು ರಶಿಯಾದ ಯುಕ್ರೇನ್‌ಗಳನ್ನು ಉಲ್ಲೇಖಿಸಬಹುದು. ಆದರೆ ನಮ್ಮ ವಿಮಾನ ಮೇಲಕ್ಕೇರಿದಂತೆ, ಟೆಕ್ಸಾಸದ ಕರಿಮಣ್ಣಿನ ಬಯಲಲ್ಲಿ ಅಲ್ಲಲ್ಲಿ ಮಂಡಲಾಕಾರದ ದೊಡ್ಡ ದೊಡ್ಡ ಭಾಗಗಳು ಕಂಡು ಇಲ್ಲವೆ ಬಿಳಿ ಪೇರಿದಂದು ಕಾಣಬಂತು. ಕಂದು ಬಣ್ಣ ಕಂಡಲ್ಲಿ ಫಲವತ್ತಾದ ಮೇಲಿನ ಅದುರು ಬಹಳ ಮಟ್ಟಿಗೆ ಮಾಯವಾಗಿತ್ತೆಂದು ಅರ್ಥ. ಬಿಳುಪೇರಿದ ಭಾಗದಲ್ಲಂತೂ ಕಾಣುತಿದ್ದುದು ಸುಣ್ಣವೇ— ಅರ್ಥಾತ್ ಅಲ್ಲಿದ್ದ ಮೇಲಿನ ಪದರೆಲ್ಲವೂ ಪೂರ್ಣ ಹೊರಟು ಹೋಗಿತ್ತು. ಕಂದುಗಟ್ಟಿದ ಭೂಮಿಯನ್ನು ಪುನಃ ಫಲವತ್ತಾಗಿ ಮಾಡಬೇಕಾದರೆ ಅನೇಕ ವರ್ಷಗಳ ಶ್ರಮವೂ ಅಗಾಧ ವೆಚ್ಚವೂ ಬೇಕಾಗುವದು. ಬಿಳುಪಾದ ಸುಣ್ಣದ ಅದುರು ಕಾಣುತಿದ್ದಲ್ಲಂತೂ ಹತ್ತು ಲಕ್ಷ ವರ್ಷದವರೆಗೆ ಏನೂ ಬೆಳೆಯಲಾರದು.

ಈ ಸಮೃದ್ಧವಾದ ಮಣ್ಣು ಹೇಗೆ ಹಾಳಾಯಿತು? ಅದೆಲ್ಲ ತೊಳೆದು ಹೋಗಿತ್ತು, ಇಲ್ಲವೆ ಹಾರಿ ಹೋಗಿತ್ತು— ವರ್ಷ ವರ್ಷವೂ ಅದನ್ನು ಮಳೆಗಾಳಿಗಳ ಹೊಡೆತಕ್ಕೆ ತೆರವಾಗಿ ಬಿಟ್ಟುಬಿಟ್ಟದ್ದರಿಂದ ಹೀಗಾಯಿತು.

ಅಷ್ಟರಲ್ಲೆ ನಾವು ಉತ್ತರ ಟೆಕ್ಸಾಸದ ಮತ್ತು ದಕ್ಷಿಣ ಓಕ್ಲಹಾಮಾದ ಕೆಂಪು ಭೂಮಿಯ ಮೇಲ್ಗಡೆ ಹಾರುತಿದ್ದೆವು. ಈ ಕೆಮ್ಮಣ್ಣಿನ ಭೂಮಿ ಒಂದಾನೊಂದು ಕಾಲದಲ್ಲಿ ಜಗತ್ತಿನ ಅತ್ಯುತ್ತಮ ಹುಲ್ಲುಗಾವಲುಗಳಲ್ಲೊಂದಾಗಿತ್ತು. ಇಲ್ಲಿ ಲಕ್ಷಾಂತರ ಎಮ್ಮೆ ಕೋಣಗಳು ಎತ್ತರವಾದ ಮಿದು ಹುಲ್ಲಿನಿಂದ ಹೊಟ್ಟೆ ಹೊರೆಯುಕೊಳ್ಳುತ್ತಿದ್ದವು. ಆದರೆ ಅತಿರೇಕವಾಗಿ ದನಕರುಗಳನ್ನು ಮೇಯಗೊಟ್ಟದ್ದರಿಂದಲೂ ವರ್ಷವರ್ಷವೂ ಹುಲ್ಲನ್ನು ಸುಟ್ಟು ಹಾಕಿದ್ದರಿಂದಲೂ ಈಗ ಹುಲ್ಲುಗಳು ಕುಳ್ಳಾಗಿ ವಿರಳವಾಗಿ ಬೆಳೆಯುತ್ತಿವೆ. ಪಶುಪಾಲಕರು ಅದನ್ನೊಂದು ಪಿಡುಗೆಂದೇ ಬಗೆಯುತ್ತಾರೆ. ಈಗ ಆ ವಿಸ್ತಾರವಾದ ಬಯಲಲ್ಲಿ ಅಲ್ಲಲ್ಲಿ ಹಾಳುಬಿದ್ದ ಗೋಶಾಲೆಗಳು ಕಾಣಸಿಗುತ್ತವೆ. ಹಿಂದಣ ಕಾಲದಲ್ಲಿ ಹುಲುಸಾಗಿದ್ದ ಈ ಬಯಲಲ್ಲೀಗ ಕೆಲವೇ ಅಸ್ಥಿ ಪಂಜರದಂಥ ದನಕರುಗಳು ಮೇಯುತ್ತವೆ.

ಎಲ್ಲಕ್ಕಿಂತ ಕೆಡುಕೆನಿಸುವದೆಂದರೆ ಎಲ್ಲೋ ಅಲ್ಲೊಬ್ಬ ಇಲ್ಲೊಬ್ಬ ರೈತನು ತನ್ನ ಹೊಲಗಳಿಗೆ ಚಪ್ಪರ ಹಾಕಿದಲ್ಲಿ ಹೊರತು ಉಳಿದೆಲ್ಲ ಕಡೆಗಳಲ್ಲಿ ದೊಡ್ಡ ದೊಡ್ಡ ಪ್ರವಾಹಗಳು ಭೂಮಿಯನ್ನು ಕೊಚ್ಚಿಕೊಂಡು ಕೋಟ್ಯಂತರ ಟನ್‌ಮಣ್ಣನ್ನು ವರ್ಷವರ್ಷವೂ ನುಂಗುತಿದ್ದವು- ಹೊಳೆಗಳೂ ಹಳ್ಳಗಳೂ ಬೇಸಿಗೆಯ ಮಳೆಯಿಂದ ತುಂಬಿ ತುಳುಕಿ ರಕ್ತದಂತೆ ಕೆಂಪಾಗಿ ಹರಿಯುತ್ತಿದ್ದವು.

ಸರಕಾರದ ಅಂಕಿ ಸಂಖ್ಯೆಗಳಿಂದ ನಮ್ಮ ಪ್ರಧಾನ ಬೆಳೆಗಳ ಎಕರೆವಾರು ಸರಾಸರಿ ಹುಟ್ಟುವಳಿ ಈಚಿನ ವರ್ಷಗಳಲ್ಲಿ ಹೆಚ್ಚಿದಂತೆ ಕಾಣಬರುತ್ತದೆ... ಆದರೆ ಬಿಡಿಸಿ ನೋಡಿದರೆ ಈ ಪುಸ್ತಕದ ಅಂಕಿಗಳಲ್ಲಿ ಕಾಣಬಂದ ಹುಟ್ಟುವಳಿಯ ಹೆಚ್ಚಳ ತೋರಿಕೆಯದು ಮಾತ್ರವೆಂದು ತಿಳಿಯುವದು. ಸಾವಿರಗಟ್ಟಲೆ ಎಕರೆಗಳು ಈಗ ಏನನ್ನೂ ಹಡೆಯುವದಿಲ್ಲವಾದುದರಿಂದ ಅವುಗಳನ್ನು ತ್ಯಜಿಸಿಬಿಡಲಾಗಿದೆ. ಇದರ ಲೆಕ್ಕ ಹಿಡಿದಿಲ್ಲ. ಇನ್ನೂ ಕೃಷಿಯಲ್ಲಿರುವ ಭೂಮಿಯ ಹುಟ್ಟುವಳಿಯನ್ನೂ ಸುಧಾರಿಸಿದ ಬೀಜದ ಮೂಲಕ ಅಸ್ವಾಭಾವಿಕವಾಗಿ ಹೆಚ್ಚಿಸಲಾಗಿದೆಯೆಂಬುದನ್ನೂ ಲೆಕ್ಕಕ್ಕೆ ಹಿಡಿದಿಲ್ಲ. ಈ ಹೆಚ್ಚಳಕ್ಕೂ ಭೂಮಿಯ ಸಾರಕ್ಕೂ ಏನೂ ಸಂಬಂಧವಿಲ್ಲ.

೧೮೫೦ ಕ್ಕಿಂತ ಮೊದಲು ಗೋವಿನಜೋಳ ಬೆಳೆಯುವ ಅಕ್ಷತ ಭೂ ಪ್ರದೇಶದ ಹುಟ್ಟುವಳಿ ಯಾವದೇ ಕೃತಕ ಗೊಬ್ಬರವಿಲ್ಲದೆ ಎಕರೆಗೆ ೧೨೦ ಬುಶೆಲ್ಲುಗಳಷ್ಟು ಇತ್ತೆಂಬುದು ಸರ್ವವಿದಿತ. ಈಗ ಅತ್ಯುತ್ತಮ ಗೋವಿನಜೋಳ ಬೆಳೆಯುವ ಭಾಗವೆಂದು ಪ್ರಸಿದ್ಧವಾದ ಇಲಿನೋಸದ ಮ್ಯಾಕ್ಲೀನ ಕೌಂಟಿಯಲ್ಲಿ ಕೂಡ ಎಕರೆಗೆ ೫೫ ಬುಶೆಲ್ಲಗಳಷ್ಟು ಮಾತ್ರ ಬೆಳೆಯುತ್ತದೆ. ನಮ್ಮ ಭೂಮಿಯ ಸಾರದ ಅವನತಿ ಅಷ್ಟು ಆಗಿದೆ.

ನಮ್ಮ ಆಕಾಶ ಯಾತ್ರೆಯ ಕಾಲಕ್ಕೆ ನಾವು ಕಂಡದ್ದು ಮೊದಲು ಅತ್ಯಂತ ಸಾರವತ್ತಾಗಿದ್ದು ಆ ಮೇಲೆ ಸವೆದು ಹಾಳಾಗಿ ಹೋದ ಭೂಮಿ. ಈ ದುರಂತದಿಂದ ತನಗಾದ ಹಾನಿಯನ್ನು ನನ್ನ ಸಂಗಡಿಗನು ಮನಗಂಡಿದ್ದಿಲ್ಲ. ಅದರಿಂದ ಅವನ ಆಹಾರ ವಸ್ತುಗಳ ಬೆಲೆ ಹೆಚ್ಚಿತ್ತು, ರೈತರಿಗೆ ಸಹಾಯಧನ ಕೊಡುವಗೋಸುಗ ಅವನ ಮೇಲೆ ಹೆಚ್ಚು ಕರಬಿದ್ದಿತ್ತು. ಇನ್ನು ಮುಂದೆಯೂ ಪರಿಹಾರ, ನೀರಾವರಿಯೋಜನೆಗಳಿಗಾಗಿಯೂ ಅವನು ಹಣ ತೆರಬೇಕಾಗಿ ಬರಬಹುದು. ಮನುಷ್ಯರ ಆರೋಗ್ಯಕ್ಕೆ ಅತಿ ಅವಶ್ಯವಾದ ಖನಿಜ ದ್ರವ್ಯಗಳಿಂದ ವಿರಹಿತವಾದ ಈ ರಿಕ್ತ ಭೂಮಿಯಲ್ಲಿ ಬೆಳೆಯುವ ಪೈರಿನಲ್ಲಿಯೂ ಆ ದ್ರವ್ಯಗಳ ದಾರಿದ್ರ್ಯವಿರುವದೆಂದೂ ಈ ಸಾರ ರಹಿತ ಭೂಮಿಯಲ್ಲಿ ಹುಟ್ಟಿದ ಆಹಾರವನ್ನು ತಿಂದವರು ದಿನ ಹೋದಂತೆ ದೈಹಿಕ ಮಾನಸಿಕ ದೌರ್ಬಲ್ಯಕ್ಕೊಳಗಾಗುವರೆಂದೂ ಅವನಿಗೆ ಮನವರಿಕೆಯಾಗಿದ್ದಿಲ್ಲ.

ದೃಷ್ಟಾಂತಕ್ಕಾಗಿ, ಎಲ್ಲ ಕೋಸಗಡ್ಡೆಗಳೂ ಜೀವಸತ್ವ ಮತ್ತು ಖನಿಜ ಸಾರದಲ್ಲಿ ಒಂದೇ ಬಗೆಯಾಗಿರುವವೆಂದು ಬಗೆಯುವ ಜನರು ಅನೇಕರಿದ್ದಾರೆ ಇದು ಸರಿಯಲ್ಲ. ಒಂದು ಕೋಸಿನಲ್ಲಿ ಖನಿಜ ಮತ್ತು ಜೀವ ಸತ್ವಾಂಶ ಬಹಳ ಹೆಚ್ಚಾಗಿರಬಹುದು; ಇನ್ನೊಂದು ಸೀರಲ್ಲಿ ಬೆಳೆಯುವ ಹುಲ್ಲಿಗಿಂತ ಹೆಚ್ಚು ಪೌಷ್ಟಿಕವಾಗಿರಲಿಕ್ಕಿಲ್ಲ. ಏಕೆಂದರೆ, ಯಾವದೇ ಕಾಯಿಪಲ್ಲೆಯಲ್ಲಿರುವ ಖನಿಜಗಳೂ ಬಹಳ ಮಟ್ಟಿಗೆ ಜೀವಸತ್ವಗಳೂ ಅದು ಎಲ್ಲಿ ಬೆಳೆಯಿತೋ ಆ ಭೂಮಿಯ ಖನಿಜ ಸಮೃದ್ಧಿಯನ್ನೆ ಅವಲಂಬಿಸಿವೆ. ಸಾರಹೀನವಾದ ಮಣ್ಣಿನಿಂದ ಆರೋಗ್ಯವಂತ ನಾಗರಿಕರನ್ನು ನಿರ್ಮಿಸುವದು ಅಸಾಧ್ಯ.

ಭೂಮಿಯ ನೈಸರ್ಗಿಕ ಫಲವತ್ತೆ ಇಳಿದಂತೆ ಉತ್ಪಾದನೆಯ ವೆಚ್ಚ ಏರುವದೆಂದಾಗಲಿ ಅದರಿಂದ ಬಳಕೆಗಾರರ ಬೆಲೆ ಏರಿದರೂ ಉತ್ಪಾದಕನ ಲಾಭ ಕಡಿಮೆಯಾಗುವದೆಂದಾಗಲಿ ನನ್ನ ಸಂಗಡಿಗನು ಮನಗಂಡಿರಲಿಲ್ಲ...

ಆ "ಸುಂದರ" ದೃಶ್ಯದ ನಿಜರೂಪವನ್ನು ನೋಡಿದರೆ, ನಮ್ಮ ರಾಷ್ಟ್ರದ ಶಕ್ತಿ, ಸಂಪತ್ತಿ, ಪ್ರಭಾವಗಳು ಯಾವುದನ್ನು ಅವಲಂಬಿಸಿದೆಯೋ ಆ ನೈಸರ್ಗಿಕ ಸಂಪತ್ತಿಯ ವಿನಾಶದ ಭೀಕರ ದುರಂತ ಚಿತ್ರ ಕಾಣುತ್ತದೆ. ಕೃಷಿ ಭೂಮಿಯ ವಿನಾಶ ಹೀಗೆಯೆ ಮುಂದೆ ಸಾಗಿದರೆ ಆಹಾರ ವಸ್ತುಗಳ ಬೆಲೆ ಏರುತ್ತ ಹೋಗಿ ಕೊನೆಗೊಮ್ಮೆ ಮಾಂಸ ಬೆಣ್ಣೆ, ಮೊಟ್ಟೆಗಳು ಕೇವಲ ಶ್ರೀಮಂತರಿಗಷ್ಟೆ ಲಭ್ಯವಾಗುವ ಕಾಲ ಬರಬಹುದು...

ಭೂಸಾರ ರಕ್ಷಣೆ ಮತ್ತು ಜಲ ರಕ್ಷಣೆಯಲ್ಲಿಯೂ ಸಾರಹೀನ ಭೂಮಿಗಳಲ್ಲಿ ಸಾರವನ್ನು ತಿರುಗಿ ನಿರ್ಮಿಸುವದರಲ್ಲಿಯೂ ಅಮೇರಿಕೆಯಲ್ಲಾದ ಪ್ರಗತಿಯನ್ನು ಉಪೇಕ್ಷಿಸುವಂತಿಲ್ಲ. ಭೂಸಾರ ರಕ್ಷಣೆಯ ಕಾಯಿದೆಯಿಂದ ದೊಡ್ಡ ಮುನ್ನಡೆಯಾಗಿದೆ. ಆ ಕಾಯಿದೆಯನ್ನು ರೈತರೇ ಜಾರಿಗೆತರುವರು. ಆದರೆ ಅಮೇರಿಕೆಯ ಭೂಸಾರ ರಕ್ಷಣ ಖಾತೆಯವರು ಯಾಂತ್ರಿಕ ತಾಂತ್ರಿಕ ಸಹಾಯವನ್ನೂ ಸಲಹೆಯನ್ನೂ ಕೊಡಲು ಯಾವಾಗಲೂ ಸಿದ್ಧರಾಗಿದ್ದಾರೆ.

ಸರಕಾರವೂ ಭೂಮಿತ್ರ, ಮಣ್ಣಿನ ಮಿತ್ರ ಸಂಘಗಳಂಥ ಔದ್ಯೋಗಿಕ ಸಂಸ್ಥೆಗಳೂ ಸಂಘಗಳೂ ಮಹತ್ವದ ಕೆಲಸ ಮಾಡುತಿವೆ.

ಆದರೆ ದೇಶದ ವಿಸ್ತಾರ ಪ್ರದೇಶಗಳಲ್ಲಿ ಭೂಮಿಗೆ ಒಡ್ಡು ಹಾಕುವ ಮತ್ತು ಮಳೆ ನೀರನ್ನು ಬಿದ್ದಲ್ಲಿಯೇ ಉಳಿಸಿಕೊಳ್ಳುವ ಕೆಲಸ ಇನ್ನೂ ಆಗಬೇಕಾಗಿದೆ. ಇದರ ಅಂತಿಮ ಹೊಣೆ ಒಕ್ಕಲಿಗನ ಮೇಲೆಯೆ ಇದೆ. ಆದರೆ ಕೆಲವೆಡೆಗಳಲ್ಲಿ ಭೂಮಿಯ ಸಾರ ಎಷ್ಟರ ಮಟ್ಟಿಗೆ ನಷ್ಟವಾಗಿದೆಯೆಂದರೆ ಅದರಲ್ಲಿ ಬೆಳೆದ ಆಹಾರದಲ್ಲಿ ಅವಶ್ಯಕ ಖನಿಜಗಳು ಸರ್ವಥಾ ಶೂನ್ಯವಾಗಿ ಬಿಟ್ಟಿವೆ. ಅದರಿಂದ ಹಳ್ಳಿಯ ಪ್ರಜೆಗಳು ತೀರ ದುರ್ಬಲರಾಗಿದ್ದಾರೆ. ಅವರು ಏನೂ ಮಾಡಲು ಅಸಮರ್ಥರಾಗಿದ್ದಾರೆ. ಇಲ್ಲಿ ಸರಕಾರದ ಸಹಾಯ ಸ್ವಲ್ಪ ಮಟ್ಟಿಗೆ ಬೇಕು. ಭೂಸಾರ ಶೋಷಣೆಯನ್ನೂ ಮಹಾಪೂರಗಳನ್ನೂ ಎದುರಿಸಲು ಹೂಡಿದ ಹೋರಾಟಕ್ಕೆ ವೆಚ್ಚವಾದ ಹಣ ರಾಷ್ಟ್ರಕ್ಕೆ ಬಹಳ ಲಾಭಕರವಾಗುವದು.

ರೇಲು ಗಾಡಿಯ ಕಿಡಿಕಿಯಿಂದಾಗಲಿ ಮೋಟಾರಿನಿಂದಾಗಲಿ, ಹಣಕಿ ಹಾಕಿ ನೀವು ಈ ಇದಿಕತೆಯ ಸತ್ಯಾಸತ್ಯತೆಯನ್ನು ಕಣ್ಣಾರೆ ಕಾಣಬಲ್ಲಿರಿ ಹಾಗೆ ಮಾಡಲು ಒಮ್ಮೆ ಪ್ರಯತ್ನಿಸಿ ನೋಡಿರಿ ಮರೆಯಬೇಡಿರಿ— ಒಂದೊಂದು ಮಹಾಪೂರದಿಂದ ಶೋಷಣೆಗೊಂಡ ಹೊಲವೂ ಕೆಸರಿಂದ ತಡೆದು ನಿಂತ ಒಂದೊಂದು ನದಿಯೂ ಸುಟ್ಟ ಪ್ರತಿ ಅಡವಿಯೂ ಹಾಳುಬಿದ್ದ ಪ್ರತಿ ಹಟ್ಟಿಯೂ ನಿಮ್ಮ ರೊಕ್ಕಕ್ಕೆ ಮುಳುವಾಗಿದೆ. ಏರಿದ ಬೆಲೆ, ಏರಿದ ತೆರಿಗೆ, ಸಹಾಯಧನ, ಡಾಲರಿನ ಕ್ರಯಶಕ್ತಿಯನ್ನು ಏರಿದ ಬೆಲೆಗಳು ಕುಗ್ಗಿಸಿಬಿಡುವದರಿಂದ ಒದಗುವ ಸಂಪುಗಳು ಇವೆಲ್ಲದರ ರೂಪದಲ್ಲಿ ನೀವು ರೊಕ್ಕ ಕಳೆದುಕೊಳ್ಳಬೇಕಾಗುವದು. ನಮ್ಮ ಭೂಮಿಯ ಸಾರವೂ ನಮ್ಮ ಅಡವಿಗಳೂ ಇತರ ನೈಸರ್ಗಿಕ ಸಂಪತ್ತಿಯೂ ಹೊರಟು ಹೋದ ಬಳಿಕ ಜಗತ್ತಿನಲ್ಲಿರುವ ಎಲ್ಲ ಚಿನ್ನವನ್ನೂ ನಮ್ಮ ನಾಕ್ಸಕೋಟೆಯಲ್ಲಿ ಭದ್ರವಾಗಿ ಹುಗಿದಿಟ್ಟದ್ದರಿಂದಾಗಲಿ ತಮ್ಮ ಹಣಕಾಸಿನ ಖಾತೆಯವರು ಖಂಡಿಗಟ್ಟಲೆ ನೋಟುಗಳನ್ನು ಹೊರಡಿಸಿದ್ದರಿಂದಾಗಲಿ ಏನೂ ಫಲವಿಲ್ಲ, ಇಷ್ಟೆಲ್ಲ ಇದ್ದರೂ ನಮ್ಮ ರಾಷ್ಟ್ರದ ಇತಿಹಾಸ ಸಮಾಪ್ತಿಯಾಗುವದೆಂದು ನೆನಪಿರಲಿ.

ಕುರಾಣ ಪಠಣಕ್ಕೆ ಆಕ್ಷೇಪ

ಮಹಾತ್ಮಾ ಗಾಂಧಿಯವರು ಎಪ್ರಿಲ ಮೂರನೇ ತಾರೀಖಿನ ದಿನ ಹೊಸದಿಲ್ಲಿಯಲ್ಲಿ ಸಾಯಂ ಪ್ರಾರ್ಥನೆಯ ಸಭೆಯಲ್ಲಿ ಭಜನೆಯಲ್ಲಿ ಕುರಾಣ ಪಠಣಕ್ಕೆ ಯಾರದಾದರೂ ಆಕ್ಷೇಪವಿದೆಯೆ ಎಂದು ಕೇಳಿದ್ದಕ್ಕೆ ಕೆಲವರು ಎದ್ದು ನಿಂತರು. ಇದರ ಹಿಂದಿನ ದಿನ ಕೆಲವರು ಕುರಾಣ ಪಠಣಕ್ಕೆ ಆಕ್ಷೇಪವೆತ್ತಿದ್ದರಿಂದ ಮಹಾತ್ಮರು ಆ ಪ್ರಶ್ನೆ ಕೇಳಿದರು. ಕೆಲವರ ಆಕ್ಷೇಪವಿದೆಂದು ಕಂಡು ಬಂದದ್ದರಿಂದ ಅಂದು ಪ್ರಾರ್ಥನೆಯು ಜರುಗಲಿಲ್ಲ.

ಧಾನ್ಯಗಳ ಉಳಿಕೆ

ದೇಶದಲ್ಲಿ ಈಗ ಇರುವ ಧಾನ್ಯಗಳ ಕೊರತೆಯನ್ನು ಅನುಲಕ್ಷಿಸಿ ಭೋಜನ ವಿಷಯದಲ್ಲಿ ಮಗನವಾಡಿಯಲ್ಲಿ ಕೆಲವು ಪ್ರಯೋಗಗಳನ್ನು ಮಾಡಸಲಾಯಿತು. ಮಗನವಾಡಿಯಲ್ಲಿ ಪ್ರಯೋಗ ಸಿದ್ಧವಾದ ಈ ಕೆಳಗಿನ ಸೂಚನೆಗಳು ಕೆಲವು ಮಟ್ಟಿಗೆ ಧಾನ್ಯಗಳ ಸೇವನೆಯನ್ನು ಕಡಿಮೆ ಮಾಡಲು ಸಹಾಯಕವಾದವು.

ಕೆಲವು ಸ್ಥಳಗಳಲ್ಲಿ ಸೀದಾಧಿಕಾರಿಗಳು ಧಾನ್ಯಗಳ ಬದಲು ಅಟಾ ಅಥವಾ ಹಿಟ್ಟು ಹಂಚುತ್ತಿದ್ದಾರೆ. ಇದಕ್ಕೆ ಉಪಯೋಗಿಸಿದ ಧಾನ್ಯಗಳು ಕೀಳ್ತರದವುಗಳಾದುದರಿಂದ ಹಿಟ್ಟನ್ನು ಹೆಚ್ಚು ಪೌಷ್ಟಿಕವಾಗಿ ಮಾಡಲು ಅದಕ್ಕೆ ಕ್ಯಾಲ್ಸಿಯಂ ಲವಣವನ್ನು ಬೆರೆಸಬೇಕೆಂಬ ಸೂಚನೆ ಬಂದಿದೆ. ಹಿಟ್ಟಿಗೆ ನೂರಕ್ಕೆ ೧೫ ರಷ್ಟು ಶುದ್ಧಮಾಡಿದ ಶೇಂಗಾ ಹಿಂಡಿಯನ್ನು ಬೆರೆಸಬೇಕೆಂದು ನಮ್ಮ ಸೂಚನೆಯುಂಟು. ಇದು ಎಷ್ಟೋ ಬಗೆಯಿಂದ ಸಾಧಕವಾಗಿದೆ:

೧. ಧಾನ್ಯಗಳಲ್ಲಿ ನೂರಕ್ಕೆ ೧೫ ರಷ್ಟು ಪ್ರತ್ಯಕ್ಷ ಉಳಿಕೆಯಾಗುವದು.

೨. ಹಿಟ್ಟಿನಲ್ಲಿರುವ ಪ್ರೊಟೀನ ಅಂಶ ಹೆಚ್ಚು ಕಡಿಮೆ ಇಮ್ಮಡಿಯಾಗುವದು.

೩. ಬೆಲೆಯಲ್ಲಿ ಏನೂ ಹೆಚ್ಚಳವಾಗುವದಿಲ್ಲ ಆದರೆ ಕಡಿಮೆಯೇ ಆಗಬಹುದು.

೪. “ಬ” ಶ್ರೇಣಿಯ ಜೀವಸತ್ವಗಳು ಮುಖ್ಯವಾಗಿ (ಬ ೧) ಜೀವಸತ್ವ ಶೇಂಗಾ ಹಿಂಡಿಯಲ್ಲಿ ಸಮೃದ್ಧವಾಗಿದೆ.

ಹಿಟ್ಟಿನಲ್ಲಿ ಈ ಪ್ರಮಾಣದಲ್ಲಿ ಶೇಂಗಾ ಹಿಂಡಿಯನ್ನು ಬೆರಸುವದರಿಂದ ಅದು ಕಮಟುವ ಅಪಾಯವಿಲ್ಲ. ಹಿಟ್ಟಿನಲ್ಲಿರುವ ಗುಣವಿಶೇಷದಿಂದ ಬೆರಕೆಯ ಫಲವಾಗಿ ಹಿಟ್ಟು ಮುಗ್ಗುವ ಸಂಭವ ದೂರವಾಗುತ್ತದೆ.

ಒಳ್ಳೆ ತಾಜಾ ಬೀಜಗಳನ್ನಷ್ಟೆ ತೆಗೆದುಕೊಂಡು ಕೈಯಿಂದಲೇ ಸಿಪ್ಪೆ ತೆಗೆಯಬೇಕು. ಎತ್ತಿನ ಗಾಣದಲ್ಲಿ ಅದರ ಎಣ್ಣೆ ಹಿಂಡಬೇಕು. ಬಿಸಿಯಾಗದಂತೆ ಎಣ್ಣೆ ತೆಗೆಯುವದರಿಂದ ಶೇಂಗಾದಲ್ಲಿರುವ ಪೌಷ್ಟಿಕ ಸತ್ವಗಳು ಸ್ವಲ್ಪವೂ ಹಾಳಾಗುವದಿಲ್ಲ. ಹಿಂಡಿ ಮುಗಿದ ಮೇಲೆ ಹಿಂಡಿಯಲ್ಲಿ ನೂರಕ್ಕೆ ೧೦—೧೧ ರಷ್ಟು ಮಾತ್ರ ಎಣ್ಣೆ ಉಳಿಯುತ್ತದೆ. ಹಿಂಡಿಯನ್ನು ಒಡೆದು ಚೂರುಚೂರು ಮಾಡಿ ಬಿಸಿಲಲ್ಲಿ ಒಣಹಾಕಬೇಕು. ಈ ಪ್ರಕಾರ ಅಣಿಗೊಳಿಸಿದ ಹಿಂಡಿ ಕನಿಷ್ಠ ಒಂದು ವಾರದ ವರೆಗಾದರೂ ತಾಜಾ ಉಳಿದು ತನ್ನ ಸುವಾಸನೆಯನ್ನು ಕಾಯ್ದುಕೊಳ್ಳುತ್ತದೆ. ಅದು ಎಲುಬಿನಷ್ಟು ಗಟ್ಟಿಯಾಗುವದರಿಂದ ಒರಳಲ್ಲಿ ಕುಟ್ಟಿ ಸಣ್ಣಗೆ ಪುಡಿಮಾಡಬಹುದು. ಅದನ್ನು ಬೀಸುವ ಕಲ್ಲಲ್ಲಿ ಬೀಸಿ ಹಿಟ್ಟಿಗೆ ಸರಿಯಾಗುವಂತೆ ಮಾಡಬಹುದು.

ನೂರಕ್ಕೆ ೧೫ ರಷ್ಟು ಇದನ್ನು ಬೆರಸುವದರಿಂದ ದೈನಂದಿನದ ಸಾಧಾರಣ ಭೋಜನದಲ್ಲಿ ದಿನಕ್ಕೆ ೧॥ ಚಟಾಕಿನ ಉಳಿಕೆಯಾಗುವದು. ಈ ಹಿಟ್ಟಿನಿಂದ ಪದಾರ್ಥಗಳನ್ನು ಸಿದ್ಧಗೊಳಿಸಲು ಏನೂ ಅಡಚಣಿಯಾಗುವದಿಲ್ಲ. ಪೂರ್ತಿ ಧಾನ್ಯದ ಹಿಟ್ಟಿನಲ್ಲಿರುವ ಎಲ್ಲ ಗುಣಗಳೂ ಅದರಲ್ಲಿರುವದಲ್ಲದೆ ನೆಲಗಡಲೆಯ ಸುವಾಸನೆಯೂ ಸೇರಿ ಅದು ವಿಶೇಷ ರುಚಿಕರವಾಗುವದು. ನೂರಕ್ಕೆ ೧೫ ರಷ್ಟು ಶೇಂಗಾ ಹಿಂಡಿ ಸೇರಿಸಿದ್ದರಿಂದ ದೊರೆಯುವ ಸುವಾಸನೆ ಬಹಳ ಅಲ್ಪವಾಗಿರಬಹುದು. ಅದಕ್ಕಿಂತಲೂ ಹೆಚ್ಚು ಹಿಂಡಿಯ ಹಿಟ್ಟು ಸೇರಿಸಿದಾಗಲೇ ಅದರ ನಿಜವಾದ ಸೊಗಸು ಗೊತ್ತಾಗುವದು.

ಹಿಂಡಿಯಲ್ಲಿ ನೂರಕ್ಕೆ ೫೦ ಕ್ಕಿಂತಲೂ ಹೆಚ್ಚು ಉತ್ತಮ ಪ್ರೊಟೀನು ಇದೆ.

ಬೇರೆ ಕಡೆಗಳಲ್ಲಿ ನಡೆಸಿದ ಶಾಸ್ತ್ರೀಯ ಸಂಶೋಧನೆಗಳಿಂದ ಶೇಂಗಾದಲ್ಲಿರುವ ಪ್ರೊಟೀನಿನ ಸುಲಭ ಪಾಚಕತೆ ಸಿದ್ಧವಾಗಿದೆ. ಮಧ್ಯದ ನೊರೆಯಲ್ಲಿರುವ ಸೊಕ್ಷ್ಮ ಪ್ರೊಟೀನಿನ ಯೋಗ್ಯತೆಯು ಇದರಲ್ಲಿಯೂ ಇದ್ದು, ಅದು ಹಾಲು, ತತ್ತಿ, ಆಡಿನ ಮಾಂಸಗಳಲ್ಲಿ ದೊರಕುವಂಥ ಪ್ರಾಣಿಜನ್ಯ ಪ್ರೊಟೀನಿಗೆ ಹತ್ತಿರಹತ್ತಿರವಾಗಿದೆ.

ಅನೇಕ ಪ್ರಯೋಗಗಳನ್ನು ಮಾಡಿದ ನಂತರ, ಒಂದೆರಡು ಚಟಾಕು ಶೇಂಗಾ ಹಿಂಡಿಯನ್ನು ಸುಲಭವಾಗಿ ಅರಸಿಕೊಳ್ಳಬಹುದೆಂದೂ ಅದನ್ನು ಧಾನ್ಯಗಳೊಡನೆ ಸೇರಿಸಿ ಪದಾರ್ಥಗಳನ್ನು ಮಾಡಿದರೆ ರುಚಿಕರವಾಗುವದೆಂದೂ ತೀರ್ಮಾನಕ್ಕೆ ಬಂದಿದ್ದೇವೆ. ಹಿಂಡಿಯ ತುಣುಕುಗಳನ್ನು ಎರಡು ತಾಸು ನೀರಿನಲ್ಲಿ ನೆನೆ ಹಾಕಿದರೆ ಅದು ಅಂಟಿನಂತೆ ನುಣುಪಾಗುವದು. ಈ ಅಂಟನ್ನು ಹಿಟ್ಟಿನೊಡನೆ ಬೆರಸಿದರೆ ಒಳ್ಳೇ ಕಸಾಕಿಗಳಾಗುತ್ತವೆ. ನೂರಕ್ಕೆ ಇಪ್ಪತ್ತರಷ್ಟರ ಮಿಶ್ರಣ ಬಹಳ ಉತ್ತಮ. ಬೇಳೆ ಅಥವಾ ತರಕಾರಿ ಪಲ್ಯದೊಡನೆ ಈ ಅಂಟನ್ನು ಸೇರಿಸಿದಟ್ಟರೆ ಅವುಗಳ ಸುವಾಸನೆಯೂ ಹೆಚ್ಚುವದು. ಅಂಬಲಿಯನ್ನು ಮಾಡುವಾಗ ಅದನ್ನು ಧಾನ್ಯಗಳೊಡನೆ ಅರ್ಧಕ್ಕರ್ಧ ಬೆರಸಿದರೆ ದಿವ್ಯವಾದ ರುಚಿ ಬರುವದು.

ಶೇಂಗಾ ಹಿಂಡಿಯನ್ನು ಅದರಿಂದ ಹೀಗೆ ಬಳಸಿಕೊಳ್ಳುವದರಿಂದ ಎಷ್ಟೋ ಧಾನ್ಯವೂ ಉಳಿಯುವದು, ಆರೋಗ್ಯದಾಯಕ ಭೋಜನವೂ ಆಗುವದು.

ಗೆಣಸು:— ಗೆಣಸಿನಲ್ಲಿ ಪಿಷ್ಟಗಳು ವಿಪುಲವಾಗಿವೆ. ಅದನ್ನು ಧಾನ್ಯಗಳ ಬದಲು ಉಪಯೋಗಿಸಿದರೆ ಒಳಿತಾಗುವದು. ಅದನ್ನು ಉಗಿಯಲ್ಲಿ ಬೇಯಿಸಬೇಕು. ನೀರಲ್ಲಿ ಬೇಯಿಸುವದಾದರೆ ಆ ನೀರೆಲ್ಲವೂ ಉಗಿಯಾಗಿ ಹೋಗುವ ವರೆಗೂ ಬೇಯಿಸಬೇಕಾಗುವದು. ಇಲ್ಲದೆ ಹೋದರೆ ಅದರಲ್ಲಿರುವ ಲವಣಗಳೆಲ್ಲ ನೀರಲ್ಲಿ ಕರಗಿ ನೀರನ್ನು ತೆಗೆದು ಚೆಲ್ಲುವಾಗ ಕಳೆದು ಹೋಗುವವು.

ಗೆಣಸನ್ನು ಕಾಯಿಪಲ್ಲೆ, ಹಾಲು, ಮೊಸರು, ಅಥವಾ ಮತ್ತಾವುದರೊಡನೆಯೂ ಸೇವಿಸಬಹುದು. ಯಾವಾಗಾದರೂ ಪೂರ್ಣವಾಗಿ ಧಾನ್ಯವನ್ನು ಬಿಟ್ಟು ಗೆಣಸನ್ನೇ ತಿನ್ನಬೇಕಾಗಿ ಬಂದರೆ ಸಾಮಾನ್ಯವಾಗಿ ತಿನ್ನುವ ಧಾನ್ಯಕ್ಕಿಂತ ಸ್ವಲ್ಪ ಹೆಚ್ಚು ಗೆಣಸನ್ನು ತಿಂದರೆ ಸರಿಹೋಗುವದು.

ಮೀನ ಹಿಡಿಯುವದು ಒಂದು ಮೂಲ ವ್ಯವಸಾಯ

[ಶ್ರೀ ಮಾಂಜರೇಕರರು ರಾಷ್ಟ್ರೀಯ ಶಿಕ್ಷಣಕ್ಕೆ ಜೀವನವನ್ನು ಮುಡುಪಿಟ್ಟ ಶಿಕ್ಷಕರು. ಮೂಲ ಶಿಕ್ಷಣದಲ್ಲಿ ಅವರಿಗೆ ಆಳವಾದ ಆಸ್ಥೆಯುಂಟು. ಅವರು ಇಲ್ಲಿ ಮಾಡಿರುವ ಸೂಚನೆಗಳು ಕರಾವಳಿ ಭಾಗದ ಶಾಲೆಗಳಿಗೆ ಅವಶ್ಯ ಗಮನಾರ್ಹವಾಗಿವೆ. ಮೀನಿನ ವ್ಯವಸಾಯವನ್ನು ಕೈಗಾರಿಕೆಯೆಂದು ಹೇಳಬರುವದಿಲ್ಲ. ಆದರೆ ಒಕ್ಕಲತನವನ್ನೂ ಇದೇ ರೀತಿ ಆಕ್ಷೇಪಿಸಬಹುದು. ಒಕ್ಕಲತನ ಮತ್ಸ್ಯ ವ್ಯವಸಾಯ ಇವೆರಡೂ ಮೂಲಭೂತ ವ್ಯವಸಾಯಗಳು. ಅವು ಮಾನವ ಜೀವನದ ಅನಿವಾರ್ಯ ಅವಶ್ಯಕತೆಗಳಾಗಿವೆಯಲ್ಲದೆ ಮೂಲಭೂತ ಶಿಕ್ಷಣ ವಿಷಯಗಳೆಲ್ಲದರೊಡನೆಯೂ ಹೊಂದಿಕೆಗೊಡಿಸಬರುವಂತಿವೆ.

ಮೀನು ಹಿಡಿಯುವದು ಗಾಂಧೀಜಿಯ ಅಹಿಂಸಾತತ್ವಕ್ಕೆ ಅನುಗುಣವಾಗಿದೆಯೆ ಎಂಬೊಂದು ಸಂಶಯವನ್ನು ಲೇಖಕರು ವ್ಯಕ್ತಗೊಳಿಸಿದ್ದಾರೆ.

“ ಅಹಿಂಸೆ ” ಯೆಂದರೆ ಜೀವಮಾತ್ರದಲ್ಲಿ ಪೂಜ್ಯ ಬುದ್ಧಿಯೆಂಬಲ್ಲಿ ಯಾವ ಸಂದೇಹವೂ ಇಲ್ಲ. ಅಹಿಂಸಾವಾದಿಯಾದವನು ಸರ್ವರೂಪದ ಜೀವಿಗಳಲ್ಲಿಯೂ ಐಕ್ಯವನ್ನು ಕಾಣುವ ಈ ಪೂಜ್ಯಬುದ್ಧಿಗೆ ಯಾವ ಮಿತಿಯನ್ನೂ ಕಟ್ಟಕೂಡದು. ಆದರೆ ಕ್ಷಣಮಾತ್ರದಲ್ಲಿ ನಾವು ನಮ್ಮ ಅಳವುಮೀರಿಬೆಳೆಯಲಾರೆವು. ಮನುಷ್ಯಜಾತಿ ಒಟ್ಟಿನ ಮೇಲೆ ಸಸ್ಯಾಹಾರವನ್ನು ಆಚಾರವೆಂದು ಪರಿಗ್ರಹಿಸಿಲ್ಲ. ಭೋಜನದಿಂದ ಮೀನು-ಮಾಂಸಗಳನ್ನು ಬಹಿಷ್ಕರಿಸಿದರೆ ಲಕ್ಷಾಂತರ ಜನರು ಉಪವಾಸ ಬೀಳಬೇಕಾದೀತು.

ಅಹಿಂಸಾತತ್ವ ಇಂದು ಜಗತ್ತಿನ ಮುಂದಿರಿಸಲ್ಪಟ್ಟಿರುವ ಸ್ವರೂಪದಲ್ಲಿ ಮಾನವ ಸಂಬಂಧಗಳಲ್ಲಿ ಹಿಂಸೆಯನ್ನು ಬಹಿಷ್ಕರಿಸುವದನ್ನೆ ಗುರಿಯಾಗಿಟ್ಟುಕೊಂಡಿದೆ. ಕ್ರೋಧ, ದ್ವೇಷ, ಲೋಭ, ಹೃದಯಹೀನ ಶೋಷಣೆಗಳಿಂದ ಕೊನೆಗೆ ತಿಕ್ಕಾಟ, ಮನಃಕಷಾಯ, ಯುದ್ಧಗಳುಂಟಾಗುವದರಿಂದ ಅವುಗಳನ್ನು ಹಿಡಿತಕ್ಕೆ ತಂದು ನಿಗ್ರಹಿಸಬೇಕಾಗಿದೆ. ಮನುಷ್ಯ-ಮನುಷ್ಯರ ನಡುವೆ ಹಿಂಸೆಯನ್ನು ಬಹಿಷ್ಕರಿಸುವದರಲ್ಲಿ ನಾವು ಯಶಸ್ವಿಗಳಾದರೆ ಮಾನವಜಾತಿ ಎಷ್ಟೋ ಮುನ್ನಡೆದಂತಾಗುವದು. ಇದೊಂದು ಕೈಗೂಡಿತೆಂದರೆ ಪ್ರಾಣಿದಯೆ, ಸಮಸ್ತ ಸಚರ ಜೀವಗಳಲ್ಲಿ ಆದರ, ಇವು ಬಹಳ ಸುಲಭವಾಗಿ ಸಾಧಿಸಬರುವವು. ನಡೆಯಲು ಕಲಿಯುವ ಮೊದಲೇ ಓಡುವ ಹವ್ಯಾಸಕ್ಕೆ ಬೀಳೋಣ ಬೇಡ. ಅಹಿಂಸಾ ಭಾವನೆ ಒಮ್ಮೆ ಸ್ಥಾಪಿಸಲ್ಪಟ್ಟರೆ ಅದು ಬೆಳೆದೇತೀರುವದು. ಮೀನ ಮಾಂಸಗಳನ್ನು ತಿಂಬ ಜನರು ಹಿಂಸಾವಾದಿಗಳೆಂದು ಬಗೆಯುವದು ತಪ್ಪು.

—ಕಾ. ಕಾ.]

ಝುಕೀರ ಹುಸೇನ ಸಮಿತಿಯವರು ಮಕ್ಕಳಿಗೆ ಮೂಲ ಶಿಕ್ಷಣವನ್ನು ಕೊಡುವಲ್ಲಿ ನೂಲುವದು-ನೇಯುವದು, ಬಡಿಗ ಕೆಲಸ, ಒಕ್ಕಲತನ ಮತ್ತು ಚರ್ಮ ವ್ಯವಸಾಯ ಇವುಗಳನ್ನು ಮೂಲಭೂತ ವ್ಯವಸಾಯಗಳೆಂದು ಅನುಮೋದಿಸಿದ್ದಾರೆ. ಬಹುಶಃ ಚರ್ಮದೊಂದನ್ನು ಬಿಟ್ಟು ಉಳಿದ ಮೂರು ಕೈಗಾರಿಕೆಗಳನ್ನು ಹಿಂದುಸ್ತಾನದ ಬೇರೆ ಬೇರೆ ಭಾಗಗಳಲ್ಲಿ ಪ್ರಯೋಗಕ್ಕಿಳಿಸಲಾಗಿದೆ; ಈ ವ್ಯವಸಾಯಗಳನ್ನು ಅನುಮೋದಿಸುವಾಗ ಸಮಿತಿಯವರು, ಸ್ಥಳೀಯ ಮತ್ತು ಭೌಗೋಲಿಕ ಸ್ಥಿತಿಗತಿಗಳು ಅದಕ್ಕೆ ಅನುಕೂಲವಾಗಿದ್ದರೆ ಬೇರಾವ ವ್ಯವಸಾಯವನ್ನೂ ಆರಿಸಿಕೊಳ್ಳಬಹುದೆಂದು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದ್ದರು. ಆದರೆ ಅವುಗಳು ಎರಡು ಅವಶ್ಯಕ ಗುಣಗಳನ್ನೊಳಗೊಂಡಿರಬೇಕೆಂದು ಅವರು ವಿಧಿಸಿದ್ದರು— ಅವೆಂದರೆ ಶೈಕ್ಷಣಿಕ ಮತ್ತು ಆರ್ಥಿಕ. ಮೀನಿನ ವ್ಯವಸಾಯವನ್ನೂ ಮೂಲಭೂತ ವ್ಯವಸಾಯವಾಗಿ ಗ್ರಹಿಸಬೇಕೆಂದು ವರ್ಧಾ ಶಿಕ್ಷಣಜ್ಞರ ಅವಗಾಹನೆಗಾಗಿಯೂ ಸ್ವೀಕಾರಕ್ಕಾಗಿಯೂ ಕೆಲ ವಿಷಯಗಳನ್ನು ಈ ಮೂಲಕ ಮಂಡಿಸುವ ಧೈರ್ಯ ಮಾಡಿದ್ದೇನೆ.

ಮೀನ ಹಿಡಿಯುವದು ಅನಾದಿ ಉದ್ಯೋಗಗಳಲ್ಲೊಂದಾಗಿದ್ದು ಅದರಿಂದ ನಮ್ಮ ಅರೆಹೊಟ್ಟೆಯ ಜನಕೋಟಿಗೆ ಪೌಷ್ಟಿಕ ಆಹಾರವನ್ನು ಒದಗಿಸಬಹುದು. ಸಮುದ್ರ ತೀರದಲ್ಲಿ ವಾಸಿಸುತ್ತ ಅಂಬಿಗರು ವಿವಿಧ ಉಪಕರಣಗಳ ಸಹಾಯದಿಂದ ಕೆಲಸ ಮಾಡುವದನ್ನು ನೋಡಿದವರು ಈ ವ್ಯವಸಾಯದ ಶೈಕ್ಷಣಿಕ ಮೂಲ್ಯವನ್ನು ಮನಗಂಡಿರಬಹುದು. ಶಿಕ್ಷಣ ಮಾಧ್ಯಮವಾಗಿ ಸ್ವೀಕರಿಸಿದ ಯಾವುದೊಂದು ಮೂಲಭೂತ ವ್ಯವಸಾಯ ಯಾವುದೊಂದು ಮೂಲಭೂತ ಮಾನವೀ ಅವಶ್ಯಕತೆಯನ್ನು ಪೂರೈಸಬೇಕು. ಮೀನ ಹಿಡಿಯುವದು ಮನುಷ್ಯನ ಮೂಲ ಅವಶ್ಯಕತೆಗಳಲ್ಲೊಂದನ್ನು—ಅಂದರೆ ಸಮುದ್ರ ತೀರದಲ್ಲಿರುವವರಿಗೆ ಆಹಾರವನ್ನು ಒದಗಿಸುತ್ತದೆ. ಇದರ ಮಹತ್ವ ಅಲ್ಲಿ ಒಕ್ಕಲತನದಷ್ಟೆ ಇದೆ. ರಾಷ್ಟ್ರೀಯ ಆರ್ಥಿಕ ಪದ್ಧತಿಯಲ್ಲಿ ಅದಕ್ಕೆ ಆದರದೇ ಸ್ಥಾನವುಂಟು.

ಝುಕೀರ ಹುಸೇನ ಸಮಿತಿ ವಿಧಿಸಿದ ಶಿಕ್ಷಣ ವಿಷಯ ನಿಯಾಮಕ ಪಟ್ಟಿಯನ್ನು, ಉತ್ಪಾದಕ ಕ್ರಿಯೆಯಾದ ಮೀನ ಹಿಡಿಯುವದರ ಮೂಲಕ ಮತ್ತು ಅದರ ಸಾಂಗೋಪಾಂಗವಾಗಿ ಅನುಸರಿಸಬಹುದು. ತಕಲಿಯ ಶೈಕ್ಷಣಿಕ ಮೂಲ್ಯವನ್ನು ಈಗ ಧಾರಾಳವಾಗಿ ಒಪ್ಪಿಕೊಳ್ಳಲಾಗಿದೆ. ಬಲೆಗಳನ್ನು ಹೆಣೆಯಲು ಬೇಕಾದ ನಾರಿನ ದಾರವನ್ನು ಅಂಬಿಗರು ಇಂದಿಗೂ ತಕಲಿಯಿಂದಲೇ ಹೊಸೆಯುತ್ತಾರೆ. ಕಲ್ನಾರನ್ನು ಬೆಳೆಯುವದು, ಅದರಿಂದ ದಾರ ಹೊಸೆಯುವದು ತಕಲಿ ಮತ್ತು ಬಲೆ ಹೆಣೆಯುವದು ಇವುಗಳನ್ನು ಮೊದಲ್ಐದು ತರಗತಿಗಳಲ್ಲಿ ಕಲಿಸಬಹುದು. ವಿದ್ಯಾರ್ಥಿ ಉಪಯೋಗಿಸಬಲ್ಲ ಬಲೆಗಳಿಂದ ಮೀನ ಹಿಡಿಯುವದನ್ನು ಕೂಡ ಕಲಿಸಬಹುದು. ಬೇರೆ ಬೇರೆ ಜಾತೀಯ ಮೀನು ಹಿಡಿಯಲು ಬೇಕಾದ ಬೇರೆ ಬೇರೆ ಬಗೆಯ ಬಲೆಗಳನ್ನು ಹೆಣೆಯುವದಕ್ಕೆ ಅಳತೆ, ರೇಖಾಗಣಿತಗಳ ಅರಿವು ಬೇಕಾಗುವದರಿಂದ ಈ ವ್ಯವಸಾಯದ ಸಾಂಗೋಪಾಂಗವಾಗಿ ಗಣಿತ ಶಿಕ್ಷಣವನ್ನೂ ಸಾಗಿಸಬಹುದು. ಭೂಗೋಲ (ಇದನ್ನು ಸಾಮಾಜಿಕ ಶಿಕ್ಷಣದಲ್ಲಿ ಸೇರಿಸಲಾಗಿದೆ) ಸಾಮಾನ್ಯ ವಿಜ್ಞಾನಗಳಂಥ ವಿಷಯಗಳನ್ನು ಮೀನ ವ್ಯವಸಾಯ ಶಿಕ್ಷಣದ ಸಾಂಗೋಪಾಂಗವಾಗಿ ಕಲಿಸಲು ಇರುವಂಥ ಅನುಕೂಲತೆ ಬೇರಾವ ವ್ಯವಸಾಯದಲ್ಲಿಯೂ-ನೂಲುವ ನೇಯುವದರಲ್ಲಿ ಕೂಡ ಇಲ್ಲ. ಮಾತೃಭಾಷೆ, ಚಿತ್ರಕಲೆ, ಗಾನಕಲೆ, ಮೊದಲಾದವುಗಳನ್ನು ಕಲಿಸಲಿಕ್ಕೂ ಮೀನ ವ್ಯವಸಾಯ ಪುರುಸೊತ್ತು ಕೊಡಬಲ್ಲದು. ಮೀನ ಹಿಡಿಯುವದು, ದೋಣಿ ಮಾಡುವದು, ಮೀನ ಸಂಸ್ಕಾರ (Fish curing), ಮೀನವನ್ನು ಕೊಳೆಯದಂತೆ ಕಾಯುವದು, ಮೀನದ ಪದಾರ್ಥಗಳನ್ನು ತಯಾರಿಸುವದು, ಮೀನ ಕೃಷಿ, ಮೀನ ವಿಜ್ಞಾನ ಮೊದಲಾದವುಗಳನ್ನು ಕೊನೆಯ ಎರಡು ತರಗತಿಗಳಲ್ಲಿ ತೆಗೆದುಕೊಳ್ಳಬಹುದು.

ಇನ್ನು ಮೀನ ವ್ಯವಸಾಯದ ಸ್ವಾವಲಂಬಿತೆಯನ್ನು ವಿಚಾರ ಮಾಡಿದರೆ ಆರ್ಥಿಕ ದೃಷ್ಟಿಯಿಂದ ಅದು ನೂಲುವ ನೇಯುವದರಷ್ಟೇ ಏಕೆ ಅದಕ್ಕಿಂತಲೂ ಹೆಚ್ಚು ಸ್ವಾವಲಂಬನ ಸಮರ್ಥವಾಗಿದೆಯೆಂದು ನಿರ್ವಿವಾದವಾಗಿ ಹೇಳಬಹುದು. ನಾರಿನ ದಾರ, ಬಗೆ ಬಗೆಯ ಬಲೆಗಳು; ತಾಜಾ ಮೀನು, ಸುಟ್ಟ, ಡಬ್ಬಿಯಲ್ಲಿಕ್ಕಿದ ಉಪ್ಪು ಹಾಕಿದ ಮೀನಗಳು; ಮೀನಿನ ಗೊಬ್ಬರ, ಮೀನೆಣ್ಣೆ ಮೊದಲಾದ ಉತ್ಪನ್ನ ಪದಾರ್ಥಗಳು; ಶಾಲೆ ಕಾಲೇಜುಗಳಿಗೆ ಮಾರಬಹುದಾದ ಜಾತಿಜಾತಿಯ ಮೀನದ ಮಾದರಿಗಳು; ಇವೆಲ್ಲವಕ್ಕೆ ಬೇಕಾದಷ್ಟು ಗಿರಾಕಿಗಳು ದೊರೆಯುವದರಿಂದ ಯೋಗ್ಯ ರೀತಿಯಲ್ಲಿ ನಡೆಸಲ್ಪಟ್ಟರೆ ಶಾಲೆಯ ವೆಚ್ಚವನ್ನೆಲ್ಲ ಅದು ಎದುರಿಸಬಲ್ಲದು.

ಸಂಕ್ಷೇಪವಾಗಿ ಹೇಳಬೇಕಾದರೆ, ಮೀನ ಹಿಡಿಯುವ ಮೂಲಭೂತ ವ್ಯವಸಾಯ (೧) ಶಿಕ್ಷಣಕ್ಕೆ ಯೋಗ್ಯ ಮಾಧ್ಯಮವಾಗಿದೆ. (೨) ಮೂಲ ಶಿಕ್ಷಣದ ಏಳು ವರ್ಷಗಳನ್ನು ಮುಗಿಸಿದ ನಂತರ ವಿದ್ಯಾರ್ಥಿಗೆ ಜೀವಿಕೆಯನ್ನು ಗಳಿಸುವ ಸಾಧನವಾಗುವದು, ೩) ಶಾಲೆಯ ದೈನಂದಿನ ವೆಚ್ಚವನ್ನು ಪೂರೈಸುವದು, ೪) ವಿದ್ಯಾರ್ಥಿಗೆ ಶಿಸ್ತಿನ ಸಹಕಾರಿ ಚಟುವಟಿಕೆಯ ಅಭ್ಯಾಸವನ್ನು ರೂಢಿಸಿ ಕೊಡುವದು, ೫) ಮೀನ ಹಿಡಿಯುವದಕ್ಕೆ ಸಮಾಜದಲ್ಲೊಂದು ಗೌರವಸ್ಥಾನವನ್ನೊದಗಿಸುವದು, ೬) ಶೈಕ್ಷಣಿಕ ಆರ್ಥಿಕ ದೃಷ್ಟಿಗಳಲ್ಲಿ ಹಿಂದುಳಿದಿರುವ ಮೀನಗಾರ ಸಮಾಜಗಳನ್ನು ಉದ್ಧರಿಸುವದು.

ನಯೀ ತಾಲೀಮಿಗೆ ಗಾಂಧೀಜಿ ಹಾಕಿ ಕೊಟ್ಟ ಅಹಿಂಸೆಯ ತಳಹದಿಗೆ ಮಾತ್ರ ಈ ವ್ಯವಸಾಯ ಒಪ್ಪುವದೋ ಇಲ್ಲವೋ ಎಂಬುದೊಂದೇ ನನ್ನ ಸಂದೇಹ.

ಹಿಂದುಸ್ತಾನದ ಕರಾವಳಿ ಅತಿ ದೀರ್ಘವಾಗಿದೆ. ಮೂಲ ಶಿಕ್ಷಣ ಮತ್ತು ಮೀನ ವ್ಯವಸಾಯದ ವಿಕಾಸ ಇವೆರಡೂ ಧ್ಯೇಯಗಳನ್ನಿಟ್ಟುಕೊಂಡ ಕಾಂಗ್ರೆಸ್ ಮಂತ್ರಿ ಮಂಡಲಗಳ ಆಳಿಕೆಯಲ್ಲಿರುವ ಮುಂಬಯಿ ಮದ್ರಾಸ್, ಓಡಿಸಾ, ಪ್ರಾಂತಗಳ ಕರಾವಳಿಯೆ ೩೦೦೦ ಮೈಲುಗಳಷ್ಟಿದೆ. ಮೀನ ಹಿಡಿಯುವದನ್ನು ಮೂಲ ವ್ಯವಸಾಯವಾಗಿ ವಿಕಾಸಗೊಳಿಸುವದೂ ಅದಕ್ಕಾಗಿ ಕರಾವಳಿಯ ಉದ್ದಕ್ಕೂ ಶಾಲೆಗಳನ್ನು ಸ್ಥಾಪಿಸುವದೂ ಅವರಿಗೆ ಸೇರಿದ್ದು. ಹಿಂದುಸ್ತಾನಿ ತಾಲಿಮೀ ಸಂಘವಾದರೂ ಕೇವಲ ನೂಲುವ ನೇಯುವದಕ್ಕೂ ಒಕ್ಕಲತನಕ್ಕೂ ಮಾತ್ರ ತನ್ನ ಚಟುವಟಿಕೆಗಳನ್ನು ಮಿತವಾಗಿರಿಸದೆ ಈ ಭಾಗದಲ್ಲೂ ಪ್ರಯೋಗಗಳನ್ನು ನಡೆಸಿದರೆ ಹಿತಕರ. —ಹನುಮಂತರಾವ ಮಾಂಜರೇಕರ

ಕಾರವಾರ

ಉಜ್ಜನಕ ಸ್ವಾತಂತ್ರ್ಯ

(೭ನೇ ಪುಟದಿಂದ)

ನಿರ್ದಯ ಹಾಗೂ ಕ್ರೂರರಾಗಿ ನಡೆದುಕೊಂಡರೂ ಇಂಗ್ಲಂಡದಲ್ಲಿಯ ಮತಪತ್ರಿಕೆಗಳ ಪರಿಣಾಮವು ತನ್ನ ವಿರುದ್ಧವಾಗುವದೆಂದು ಗೊತ್ತಿದ್ದರೂ ಆ ಪೆಟ್ಟಿಗೆಗಳನ್ನು ಒಡೆಯಲು ತನ್ನ ಸರಕಾರದ ಯಂತ್ರವನ್ನೆಲ್ಲ ಪ್ರಯೋಗಿಸುವ ಬುದ್ಧಿಯು ಅವರಿಗೆಂದೂ ಆಗದು.

ರಾಜಕೀಯ ನೀತಿಮತ್ತೆ

ನಮ್ಮ ರಾಜಕೀಯ ಹಾಗೂ ಧಾರ್ಮಿಕ ಜೀವನದಲ್ಲಿ ವಿವೇಕಹೀನ ವೈರಗಳೂ ಒಳಭೇದಗಳೂ ಇವೆ. ಮತ್ತು ಆತ್ಮ ಸಂಯಮ, ಆತ್ಮಾನುಶಾಸನಗಳ ಪ್ರಮಾಣವು ಬಹಳ ಕಡಿಮೆಯಾಗಿದೆ. ಆದರಿಂದ ನಮ್ಮ ಇಚ್ಛೆಯನ್ನು ಕೈಗೂಡಿಸಿಕೊಳ್ಳಲು ಒಮ್ಮೆ ನಾವು ಹಿಂಸೆಯನ್ನು ಆಶ್ರಯಿಸಿದರೆ ಯಾವಾಗ ಮತ್ತು ಎಲ್ಲಿಗೆ ಅದನ್ನು ನಿಲ್ಲಿಸಬೇಕೆಂಬುದನ್ನೆಂದೂ ನಾವು ಅರಿಯೆವು.

ವಸ್ತುತಃ ಪರಸ್ಪರ ನಮ್ಮ ಈರ್ಷಾಸೂಯೆಗಳು ಅತ್ಯಂತ ನೀಚಸ್ವರೂಪವನ್ನು ತಾಳಿ ಬಿಡುವದರಿಂದ ನಮ್ಮ ನಿಜ ಶತ್ರುಗಳಾರೆಂಬುದನ್ನು ಕೂಡ ನಾವು ಮರೆಯುತ್ತೇವೆ. ಕಮ್ಯುನಿಷ್ಟರಷ್ಟೇ ಅಲ್ಲ. ಕೆಲವು ಕಾಂಗ್ರೆಸಿಗರು ಕೂಡ ಕೆಲ ಸಮಯ ತಮ್ಮ ರಾಜಕೀಯ ಸ್ಪರ್ಧಾಳುಗಳೇ ತಮ್ಮ ವೈರಿಗಳಾಗಿದ್ದಂತೆ ಮಾತಾಡುವದಲ್ಲದೆ ಹಾಗೆಯೆ ಅವರ ಕೂಡ ಆಚರಿಸುವರು.

ಪೃಥ್ವೀರಾಜ-ಜಯಚಂದರ ಉದಾಹರಣೆಯು ಹಳಸದಷ್ಟು ನಮ್ಮ ರಾಜಕೀಯ ನೀತಿಮತ್ತೆಯು ಕೀಳ್ತರದ್ದಾಗಿದೆ. ವಿದೇಶೀಯರ ಕೂಡ ಸಹಕರಿಸುವದು ನಮ್ಮ ದೇಶ ಬಾಂಧವರ ಕೂಡ ಸಹಕರಿಸುವದಕ್ಕಿಂತ ಸುಲಭವೆಂದು ನಮಗೆ ಅನಿಸುತ್ತದೆ. ಸದ್ಯದ ನಮ್ಮ ಪರಿಸ್ಥಿತಿಯಲ್ಲಿ ಹಿಂಸೆಗೆ ನಾವೆ ಇಂಬುಗೊಟ್ಟರೆ ಆತ್ಮನಾಶಕ್ಕೆ ಆಮಂತ್ರಣವನ್ನಿತ್ತಂತೆಯೇ ಸರಿ.

ಆತ್ಮಾನುಶಾಸನ

ಪ್ರಜಾ ಪ್ರಭುತ್ವದ ಗೌರವ ಹಾನಿಯನ್ನು ಮಾಡಿ ಸರ್ವಾಧಿಕಾರಿತ್ವಕ್ಕೆ ರಾಜ ಮಾರ್ಗವನ್ನು ಮಾಡಿಕೊಡುವಲ್ಲಿ ನಾವು ಯಶಸ್ವಿಯಾಗುತ್ತೇವೆ. ಅಧ್ಯಾತ್ಮಿಕ ಜೀವನದಲ್ಲಿದ್ದಂತೆ ರಾಜಕೀಯ ಜೀವನದಲ್ಲಿ ಆತ್ಮಾನುಶಾಸನವೇ ಉಳಿದೆಲ್ಲ ಸದ್ಗುಣಗಳ ತಳಹದಿ.

ನಿಮ್ಮೆಲ್ಲರಿಗೆ ಎಚ್ಚರಿಕೆ ಕೊಟ್ಟ ದುರ್ಗುಣಗಳಿಂದ ನಾನು ಅಲಿಪ್ತನಾಗಿರುವೆನೆಂದು ತಿಳಿಯಬೇಡಿರಿ.

ನಿಮ್ಮೊಳಗಿನವನೇ ನಾನೊಬ್ಬ; ನಿಮಗಿಂತ ಹೆಚ್ಚಿನವನಲ್ಲ. ಆದರೆ ನಿಮ್ಮೆಲ್ಲರಿಗಿಂತ ಕೀಳನಾಗಿಲ್ಲೆಂದು ಮಾತ್ರ ಆಸೆ. ನಾವೆಲ್ಲರೂ ಸಮಾನವಾಗಿಯೇ ಮುಗ್ಗರಿಸಬಹುದು ಮತ್ತು ಮ. ಗಾಂಧಿಯವರು ಹಾಕಿಕೊಟ್ಟ ಆದರ್ಶಗಳಿಗೆ ಅಂಟಿಕೊಳ್ಳಲು ನಿರ್ಧರಿಸಿದರೆ ಸಮಾನವಾಗಿಯೇ ನಾವೆಲ್ಲರೂ ಉದ್ಧಾರ ಹೊಂದಬಹುದು. ಅನೇಕ ವರ್ಷಗಳವರೆಗೆ ಪ್ರಾಧ್ಯಾಪಕನಾಗಿದ್ದರಿಂದ ಸಮಯ ದೊರೆತಾಗೆಲ್ಲ ಉಪನ್ಯಾಸ ಮಾಡುವ ಚಟವನ್ನು ನಾನಿನ್ನೂ ಬಿಟ್ಟಿಲ್ಲ. ಅಲ್ಲದೆ, ನಿಮ್ಮ ಅಧ್ಯಕ್ಷನೆಂದು ನನ್ನನ್ನಾರಿಸಿದ ಬಳಿಕ ನನಗೆ ಬೇರೆ ಉಪಾಯವೇ ಇಲ್ಲ.

ಕರ್ನಾಟಕ

ಧಾರವಾಡ

ಗದಗ ಬೆಟಗೇರಿ ವರ್ತಕ ಗುಮಾಸ್ತರ ಸಂಘದ ಸಭೆ ಸೇರಿ ವಾರದಲ್ಲಿ ಒಂದು ದಿನ ಗುಮಾಸ್ತರಿಗೆ ಬಿಡುವು ಕೊಡಬೇಕೆಂದು ವ್ಯಾಪಾರಸ್ಥರನ್ನು ಕೇಳಿಕೊಳ್ಳುವ ಗೊತ್ತುವಳಿಯನ್ನು ಮಾಡಿ ಯಾವ ದಿವಸ ಬಿಡುವು ಕೊಡಲಾಗುವದೆಂಬದನ್ನು ತಿಳಿಸಬೇಕೆಂದು ಮುಖ್ಯ ವ್ಯಾಪಾರಸ್ಥರಿಗೆ ಮತ್ತು ಅಸೋಸಿಯೇಶನ್ನಿಗೆ ಕೇಳಿಕೊಂಡಿದ್ದಾರೆ.

ಗದುಗಿನ ಎಸ್. ಸಿ. ಮಿಲ್ಲಿನ ಕಾರಕೂನರು ೧೫ ತಿಂಗಳುಗಳಿಂದ ಸಂಪು ಹೂಡಿದ್ದರಷ್ಟೆ. ಮುಂಬಯಿ ಸರಕಾರದವರು ಈಗ ಈ ಪ್ರಶ್ನೆಯನ್ನು ಪಂಚಾಯತ ಮಂಡಳಕ್ಕೆ ಒಪ್ಪಿಸಿದ್ದಾರೆ. ಕಾಮಗಾರರ ಸಂಪು ಮಾತ್ರ ಹಾಗೆಯೇ ನಡೆದಿದೆ.

ಗದಗ ಮುನಸಿಪಾಲಿಟಿಯವರು ಶ್ರೀ ಕಲ್ಮಠ ಎಂಬವರನ್ನು ಹೊಸದಾಗಿ ಮುನಸಿಪಲ್ ಹೈಸ್ಕೂಲ ಹೆಡ್ ಮಾಸ್ತರರನ್ನಾಗಿ ನೇಮಿಸಿಕೊಂಡರು. ಇವರಿಗಿಂತ ಹಿಂದಿನ ೬—೭ ಜನ ಶಿಕ್ಷಕರಿದ್ದರೂ ಅವರ ಹಕ್ಕನ್ನು ಮುಳುಗಿಸಿ ಮುನಿಸಿಪಾಲಿಟಿಯವರು ಈ ಜ್ಯೂನಿಯರ ಶಿಕ್ಷಕರನ್ನು ಕೇವಲ ಪಾಶವೀ ಬಹುಮತದ ಬೆಂಬಲದಿಂದ ನೇಮಿಸಿಕೊಂಡಿರುವರು.

ಜಿಲ್ಹೆಯಲ್ಲಿ ಆಹಾರ ಪರಿಸ್ಥಿತಿ ಬಹಳ ನಿಕೃಷ್ಟವಾದ್ದರಿಂದ ೨೫ಕ್ಕಿಂತ ಹೆಚ್ಚಿನಜನರಿಗೆ ಸಂತೋಷಕೂಟ ಉಪಹಾರಾದಿಗಳನ್ನು ಕೊಡಬಾರದೆಂಬ ಸರಕಾರದ ನಿರ್ಬಂಧವನ್ನು ಹೆಚ್ಚು ಜೋರಿನಿಂದ ಜಾರಿಯಲ್ಲಿ ತರಲಾಗುವದು. ಇದರಲ್ಲಿ ಎಲ್ಲರೂ ಸಹಕರಿಸಬೇಕೆಂದು ಜಿಲ್ಹಾ ಮ್ಯಾಜಿಸ್ಟ್ರೇಟರು ಬಿನ್ನವಿಸಿದ್ದಾರೆ.

ಜಿಲ್ಹೆಯಲ್ಲಿ ಸರಕಾರಿ ಖರೀದಿ ಕೆಲಸ ಸಾವಕಾಶವಾಗಿ ಸಾಗಿರುವ ಕಾರಣ ಮತ್ತು ಸರಕಾರಿ ಆಹಾರ ಧಾನ್ಯದ ಸಂಗ್ರಹ ತೀರ ಕಡಮೆ ಇರುವ ಕಾರಣ ರೈತರು ತಮ್ಮ ಉಪಜೀವನಕ್ಕೆ ಸಾಕಷ್ಟು ಕಾಳನ್ನು ಇಟ್ಟುಕೊಂಡು ಹೆಚ್ಚಿನ ಕಾಳನ್ನು ತೀವ್ರವೇ ಸರಕಾರಕ್ಕೆ ಮಾರಬೇಕು. ಈ ಕೆಲಸದ ಸಲುವಾಗಿ ತಾವು ಸರಕಾರಿ ಅನುಲ್ದಾರ ಕೂಡನೆ ಹಳ್ಳಿಗಳಲ್ಲಿ ಖರೀದಿ ಕೆಲಸಕ್ಕೆ ಬರುವೆವೆಂದು ಮುಂತಾಗಿ ಧಾರವಾಡ ಜಿಲ್ಹಾ ಧಾರಣೆ ಮತ್ತು ಪೂರೈಕೆ ಸಲಹೆ ಸಮಿತಿಯ ಸದಸ್ಯರು ಪ್ರಕಟನೆ ಹೊರಡಿಸಿದ್ದಾರೆ.

ಧಾರವಾಡ ರೇಲ್ವೆ ನಿಲ್ದಾಣದಲ್ಲಿ ಲಗೇಜ ಮಾಡಿದ ೨ ಗಂಟು ನಿಯಂತ್ರಿತ ಬಟ್ಟೆಯನ್ನು ಮಾರವಾಡಕ್ಕೆ ಹೋಗುತಿದೆಂದು ಪೂರೈಕೆ ಪೋಲೀಸ ಅಧಿಕಾರಿಗಳು ಹಿಡಿದು ಜಪ್ತ ಮಾಡಿರುವರು. ಬೇರೆ ೫-೬ ಊರು ಜನ ಮಾರವಾಡಿಗಳಲ್ಲಿ ಬಟ್ಟೆ ದೊರೆತದ್ದರಿಂದ ಅದನ್ನೂ ಜಪ್ತ ಮಾಡಿ ಅವರನ್ನು ವಿಚಾರಣೆಗೆ ಗುರಿ ಪಡಿಸಿರುವರೆಂದು ತಿಳಿಯುತ್ತದೆ.

ಕಳೆದ ಫೆಬ್ರುಅರಿ ೨೪ ರಿಂದ ಲೋಕಲು ವ್ಯಾಪಾರಿಗಳಿಂದ ಬಟ್ಟೆ ಪೂರೈಕೆಯನ್ನು ಪ್ರತಿಬಂಧಿಸಲಾಗಿತ್ತಷ್ಟೆ. ಈ ಬಗ್ಗೆ ಕಲೆಕ್ಟರೊಡನೆ ಕೂಲಂಕಷ ವಿಚಾರ ಮಾಡಿ ೧೯೪೬ ನೇ ನವಂಬರಕ್ಕಿಂತ ಮುಂಚಿನ ಕೋಟಾದ ಯಾವತ್ತೂ ಬಟ್ಟೆಯ ಮೇಲಿನ ನಿರ್ಬಂಧ ತೆಗೆದು ಗ್ರಾಹಕರಲ್ಲಿ ಹಂಚುವ ಏರ್ಪಾಟು ಮಾಡಲಾಗಿದೆ. ಇದರಿಂದ ಬಟ್ಟೆಗಾಗಿ ಆತುರರಿದ್ದವರು ಲಾಭಪಡೆಯಬಹುದು.

ಕರ್ನಾಟಕ ವಣಿಕ ಸಂಘದ ಸಭೆ ೩೦ ನೇ ತಾರೀಖು ಸೇರಿತ್ತು. ಗೋಕಾಕ ಕಾಲುವೆಯ ಯೋಜನೆಯನ್ನು ಇದೆ ಸಲ ಕೈಕೊಳ್ಳಲು ಒತ್ತಾಯಪಡಿಸುವ, ಕರ್ನಾಟಕ ಏಕೀಕರಣದ ಬಗ್ಗೆ ಒತ್ತಾಯಪಡಿಸುವ ಗೊತ್ತುವಳಿ ಸ್ವೀಕೃತವಾದವು. ಜಿನೀವಾ ಪರಿಷತ್ತಿಗೆ ಶ್ರೀ ಕರಮರಕರರನ್ನು ಆರಿಸಿದ್ದಕ್ಕೆ ಅಭಿನಂದಿಸಲಾಯಿತು. ಭಟಕಳ ಬಂದರವನ್ನೆ ಅಭಿವರ್ಧಿಸಬೇಕು. ಅದು ಸಾಧ್ಯವಾಗದಿದ್ದರೆ ಕಾರವಾರ ಬಂದರವನ್ನು ಕೈಕೊಳ್ಳಬೇಕು ಎಂದು ಕೇಳಿಕೊಳ್ಳಲಾಯಿತು.

ಇನಾಮಹೊಂಗಲದ ವೈದ್ಯರಾದ ಶ್ರೀ ವಾಮನ ಗಣೇಶ ಪಂಡಿತರನ್ನು ೧೩ನೇ ತಾರೀಕು ಕೆಲ ಪುಂಡರು ಕೊಡಲಿಯಿಂದ ಗಾಯಗೊಳಿಸಿ ಕೊಲ್ಲುವ ಹೆದರಿಕೆ ಹಾಕಿದರೆಂದೂ ಈಗ ಅವರು ಧಾರವಾಡದಲ್ಲಿ ಉಪಚಾರ ಹೊಂದುತಿರುವರೆಂದೂ ತಿಳಿಯುತ್ತದೆ. ಪಂಡಿತರು ಧಾರವಾಡಕ್ಕೆ ಬಂದ ಬಳಿಕ ಪುಂಡರು ಅವರ ಮನೆ ಹೊಕ್ಕು ಆಸ್ಪತ್ರೆಯ ಬಾಟ್ಲಿ ಕಪಾಟಗಳನ್ನೆಲ್ಲ ವಿಧ್ವಸ್ತಗೊಳಿಸಿರುವರು.

ಕೊಲ್ಹಾಪುರ ಆಡಳಿತ ಮಂಡಳದವರು ಎಪ್ರಿಲ ೧ ರಿಂದ ಹುಜೂರ ಟ್ರೇಜರ ಮುಚ್ಚಿ ಎಲ್ಲ ವ್ಯವಹಾರವನ್ನು ಕೊಲ್ಹಾಪುರ ಬ್ಯಾಂಕಿನ ಮುಖಾಂತರ ಸಾಗಿಸುವದಾಗಿ ಪ್ರಕಟಿಸಿದ್ದಾರೆ.

ಬೆಳಗಾವಿ

ಅಥಣಿಯ ಭಂಗಿ ಹಾಗು ಕಸಗೂಡಿಸುವವರು ನಗರ ಸಭೆಗೆ ನೋಟೀಸು ಕೊಟ್ಟು ಸಂಪು ಹೂಡಿದ್ದರು. ಅಧ್ಯಕ್ಷರು ಅವರ ಬೇಡಿಕೆಗಳನ್ನು ಮಾನ್ಯ ಮಾಡುವದಾಗಿ ಆಶ್ವಾಸನ ಕೊಟ್ಟದ್ದರಿಂದ ಸಂಪಗಾರರು ಕೆಲಸಕ್ಕೆ ಹೋಗಿರುವರು.

ಬೆಳಗಾವಿ ಉತ್ತರ ಭಾಗದಿಂದ ಮುಂಬಯಿ ಶಾಸನಸಭೆಗೆ ಆರಿಸಿ ಬಂದಿದ್ದ ಶ್ರೀ ಅ. ಬಾ. ಲಠ್ಠೆಯವರು ರಾಜೀನಾಮೆ ಕೊಟ್ಟದ್ದರಿಂದ ಕಾಂಗ್ರೆಸ್ಸಿನವರು ಶ್ರೀ ವೆಂಕರಡ್ಡಿ ಹೂಲಿಯವರನ್ನು ಆ ಸ್ಥಳದ ಉಪಚುನಾವಣೆಗೆ ಹುರಿಯಾಳನ್ನಾಗಿ ಆರಿಸಿದ್ದಾರೆ. ಎಪ್ರಿಲ ೨೫ ಕ್ಕೆ ಚುನಾವಣೆ ನಡೆಯುವದು.

ಪುರೋಗಾಮಿ ಪಕ್ಷದ ಅಧ್ಯಕ್ಷರಾದ ಸರದಾರ ಶಾರ್ದೂಲಸಿಂಗ ಕವೀಶ್ವರ ಕರ್ನಲ್ ಇಸಾನ ಕುದಿರ, ಪಂಡಿತ ಶೀಲಭದ್ರ ಯಾಜಿ ಮತ್ತು ಪಕ್ಷದ ಜನರಲ್ ಸೆಕ್ರೆಟರಿಗಳು ಎಪ್ರಿಲ ೧೪ ರಿಂದ ೨೩ ರ ವರೆಗೆ ಕರ್ನಾಟಕದಲ್ಲಿ ಸಂಚರಿಸುವವರಿದ್ದಾರೆ. ಎಪ್ರಿಲ ೧೪ ಕ್ಕೆ ಬಳ್ಳಾರಿ, ೧೫, ೧೬, ೧೭ ಕ್ಕೆ ಧಾರವಾಡ, ೧೮, ೧೯, ೨೦ ಬೆಳಗಾವಿ, ೨೧, ೨೨ ಕ್ಕೆ ವಿಜಾಪುರ ಜಿಲ್ಹೆಯಲ್ಲಿ ಸಂಚರಿಸಿ ೨೩ ಕ್ಕೆ ಸೊಲ್ಹಾಪುರಕ್ಕೆ ಪ್ರಯಾಣ ಬೆಳೆಸುವರು.

ಚಿಕ್ಕೋಡಿಯ ಸೀದಾ ಕಚೇರಿಯಲ್ಲಿ ಇಲ್ಲಿಯವರೆಗೆ ಎಲ್ಲ ಕಾಗದಪತ್ರಗಳು ಕನ್ನಡದಲ್ಲಿಯೆ ಇದ್ದವು. ಆದರೆ ಶ್ರೀ ಒಡಕಣ್ಣವರು ಸೀದಾಧಿಕಾರಿಗಳಾಗಿ ಬಂದಂದಿನಿಂದ ಮರಾಠಿ ಫಾರ್ಮಗಳನ್ನು ಕೊಡಲಾಗುತ್ತಿದೆ. ಕನ್ನಡ ಫಾರ್ಮಗಳನ್ನು ಬೇಡಿದರೆ ಸ್ಪಷ್ಟವಾಗಿ ಇಲ್ಲ ಎಂದು ಹೇಳುತ್ತಾರೆ. ಇದರಿಂದ ಕನ್ನಡಿಗರಿಗೆ ಬಹಳ ತೊಂದರೆಯಾಗಹತ್ತಿದೆ.

ಮಾನ್ಯ ಗೃಹ ಮಂತ್ರಿಗಳು ಹುಕ್ಕೇರಿ ತಾಲೂಕಿನಲ್ಲಿ ಸಂಚಾರ ಕೈಕೊಂಡಾಗ ಅವರನ್ನು ಸ್ವಾಗತಿಸಬೇಕೆಂದು ಜಿಲ್ಹಾ ಕಾಂಗ್ರೆಸ ಕಮೀಟಿಯವರು ವಿಧಿಸಿದರೂ ತಾಲೂಕ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀ ಸಾವಲಗಟ್ಟಿಯವರು ಅದರ ವಿರುದ್ಧ ಗೃಹ ಮಂತ್ರಿಗಳನ್ನು ಸ್ವಾಗತಿಸಬಾರದೆಂದು ಪ್ರಚಾರ ಮಾಡಿದ್ದನ್ನು ನಿಷೇಧಿಸುವ ಗೊತ್ತುವಳಿ ಕಾಂಗ್ರೆಸ ಕಮೀಟಿ ಸಭೆಯಲ್ಲಿ ಪಾಸಾಗಿ ಅವಿಶ್ವಾಸ ವ್ಯಕ್ತ ಮಾಡಲಾಯಿತು.

ವಿಜಾಪುರ

ಸಿಂದಗೇರಿಯಲ್ಲಿ ಗ್ರಾಮಮಂಡಳಿ ಸ್ಥಾಪನೆಯಾಗಿ ಸುಮಾರು ೪-೫ ತಿಂಗಳುಗಳಾದವು. ಸಕ್ಕರೆ ಸೀಮೆ ಎಣ್ಣೆಯ ಹಂಚಿಕೆ ಈ ಮಂಡಳದ ಮುಖಾಂತರ ನಡೆದಿದೆ. ಬೆಳೆಗಳು ಯಾವುವೂ ಚೆನ್ನಾಗಿ ಬರಲಿಲ್ಲ. ಕುಡಿಯುವ ನೀರಿನ ವಿಷಯ ಇದಕ್ಕೂ ಭೀಕರವಾಗಿದೆ. ಲೋಕಲ್ ಬೋರ್ಡಿಗೆ ಅರ್ಜಿ ಮಾಡಿಕೊಂಡರೂ ಏನೂ ದಾಡು ಹತ್ತಿಲ್ಲ. ಊರವರು ವರ್ಗಣಿ ಕೊಟ್ಟು ಕಳಿಸಿದರೂ ಇನ್ನೂ ಪ್ರಾಥಮಿಕ ಸಾಲೆ ಸ್ಥಾಪಿತವಾಗಿಲ್ಲ ಎಂದು ಮುಂತಾಗಿ ಓರ್ವರು ತಿಳಿಸುತ್ತಾರೆ.

ಸಿಂದಗಿ ತಾಲೂಕಿನ ಕಾಂಗ್ರೆಸ್ಸೇತರ ಉಮೇದ್ವಾರರು ಹಿಂತೆಗೆದುಕೊಂಡದ್ದರಿಂದ ಉತ್ತರ ಭಾಗದಿಂದ ಗುರಪ್ಪ ಹೊಲೇರ, ಯಶವಂತರಾಯಾ ಶಿದಗೊಂಡಪ್ಪ ಮತ್ತು ದಕ್ಷಿಣ ಬಾಗದಿಂದ ಬಲವಂತಪ್ಪ ಹಾಳಭಾವಿ, ನಿಜಗುಣಿ ತಾರಾಪುರೆ ಇವರು ಅವಿರೋಧ ಆರಿಸಿ ಬಂದರು.

ಇಂಡಿ ತಾಲೂಕಿನಿಂದ ಶ್ರೀ ದಾಜೀಬಾ ಪಾಟೀಲ ಮತ್ತು ವಿ ಎಸ್ ದೇಶಪಾಂಡೆ ಇವರು ಅವಿರೋಧ ಆರಿಸಿಬಂದಿರುವರು.

ಜಿಲ್ಲೆಯ ಉತ್ತರ ಭಾಗದ ಮುಸಲ್ಮಾನ ಸ್ಥಳಗಳಿಗೆ ಅಮೀನಬೇಗ ಇನಾಮದಾರ ಮತ್ತು ಬಾನಾಸಾಬ ಕಾಝಿಯವರು ಅವಿರೋಧ ಆರಿಸಿ ಬಂದಂತಾಗಿದೆ.

ಬಳ್ಳಾರಿ

ಮೇಜರ ಡಾಕ್ಟರ ಮರಿಸ್ವಾಮಪ್ಪನವರ ಇವರ ಅಧ್ಯಕ್ಷತೆಯಲ್ಲಿ ಕೈಟ್ಟಗಾರ ಶಾಂತಪ್ಪಾ ಹೈಸ್ಕೂಲಿನ ವಾರ್ಷಿಕೋತ್ಸವ, ಕೆ. ಎನ್. ಅನಂತರಾಮನ್ ಇವರ ಅಧ್ಯಕ್ಷತೆಯಲ್ಲಿ ಸೂ..ಮ್ಮನವರ ಸಾಲೆಯ ವಾರ್ಷಿಕೋತ್ಸವ ಜರುಗಿದವು. ಪಂದ್ಯಾಟದಲ್ಲಿ ಗೆದ್ದವರಿಗೆ ಬಹುಮಾನಗಳೂ ಕೊಡಲ್ಪಟ್ಟವು.

ಜಿಲ್ಹಾ ಆಹಾರ ಸಮಿತಿಯ ಮಾಸಿಕ ಸಭೆ ೩೧ ಕ್ಕೆ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಹಳ್ಳಿಗಳಿಗೆ ಕೊಡಬೇಕಾದ ಅಂಶವನ್ನು ಕೊಡಲು ಸೂಚಿತವಾಯಿತು. ಹೆಚ್ಚಿನ ಸಕ್ಕರೆಯನ್ನು ಜಿಲ್ಹೆಗಾಗಿ ಕಾಡಿಹ-ವದಕ್ಕೆ ಸರಕಾರ ಒಪ್ಪದಿದ್ದುದನ್ನು ಜಿಲ್ಹಾಧಿಕಾರಿಗಳು ತಿಳಿಸಿದರು. ಹರಿಜನರಿಗೂ ಲಮಾಣಿಗಳಿಗೂ ಬಟ್ಟೆ ಲಾಯಸೆನ್ಸ ಮೊದಲು ಕೊಡಬೇಕು. ೭೪೫ ಬಟ್ಟೆ ಲೈಸೆನ್ಸದಾರರ ಸಂಖ್ಯೆಯನ್ನು ೩೦೦ ಕ್ಕಿಳಿಸಬೇಕು. ಮಗ್ಗಗಳಿದ್ದವರಿಗೆ ಮಾತ್ರವೆ ಗಿರಣಿ ನೂಲು ಕೊಡಬೇಕೆಂದು ಮುಂತಾದ ಸೂಚನೆಗಳಿಗೆ ಒಪ್ಪಿಗೆ ದೊರೆಯಿತು.

ಉತ್ತರ ಕನ್ನಡ

ಉತ್ತರ ಕನ್ನಡ ಜಿಲ್ಹೆಯ ಔದ್ಯೋಗಿಕ ಸಂಘದ ಮೊದಲನೆ ಸಭೆ ಹೊನ್ನಾವರದಲ್ಲಿ ೨೯ ಕ್ಕೆ ಕೂಡಿ ಔದ್ಯೋಗಿಕ ಸಹಕಾರಿ ಸಂಘಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ನಿರ್ಣಯಿಸಲಾಯಿತು. ೨೫ ಸಾವಿರ ರೂಪಾಯಿ ಸಹಾಯ ಸಲ್ಲಿಸಬೇಕೆಂದು ಸರಕಾರಕ್ಕೆ ಬಿನ್ನವಿಸಲಾಯಿತು. ಹರಿಜನ ಸಹಕಾರ ಸಂಘಗಳಿಗೆ ಒಂದು ಸಾವಿರ ರೂಪಾಯಿ ಧನ ಸಹಾಯ ಮತ್ತು ೨ ಸಾವಿರ ರೂಪಾಯಿ ಸಾಲ ಕೊಡಬೇಕೆಂದೂ ಚರ್ಮ ಹದ ಮಾಡುವ ಮತ್ತು ಮೆಟ್ಟುಗಳನ್ನು ಮಾಡುವ ಶಿಕ್ಷಣ ಪಡೆಯಲು ಪ್ರತಿ ತಾಲೂಕಿನಿಂದ ಒಬ್ಬೊಬ್ಬ ಹರಿಜನ ಹುಡುಗನನ್ನು ಕಳಿಸಬೇಕೆಂದೂ ಬಿನ್ನವಿಸುವ ಗೊತ್ತುವಳಿಯಾಯಿತು.

ಪಾಂಡುರಂಗ ನೀಳಾ ಗಾಂವಕರ ಎಂಬವರು ಗೋವೆಯಿಂದ ಮಾಜಳಿಯಲ್ಲಿ ಬಂದು ಗೋವಾ ಸತ್ಯಾಗ್ರಹ ಸಮಿತಿಯ ಪರವಾಗಿ ಕೆಲಕಾಲ ಪ್ರಚಾರಕಾರ್ಯ ನಡೆಸುತ್ತಿದ್ದರು. ಆದರೆ ಗೋವೆ ಸರಕಾರದ ಅಪೇಕ್ಷೆಯಂತೆ ಕಾರವಾರ ಪೋಲೀಸರು ಅವರನ್ನು ಸೆರೆಹಿಡಿದಿರುವರು. ಮಧ್ಯವರ್ತಿ ಸರಕಾರದ ಅಪ್ಪಣೆ ಇಲ್ಲದೆ ತಮ್ಮನ್ನು ಹಿಡಿಯಲು ಬರುವದಿಲ್ಲೆಂದು ಗಾಂವಕರರು ವಾದಿಸುತ್ತಾರೆ.

ಯಲ್ಲಾಪುರ ತಾಲೂಕ ಕುಂದರಗಿ ಗ್ರಾಮದಲ್ಲಿ ಗಣಪತಿ ಕೃಷ್ಣ ಗಾಂವಕಾರ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗ್ರ್ಯಾಂಟ ಶಾಲೆಯೊಂದು ಸ್ಥಾಪಿತವಾಯಿತು. ಪಂಚ ಕಮೀಟಿಯೂ ಇದಕ್ಕಾಗಿ ನೇಮಕವಾಯಿತು. ಅದೇರೀತಿ ಕಾನಗೋಡ ಬಾಳೇಗದ್ದೆ ಗ್ರಾಮದಲ್ಲಿಯೂ ಒಂದು ಶಾಲೆ ಸ್ಥಾಪಿತವಾಯಿತು.

ಮುಧೋಳ ಸಂಸ್ಥಾನಕ್ಕೆ ಹೊಣೆಗಾರ ಮಂತ್ರಿಗಳನ್ನು ಕೊಡುವದಾಗಿ ಸಾರಿ ಸಂಸ್ಥಾನಿಕರು ಆಯ್ಕೆಯನ್ನು ನಡೆಸಿದ್ದರಷ್ಟೇ. ಆ ಆಯ್ಕೆಗಾಗಿ ಪ್ರಜಾ ಸಂಘದವರು ಶ್ರೀ ಧ್ರುವರಾವ ಟಂಕಸಾಲಿ ಮತ್ತು ರಾಮಣ್ಣಾ ಸೊನ್ನದ ಇವರನ್ನು ಹುರಿಯಾಳನ್ನಾಗಿ ನಿಲ್ಲಿಸಿದ್ದರು. ಈ ಆಯ್ಕೆಗೆ ನಿಂತ ಇಬ್ಬರು ಬೇರೆ ಹುರಿಯಾಳುಗಳು ಹಿಂತೆಗೆದುಕೊಂಡದ್ದರಿಂದ ಮೇಲಿನವರಿಬ್ಬರೂ ಅವಿರೋಧ ಮಂತ್ರಿಗಳಾಗಿ ಆರಿಸಿ ಬಂದರು.

ಕನ್ನಡ ಸಂಸ್ಥಾನ

[illegible] ಶ್ರೀ [illegible] [illegible]

[illegible] ಅಕ್ಷರ ಪ್ರಚಾರ ಸಮಿತಿಗೆ ೨೦೦ ರೂ. [illegible] ಹೈಸ್ಕೂಲಿಗೆ ಒಂದುಸಾವಿರ ರೂಪಾಯಿ [illegible] ಕೊಡುವ ನಿರ್ಣಯಗಳು ಸ್ವೀಕೃತವಾದವು.

ಮುಂಬಯಿ ಹೈಕೋರ್ಟಿನಿಂದ [illegible] ನ್ಯಾಯಮೂರ್ತಿ ಲೋಕೂರರು [illegible] ನಗಳ ಹಾಯಕೋರ್ಟಿನ ನ್ಯಾಯಾಧೀಶರೆಂದು ೨ ನೇ ತಾರೀಕಿಗೆ ಅಧಿಕಾರ ವಹಿಸಿಕೊಂಡರು.

ಬೆಳಗಾವಿ ಜಿಲ್ಹಾ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷ ಶ್ರೀ ಕೇಮಸಾಹೇಬರು ಮುಧೋಳ ಸಂಸ್ಥಾನದ ಮಹಾಲಿಂಗಪುರ ಲೋಕಾಪುರ ಮುಧೋಳ ಶಿರೋಳ ಮಾಲಾಪುರ, ಒಂಟಗೋಡಿ ಚನಾಳ, ಮಂಟೂರ ಮೊದಲಾದ ಗ್ರಾಮಗಳಿಗೆ ಶ್ರೀ ಅಣ್ಣು ಗುರೂಜಿಯವರೊಂದಿಗೆ ಭೆಟ್ಟಿಕೊಟ್ಟು ಸಂಸ್ಥಾನಗಳ ಆಡಳಿತ, ಹೊಣೆಗಾರ ರಾಜ್ಯಪದ್ಧತಿ, ಹಿಂದು ಮುಸಲ್ಮಾನ ಐಕ್ಯದ ಬಗ್ಗೆ ಭಾಷಣಮಾಡಿದರು.

ಬನಹಟ್ಟಿಗೆ ಕೃಷ್ಣಾ ನದಿಯಿಂದ ನೀರು ಪೂರೈಸುವ ಯೋಜನೆಯ ಶಂಕುಸ್ಥಾಪನೆ ಕಳೆದ ಗುರುವಾರ ಜಮಖಂಡಿಯ ಶ್ರೀಮಂತ ಸರಕಾರರ ಹಸ್ತದಿಂದ ಜರುಗಿತು. ಕೃಷ್ಣಾ ನದಿಯ ದಂಡೆಯ ಮೇಲೆಯೆ ಈ ಸಮಾರಂಭ ನಡೆಯಿತು. ಈ ಕಾರ್ಯ ಕೂಡಲೆ ಪ್ರಾರಂಭವಾಗಿ ನದಿ ಬರುವಷ್ಟರಲ್ಲಿ ಮುಗಿಯುವದೆಂದು ತಿಳಿಯುತ್ತದೆ. ಇದರಂತೆ ಬನಹಟ್ಟಿಗೆ ವಿದ್ಯುತ್ಪೂರೈಕೆಯ ವ್ಯವಸ್ಥೆಯೂ ಆಗುವದೆಂದು ತಿಳಿಯುತ್ತದೆ.

ಮಾರಾಟಕರ

ವ್ಯಾಪಾರಸ್ಥರಿಗೆ ನೋಟೀಸ

ಮುಂಬಯಿ ಮಾರಾಟಕರ ಕಾಯದೆಯನ್ವಯ ರಜಿಸ್ಟರ ಆದ ವ್ಯಾಪಾರಿಗಳು ೧ ನೇ ಜಾನೆವಾರಿಯಿಂದ ೩೧ ನೇ ಮಾರ್ಚ ೧೯೪೭ ರ ವರೆಗಿನ ಅವಧಿಯ ಬಗ್ಗೆ ತಮ್ಮ ಒಟ್ಟು ವ್ಯವಹಾರದ ರಿಟರ್ನನ್ನು ಫಾರ್ಮ IV ರಲ್ಲಿ ಮಾರಾಟಕರ ಅಧಿಕಾರಿಗಳ ಕಡೆಗೆ ೩೦ ನೇ ಎಪ್ರಿಲ ೧೯೪೭ ರೊಳಗಾಗಿ ಒಪ್ಪಿಸಬೇಕಾಗುವದು.

ರಿಟರ್ನನ್ನು ಒಪ್ಪಿಸುವ ಪೂರ್ವದಲ್ಲಿ ರಿಟರ್ನದ ಪ್ರಕಾರ ಆಗುತ್ತಿದ್ದ ಮಾರಾಟಕರವನ್ನು ಚಲನ ಫಾರ್ಮ IV ನಾಲ್ಕು ಪ್ರತಿಗಳ ಸಹಿತವಾಗಿ ರಿಝರ್ವ ಬ್ಯಾಂಕ ಆಫ್ ಇಂಡಿಯಾ, ಅಥವಾ ಸ್ಥಳಿಕ ಟ್ರೇಝರಿ ಅಥವಾ ಸಬ್ ಟ್ರೇಝರಿಯಲ್ಲಿ ತುಂಬಬೇಕು. ಮತ್ತು ರಿಟರ್ನ ಕುಂಬಿವ ಬಗ್ಗೆ ಪಡೆದ ಚಲನದ ಪಾವತಿ ಪ್ರತಿಯನ್ನು ಅದಕ್ಕೆ ಅಂಟಿಸತಕ್ಕದ್ದು.

ರಿಟರ್ನ ಮತ್ತು ಚಲನಗಳ ಫಾರ್ಮಗಳನ್ನು ಮಾರಾಟಕರ ಕಚೇರಿಗಳಿಂದ ಹಾಗು ಸ್ಥಳಿಕ ಟ್ರೇಝರಿ ಮತ್ತು ಸಬ್ ಟ್ರೇಝರಿಗಳಿಂದ ಪಡೆಯಬಹುದು.

ಮುಂಬಯಿ ಕಲಕತ್ತಾ ಮೊದಲಾದ ಕಡೆ ಮತ್ತೆ ದೊಂಬಿ

ಅನೇಕರಿಗೆ ಮರಣ, ಗಾಯ

ಪರಿಸ್ಥಿತಿ ಹಿಡಿತದಲ್ಲಿ ಬರುತ್ತಿದೆ

ಮುಂಬಯಿ ನಗರದ ಮಧ್ಯ ಭಾಗದಲ್ಲಿ ೩೦ ನೇ ತಾರೀಖು ಮಧ್ಯಾಹ್ನ ಒಮ್ಮೆಲೆ ದಂಗೆ ಪ್ರಾರಂಭವಾಗಿ ಅಲ್ಲಲ್ಲಿ ಇರಿತದ ಪ್ರಕರಣಗಳು ಸಂಭವಿಸಿದವು. ಟ್ಯಾಕ್ಸಿ ಮತ್ತು ವಿಕ್ಟೋರಿಯಾಗಳಲ್ಲಿ ಹೋಗುತ್ತಿದ್ದವರ ಮೇಲೆ ದಾಳಿ ಮಾಡಲಾಯಿತು ವಾಹನಗಳಿಗೆ ಕೊಳ್ಳಿಯಿಡಲಾಯಿತು ಕೆಲವು ದೇವಾಲಯಗಳ ಮೇಲೆಯೂ ದಾಳಿ ಮಾಡಲಾಯಿತು ಈ ದಂಗೆಯಲ್ಲಿ ಒಟ್ಟು ೮೦ ಜನ ಮರಣಹೊಂದಿ ೧೩೭ ಜನರಿಗೆ ಗಾಯಗಳಾದವೆಂದು ತಿಳಿಯುತ್ತದೆ. ಕರ್ಫ್ಯೂ ಹುಕುಂ ಜಾರಿಯಲ್ಲಿದೆ. ನಳಬಜಾರ, ಬೆಂಡಿಬಜಾರ, ಲಾಲಬಾಗಗಳಲ್ಲಿ ದಂಗೆ ಪ್ರಾರಂಭವಾದ ೩ ಗಂಟೆಗಳಲ್ಲಿ ಹಿಡಿತದಲ್ಲಿ ತರಲಾಯಿತು. ಪೋಲೀಸರು ಒಟ್ಟು ೧೯ ಸಲ ೫೯ ಸುತ್ತು ಗೋಲೀಬಾರ ಮಾಡಿದರು. ಗೃಹಮಂತ್ರಿಗಳು ದೊಂಬಿ ಭಾಗದಲ್ಲಿ ಸಂಚರಿಸಿ ಶಾಂತತೆಯನ್ನು ಪ್ರಸ್ಥಾಪಿಸಲು ಪ್ರಯತ್ನಿಸಿದರು. ಸಾರ್ವಜನಿಕ ಸುರಕ್ಷಿತತೆಯ ಕಾಯದೆಯನ್ವಯ ದೊರೆತ ಅಧಿಕಾರವನ್ನುಪಯೋಗಿಸಿ ಸರಕಾರವು ದೊಂಬಿಯನ್ನು ನಿಲ್ಲಿಸುವದೆಂದು ಗೃಹಮಂತ್ರಿಗಳು ಮಂತ್ರಿಮಂಡಳದ ಸಭೆಯ ನಂತರ ಹೇಳಿದರು.

ಕಲಕತ್ತೆಯಲ್ಲಿ

ಕಲಕತ್ತೆ ಭಾಗದಲ್ಲಿ ದಂಗೆ ಸುರುವಾಗಿದೆ. ಹೌರಾದಲ್ಲಿ ೭ ಜನರು ಮಡಿದರು. ೬೫ ಜನರಿಗೆ ಗಾಯಗಳಾಗಿವೆ. ಕಲಕತ್ತೆಯಲ್ಲಿ ೫ ಜನರು ಸತ್ತರು ೬೬ ಜನರಿಗೆ ಗಾಯಗಳಾಗಿವೆಂದು ತಿಳಿಯುತ್ತದೆ. ಆದರೆ ಇದಕ್ಕೆ ಸರಕಾರದ ಬೆಂಬಲ ದೊರೆತಿಲ್ಲ. ಪೋಲೀಸರು ಇಂದು ೧೫ ಸುತ್ತು ಗೋಲೀಬಾರು ಮಾಡಿದರು. ೨೭ ಜನರನ್ನು ಬಂಧಿಸಲಾಗಿದೆ.

ಪೂರ್ವ ಭಾಗದಲ್ಲಿರುವ ರಬ್ಬರ ಕಾರಖಾನೆ, ಎಲುಬಿನ ಕಾರಖಾನೆ ತೊಗಲು ಹದಗೊಳಿಸುವ ಕಾರಖಾನೆಗಳಿಗೆ ಬೆಂಕಿ ಹಚ್ಚಲಾಯಿತು. ಮತ್ತು ೩೪ ಕಡೆಗಳಲ್ಲಿಯೂ ಬೆಂಕಿ ಹಚ್ಚಿದ್ದು ಕಂಡು ಬಂತು. ರವಿವಾರ ಮಧ್ಯರಾತ್ರಿಯಿಂದ ಸೋಮವಾರ ಮಧ್ಯಾಹ್ನದ ವರೆಗೆ ೫೮ ಸುತ್ತು ಗೋಲೀಬಾರ ಮಾಡಲಾಯಿತು.

ಕಾನಪೂರದಲ್ಲಿ

೧ ನೇ ತಾರೀಖು ರಾತ್ರಿ ೧೦ ಗಂಟೆಯಿಂದ ಕಾನಪೂರದಲ್ಲಿ ಮತ್ತೆ ದೊಂಬಿಗಳು ಪ್ರಾರಂಭವಾಗಿವೆ. ಕಳೆದ ೩೦ ಗಂಟೆಗಳ ವರೆಗೆ ಏನೋ ಸ್ವಲ್ಪ ಶಾಂತ ಪರಿಸ್ಥಿತಿಯಿದ್ದಿತು. ಪೋಲೀಸರು ಪರಿಸ್ಥಿತಿಯನ್ನು ಶಾಂತಗೊಳಿಸಲು ಅನೇಕ ಸುತ್ತು ಗೋಲೀಬಾರ ಮಾಡಬೇಕಾಯಿತು.

ಇದೇ ರೀತಿ ರಾಂಚಿ, ಪೇಶಾವರ ಮೊದಲಾದ ಕಡೆಗಳಲ್ಲಿಯೂ ದೊಂಬಿಗಳು ಪ್ರಾರಂಭವಾಗಿವೆ.

ದೇವಾಸದ ಮಹಾರಾಜರು ಕೊಲ್ಹಾಪುರಛತ್ರಪತಿಗಳಾದರು

ವಿಜೃಂಭಣೆಯ ದತ್ತಕ ಸಮಾರಂಭ

ದೇವಾಸದ ಮಹಾರಾಜರು ೩೧ ನೇ ತಾರೀಖು ಮುಂಜಾನೆ ೧೦-೧೫ ಗಂಟೆ ಕೊಲ್ಹಾಪುರಕ್ಕೆ ಬಂದರು. ನಾಗರಿಕರ ಪರವಾಗಿ ಅಗಸೆಯಲ್ಲಿ ಅವರಿಗೆ ಸನ್ಮಾನ ಮಾಡಲಾಯಿತು. ಹೊಸ ಅರಮನೆಗೆ ಮಹಾರಾಜರು ಬಂದ ಕೂಡಲೆ ೧೫ ತೋಫುಗಳ ವಂದನೆಯಾಯಿತು. ರೆಸಿಡೆಂಟ ಲೆ. ಕ. ಹಾರ್ವಿಯವರು ಅವರನ್ನು ಭೆಟ್ಟಿಯಾಗಿ ಯಶಸ್ಸು ಕೋರಿದರು. ದತ್ತಕ ಸಮಾರಂಭ ೧೧-೨೫ ಕ್ಕೆ ಹಳೆಯ ಅರಮನೆಯಲ್ಲಿ ಜರುಗಿತು. ಶ್ರೀಮಂತ ಅಕ್ಕಾಬಾಯಿ ಮಹಾರಾಜರವರು ಪುತ್ರರನ್ನು ದತ್ತಕ ಕೊಟ್ಟರು. ಶ್ರೀಮಂತ ತಾರಾಬಾಯಿ ರಾಣೀಸಾಹೇಬರು ಸ್ವೀಕರಿಸಿದರು. ಅನಂತರ ೩ ಗಂಟೆಗೆ ದತ್ತಕಕ್ಕೆ ಮನ್ನಣೆ ಕೊಡುವದಕ್ಕಾಗಿ ದರಬಾರ ಸೇರಿತ್ತು. ಕೊಲ್ಹಾಪುರ ಮತ್ತು ದಕ್ಷಿಣ ಸಂಸ್ಥಾನಗಳ ರೆಸಿಡೆಂಟರು ಭಾಷಣ ಮಾಡಿ ಈ ದತ್ತಕಕ್ಕೆ ಸಾರ್ವಭೌಮ ಸರಕಾರದವರು ಒಪ್ಪಿಗೆ ಕೊಟ್ಟಿದ್ದು ಕೊಲ್ಹಾಪುರ ಛತ್ರಪತಿಯವರ ಗಾದಿಗೆ ಇವರೇ ಬಾಧ್ಯಸ್ಥರೆಂದು ಸಾರಿದರು. ಉಚಿತ ಶಬ್ದಗಳಲ್ಲಿ ಮಹಾರಾಜರು ಉತ್ತರ ಕೊಟ್ಟ ನಂತರ ೩-೨೦ ಕ್ಕೆ ದರಬಾರ ಮುಗಿಯಿತು.

ಸಾಯಂಕಾಲ ೪-೩೦ ಗಂಟೆಗೆ ಶ್ರೀಮಂತ ಛತ್ರಪತಿ ಶಹಾಜೀರಾವ ಮಹಾರಾಜರು ಕುಲಸ್ವಾಮಿ ತುಳಜಾಭವಾನಿಯ ದರ್ಶನ ತೆಗೆದುಕೊಂಡು ಪ್ರಸಾದ ತೆಗೆದುಕೊಂಡರು. ಅನಂತರ ಕರವೀರ ನಿವಾಸಿನಿಯ ದರ್ಶನಕ್ಕಾಗಿ ಸುವರ್ಣ ರಥದಲ್ಲಿ ಮೆರವಣಿಗೆಯಿಂದ ಹೋದರು. ಹಳೆ ಅರಮನೆಯಿಂದ ಮೆರವಣಿಗೆ ಹೊರಟು ಶಕಕರ್ತಾ ಶಿವಾಜಿ ಮಹಾರಾಜರ ಪುತ್ಥಳಿಗೆ ಬಲಗೊಂಡು ಮಹಾಲಕ್ಷ್ಮಿಯ ಸಂದರ್ಶನವಾಗಿ ಪೋಲೀಸ, ಬ್ಯಾಂಡ ಮೊದಲಾದ ಸರಂಜಾಮು ಜೊತೆಗೆ ಹೋದರು. ಸುಮಾರು ೫ ಲಕ್ಷ ಜನರು ಈ ಕಾಲಕ್ಕೆ ಸಮ್ಮಿಲಿತರಾಗಿದ್ದರು. ಇದನ್ನು ನೋಡಿ ಮರಾಠರ ಗತವೈಭವದ ಸ್ಮರಣೆಯಾಗುವಂತಿತ್ತು.

ದತ್ತಕದ ಆನಂದಕ್ಕಾಗಿ ೫೧ ಕೈದಿಗಳ ಬಿಡುಗಡೆ ಮಾಡಲಾಯಿತು. ಅವರಲ್ಲಿ ೨೦ ಜನ ಕರಿನೀರಿನ ಶಿಕ್ಷೆಯಾದವರಿರುವರು. ಕೊಲ್ಹಾಪುರದಲ್ಲಿ ಈ ದಿವಸವೆಲ್ಲ ಉತ್ಸವ ನಡೆಯಿತು.

ಹಿಂದುಸ್ಥಾನ

ಮುಂಬಯಿ

ಅಹಮದಾಬಾದಿನಲ್ಲಿ ೩೦ ನೇ ರಾತ್ರಿ ಇರಿತಗಳು ಸಂಭವಿಸಿದ ಎರಡು ಪ್ರದೇಶಗಳ ಮೇಲೆ ಜಿಲ್ಹಾ ಮ್ಯಾಜಿಸ್ಟ್ರೇಟರು ೧೦ ಸಾವಿರ ರೂ. ಗಳ ಸಾಮೂಹಿಕ ದಂಡವನ್ನು ಹೇರಿದ್ದಾರೆ. ೩೦ ಗೂಂಡರನ್ನು ಬಂಧಿಸಲಾಗಿದೆ. ಕರ್ಫ್ಯೂ ಕಟ್ಟಳೆ ಜಾರಿಯಲ್ಲಿದೆ.

ಹಿಮಾಲಯದ ಶ್ರೀ ರಮಾನಂದ ಸ್ವಾಮಿಯೆಂಬ ಯೋಗಿಯು ಒಂದು ತಗ್ಗಿನಲ್ಲಿ ೨೮ ಗಂಟೆ ಹುಗಿಯಲ್ಪಟ್ಟು ಸಮಾಧಿಸ್ಥನಾಗಿ ಉಳಿದು ಹೊರಗೆ ಬಂದನು. ಸುಮಾರು ೫೦ ಸಾವಿರ ಜನರು ಅವನ ಈ ಯೋಗ ಸಾಮರ್ಥ್ಯವನ್ನು ನೋಡಲು ನೆರೆದಿದ್ದರು.

ಅಖಿಲ ಭಾರತ ರೇಲ್ವೆ ಯೂನಿಯನ್‌ಗಳ ಪರವಾಗಿ ನಡೆದ ಮುಂಬಯಿ ಶಾಸನಸಭೆಯ ಉಪಚುನಾವಣೆಯಲ್ಲಿ ಶ್ರೀ ಶಿವವಿಶಾಲ ಮತ್ತು ಆರ್. ಎ. ಖೇಡಗೀಕರರು ಆರಿಸಿ ಬಂದರು.

ಪ್ರತಿ ವರ್ಷದಂತೆ ಈ ವರ್ಷ ಬೇಸಿಗೆಯಲ್ಲಿ ಪುಣೆಗೆ ಹೋಗಬಾರದೆಂದು ಮುಂಬಯಿ ಸರಕಾರದವರು ನಿರ್ಧರಿಸಿದ್ದಾರೆ.

ಸರದಾರ ವಲ್ಲಭಭಾಯಿ ಪಟೇಲರು ಎಪ್ರಿಲ ೩ ರಿಂದ ೫ ದಿನ ಗುಜರಾಥದಲ್ಲಿ ಸಂಚರಿಸಲಿರುವರು. ಅವರ ಹಳ್ಳಿಯಾದ ಕರಮಸಾದಕ್ಕೆ ಅವರು ಹೋದಾಗ ೭೨ ತೊಲಿಯ ಅಂದರೆ ಅವರ ವಯಸ್ಸಿನಷ್ಟು ಬಂಗಾರದ ಬಟ್ಟಲವು ಹಳ್ಳಿಗರಿಂದ ಸಮರ್ಪಿಸಲಾಗುವದು. ಅವರ ಸಂಚಾರದ ಸಿದ್ಧತೆ ಎಲ್ಲೆಡೆ ನಡೆದಿದೆ.

ಬಿಹಾರ

ಸಂಪು ಹೂಡಿದ ಪೋಲೀಸನೊಬ್ಬನು ಸೈನಿಕರ ಗುಂಡಿನಿಂದ ಮಾರ್ಚ ೨೮ ಕ್ಕೆ ಗಾಯಗೊಂಡಿದ್ದನು. ಅವನು ಕಳವಿನಿಂದ ಗಯಾ ಜಿಲ್ಹಾ ಮ್ಯಾಜಿಸ್ಟ್ರೇಟರ ಮನೆಯನ್ನು ಹೊಕ್ಕು ಅವರ ಮೇಲೆ ಗುಂಡು ಹಾರಿಸಲು ಪ್ರಯತ್ನಿಸಿದನು. ಅವನು ಗುಂಡು ಹಾರಿಸುವಷ್ಟರಲ್ಲಿಯೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಅಡಿಗೆಯವ ಮತ್ತು ಇನ್ನೊಬ್ಬ ಪೋಲೀಸನನ್ನು ಹಿಡಿದು ಜಿಲ್ಹಾ ಮ್ಯಾಜಿಸ್ಟ್ರೇಟರ ಮರಣವನ್ನುಳಿಸಿದರು.

ಬಿಹಾರ ಪ್ರಾಂತಿಕ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಪ್ರೊ. ಅಬ್ದುಲ್ ಬಾರಿಯವರನ್ನು ಇಬ್ಬರು ಗುಂಡಿನಿಂದ ಕೊಂದರು. ಮಹಾತ್ಮಾ ಗಾಂಧಿಯವರು ಈ ಸುದ್ದಿಯಿಂದ ಅತ್ಯಂತ ವಿಷಾದಪಟ್ಟು ಸ್ವತಃ ಆ ಸ್ಥಳಕ್ಕೆ ಹೋಗಿ ಅವರ ಮಗನನ್ನು ಸಂತೈಸಿದರು. ಪ್ರಾರ್ಥನಾ ನಂತರದ ಸಭೆಯಲ್ಲಿ ಗಾಂಧೀಜಿಯವರು ಪ್ರೊ. ಬಾರಿಯವರ ಗುಣಗಾನ ಮಾಡಿದರು. ಅವರ ಯೋಗ್ಯ ಸ್ಮಾರಕ ಮಾಡಬೇಕೆಂದು ಪುರೋಗಾಮಿ ಪಕ್ಷದ ಕಾರ್ಯದರ್ಶಿಗಳು ಬಿನ್ನವಿಸಿಕೊಂಡಿರುವರು.

ಬಂಗಾಲ

ಜಾತೀಯ ದೊಂಬಿಗಳನ್ನು ಹತ್ತಿಕ್ಕಿ ಎರಡೂ ಜಾತಿಗಳಲ್ಲಿ ಸ್ನೇಹ ಭಾವನೆಯನ್ನುಂಟುಮಾಡುವದಕ್ಕಾಗಿ ಎರಡೂ ಜಾತಿಯವರಲ್ಲಿ ಹೊಡೆದಾಟ ನಡೆದಾಗ ಅದರಲ್ಲಿ ಬಿದ್ದ ಜನರಲ್ಲಿ ವಿಶ್ವಾಸ ಹುಟ್ಟಿಸುವ ಹೊಸ ಸಾಹಸ ಮಾಡಬೇಕೆಂದು ಹಿಂದೀ ರಾಷ್ಟ್ರೀಯ ಅಂಬ್ಯುಲನ್ಸದಳದವರು ನಿರ್ಣಯಿಸಿರುವರು. ಎರಡೂ ಜಾತಿಗಳ ಓಣಿಗಳ ಸಮೀಪದಲ್ಲಿ ಸದಿಚ್ಛಾ ಕೇಂದ್ರ ತೆರೆಯಲಿರುವರು.

ಹೊಸದಿಲ್ಲಿ

ಇದೇ ತಿಂಗಳು ೯—೧೦ ಕ್ಕೆ ದಿಲ್ಲಿಯಲ್ಲಿ ಸೇರಲಿರುವ ರೆಸಿಡೆಂಟರ ಪರಿಷತ್ತಿನಲ್ಲಿ ರೆಸಿಡೆನ್ಸಿಗಳ ಭವಿತವ್ಯ, ಸಂಸ್ಥಾನಗಳಿಗೆ ಪ್ರಾಂತಿಕ ಹಾಗೂ ಕೇಂದ್ರ ಸರಕಾರದೊಡನೆ ನೇರವಾಗಿ ಪತ್ರವ್ಯವಹಾರಮಾಡಲು ತಿಳಿಸುವದು, ಗಡಿಗಳ ಪುನರ್ವಿಚಾರ, ಒಕ್ಕೂಟಗಳು, ರೆಸಿಡೆಂಟರ ಕಚೇರಿಯಲ್ಲಿಯ ಕಾಗದ ಪತ್ರಗಳನ್ನು ನಾಶ ಪಡಿಸುವದು, ಎಲ್ಲ ಸಂಸ್ಥಾನಗಳಿಗೆ ಸಾಮಾನ್ಯವಾದ ಕಾಯದೆಗಳ ಬಗ್ಗೆ ವಿಚಾರ ಮೊದಲಾದವುಗಳು ಚರ್ಚಿಸಲ್ಪಡುವವೆಂದು ತಿಳಿಯುತ್ತದೆ.

ಆಜಾದ ಹಿಂದ ಫೌಜಿನ ಹೆಸರನ್ನು ಹಿಂದೀ ಪ್ರಜಾರಾಜ್ಯ ಸೇನೆ ಎಂದು ಬದಲಾಯಿಸಬೇಕೆಂಬುದಕ್ಕೆ ಮೇಜರ ಜನರಲ್ ಶಹಾನವಾಜರು ಒಪ್ಪಿಗೆ ಕೊಟ್ಟಿದ್ದಾರೆ. ಭಾರತದ ಘಟನಾ ಸಮಿತಿಯು ಪ್ರಜಾರಾಜ್ಯದ ಗೊತ್ತುವಳಿಯನ್ನು ಸ್ವೀಕರಿಸಿದ ಕೂಡಲೆ ಡಾ. ಗಂಗೂಲಿಯವರು ಈ ರೀತಿ ಹೆಸರು ಬದಲಾಯಿಸಬೇಕೆಂದು ಸೂಚಿಸಿದ್ದರು.

ದಿಲ್ಲಿಯ ಬಗೀಚಿ ಹಬೀಬ ಬಕ್ಷ ಪ್ರದೇಶದಲ್ಲಿ ೩೦ ಕ್ಕೆ ಒಬ್ಬನು ಇರಿಯಲ್ಪಟ್ಟದ್ದರಿಂದ ಹಗಲಲ್ಲಿಯು ಅಂದರೆ ಮುಂಜಾನೆ ೬ ರಿಂದ ಸಂಜೆ ೬ ಗಂಟೆ ವರೆಗೆ ಕರ್ಫ್ಯೂ ಪ್ರಯೋಗಿಸಲಾಗಿದೆ. ಜಾತೀಯ ಗಲಭೆಗಳಿಗೆ ಸಂಬಂಧಿಸಿದ ಸುದ್ದಿಗಳ ಪೂರ್ವ ಪರಿಶೀಲನೆಯ ಹುಕುಮನ್ನು ಜಿಲ್ಹಾ ಮ್ಯಾಜಿಸ್ಟ್ರೇಟರು ೭ ರವರೆಗೆ ಬೆಳಿಸಿದ್ದಾರೆ.

ಇಂಡೋನೇಶಿಯದ ಧುರೀಣರಾದ ಡಾ. ಶಾಹರೀರರು ವಿಮಾನ ಮೂಲಕ ದಿಲ್ಲಿಗೆ ಬಂದ ಕೂಡಲೆ ವಿಮಾನ ನಿಲ್ದಾಣದಲ್ಲಿ ಅವರನ್ನು ಸ್ವಾಗತಿಸಲಾಯಿತು.

ಹೊಸದಿಲ್ಲಿ ಏಶಿಯಾ ಪರಿಷತ್ತಿನ ಪ್ರತಿನಿಧಿಗಳ ಗೌರವಾರ್ಥ ಅಖಿಲ ಭಾರತ ಪತ್ರಿಕಾ ಸಂಪಾದಕರ ಪರಿಷತ್ತಿನವರು ಹಾಗು ದಿಲ್ಲಿ ಪತ್ರಿಕಾ ಸಂಸ್ಥೆಯವರು ೩೦ ಕ್ಕೆ ಸತ್ಕಾರ ಸಮಾರಂಭವನ್ನೇರ್ಪಡಿಸಿದ್ದರು. ಈ ಸಮಾರಂಭಕ್ಕೆ ಪಂಡಿತ ಜವಾಹರಲಾಲ ನೆಹರು, ಸರದಾರ ಬಲದೇವ ಸಿಂಗ ಶ್ರೀ ಜಿ. ವಿ. ಮಾವಳಣಕರ ಮೊದಲಾದವರು ಬಂದಿದ್ದರು.

ತಮ್ಮ ನೇತೃತ್ವದಲ್ಲಿ ಸ್ವತಂತ್ರ ಸರಕಾರ ಸ್ಥಾಪಿಸಲು ಬ್ರಿಟನ ಒಪ್ಪಿದರೆ ಹಿಂದುಸ್ಥಾನ ಡೊಮೀನಿಯನ್ ರಾಷ್ಟ್ರವಾಗುಳಿಯುವದೆಂದು ಪಂಡಿತ ಜವಾಹರಲಾಲರು ಮುಖ್ಯ ಮಂತ್ರಿ ಆ್ಯಟ್ಲಿಯವರಿಗೆ ತಿಳಿಸಿರುವರೆಂದು ಪ್ರಸಿದ್ಧವಾದ ಸುದ್ದಿ ಸುಳ್ಳಿನ ಕಂತೆಯೆಂದು ಪಂಡಿತ ಜವಾಹರಲಾಲರು ಹೇಳಿದರು.

ಪಂಜಾಬವನ್ನು ಇಬ್ಭಾಗಿಸಬೇಕೆಂಬದಾಗಿ ಕಾಂಗ್ರೆಸ್ ಕಾರ್ಯ ಸಮಿತಿಯವರು ಮಾಡಿದ ಗೊತ್ತುವಳಿಗೆ ಕೇಂದ್ರ ಶಾಸನ ಸಭೆಯ ಸದಸ್ಯರಾದ ಸರದಾರ ಮಂಗಳಸಿಂಗರು ಬೆಂಬಲ ಕೊಟ್ಟಿದ್ದಾರೆ. ಪಂಜಾಬವನ್ನು ಈ ರೀತಿ ಇಬ್ಭಾಗಿಸುವದರಿಂದಲೆ ರಕ್ತಪಾತ ಮತ್ತು ರಾಜಕೀಯ ಪ್ರಭುತ್ವಕ್ಕಾಗಿ ಬಹುಶಃ ಏಳಬಹುದಾದ ದೀರ್ಘ ಹೋರಾಟ ನಿಲ್ಲುವದೆಂದೂ ಅವರು ಹೇಳಿದರು.

ಘಟನಾ ಸಮಿತಿಯ ಮುಂದಿನ ಸಭೆ ಎಪ್ರಿಲ್ ೨೮ ಕ್ಕೆ ಪ್ರಾರಂಭವಾಗುವದು. ಮೂಲಭೂತ ಹಕ್ಕುಗಳ ಉಪಸಮಿತಿ ಆಚಾರ್ಯ ಕೃಪಲಾನಿಯವರ ಅಧ್ಯಕ್ಷತೆಯಲ್ಲಿ ಕೆಲಸ ನಡೆಸಿದೆ.

ಹಿಂದುಸ್ಥಾನದಲ್ಲೆಲ್ಲ ಗುಡ್ಡಗಳೇ ಇದ್ದುದರಿಂದ ಅವೆಲ್ಲವುಗಳ ಒಳ್ಳೆ ವ್ಯವಸ್ಥೆಯನ್ನಿಡುವದು ಲಾಭಕರವಾಗಿದೆ. ಈ ಕಾರ್ಯ ಬಹಳ ದೊಡ್ಡದಾಗಿದ್ದರೂ ಅವುಗಳಲ್ಲಿ ಅಡಚಣೆಗಳು ಬಹಳ ಇರುವವು. ಆದರೆ ಇದನ್ನು ಮಾಡುವದಕ್ಕಾಗಿ ಕೇವಲ ಶಾಸ್ತ್ರೀಯ ಜ್ಞಾನದ ಅವಶ್ಯಕತೆ ಇದೆ. ಇಷ್ಟೇ ಅಲ್ಲ ಕಳಕಳಿ ಮತ್ತು ಉತ್ಸಾಹವೂ ಅತ್ಯವಶ್ಯವಾಗಿದೆ ಎಂದು ಮುಂತಾಗಿ ಆಹಾರ ಮಂತ್ರಿಗಳಾದ ಡಾ. ರಾಜೇಂದ್ರ ಬಾಬುಗಳು ಡೆಹರಾಡೂನ ಅರಣ್ಯ ಕಾಲೇಜಿನ ವಾರ್ಷಿಕ ಪದವೀದಾನ ಸಮಾರಂಭದ ಕಾಲಕ್ಕೆ ಭಾಷಣ ಮಾಡಿದರು.

ಏಳನೆ ಇಯತ್ತೆಯ ವರೆಗೆ ಪುಕ್ಕಟೆ ಶಿಕ್ಷಣ ಕೊಡಬೇಕು, ಉಪಾಧ್ಯಾಯರ ಸಂಬಳ ಏರಿಸಬೇಕೆಂದು ಮುಂತಾಗಿ ನಿಜಾಮು ಸಾಹೇಬರು ನಿರ್ಧರಿಸಿರುವರು.

ಮದ್ರಾಸ

ಕಳೆದ ಮೂರು ವಾರಗಳಿಂದ ಮದ್ರಾಸಿನ ಬಕಿಂಗಹ್ಯಾಮ ಮತ್ತು ಕರ್ನಾಟಿಕ ಗಿರಣಿಗಳಲ್ಲಿ ನಡೆದ ಕೂಲಿಕಾರರ ಸಂಪಿಗೆ ಸಹಾನುಭೂತಿ ತೋರಿಸುವದಕ್ಕಾಗಿ ಟ್ರಾಮ ಮತ್ತು ಬಸ್ ಕೆಲಸಗಾರರು ೩೧ ನೇ ತಾರೀಕಿನ ದಿನ ಒಂದು ದಿನದ ಸಂಪನ್ನು ಕೈಕೊಂಡಿದ್ದರು.

ಜೂನ ೧೯೪೮ ರ ನಂತರ ತಿರುವಾಂಕೂರಿನ ಧೋರಣ ಸ್ವತಂತ್ರವಿರುವದರಿಂದ ಅದು ನರೇಂದ್ರರ ಸಭೆ ಪರಿಷತ್ತುಗಳಲ್ಲಿ ಭಾಗ ತೆಗೆದುಕೊಂಡು ವಾದದಲ್ಲಿ ಬೀಳಬಯಸುವದಿಲ್ಲ ಎಂದು ತಿರುವಾಂಕೂರಿನ ದಿವಾಣ ಸರ್ ಸಿ ಪಿ ರಾಮಸ್ವಾಮಿ ಅಯ್ಯರರು ಅಭಿಪ್ರಾಯಪಟ್ಟಿದ್ದಾರೆ. ಕೆಲ ನರೇಂದ್ರರು ಇತ್ತೀಚೆ ಘಟನಾ ಸಮಿತಿ ಮೊದಲಾದ್ದರ ಸಂಬಂಧದಲ್ಲಿ ಸ್ವತಂತ್ರ ಮಾರ್ಗ ಅನುಸರಿಸಿದ್ದರಿಂದ ಹೀಗೆ ಮಾಡಬೇಕಾಯಿತಂತೆ.

ಜಯಪ್ರಕಾಶ ನಾರಾಯಣರು ತಿರುವಾಂಕೂರ ಸಂಸ್ಥಾನ ಕಾಂಗ್ರೆಸ್ಸಿಗೆ ಸಂದೇಶ ಕಳಿಸಿದ್ದಾರೆ. ದಿವಾಣರು ಸೂಚಿಸಿದ ಘಟನೆಯನ್ನು ನಿರಾಕರಿಸಿ ಹೋರಾಟ ಹೂಡಲು ತಿಳಿಸಿದ್ದಾರೆ. ಕೊಡಮಾಡಿದ ಸುಧಾರಣೆಗಳಲ್ಲಿ ಸ್ವಾತಂತ್ರ್ಯದ ಮೂಲ ತತ್ವಗಳು ನಿರಾಕರಿಸಲ್ಪಟ್ಟಿವೆ. ಅವು ಅಮೇರಿಕೆಯು ಮಾದರಿಯವೆಂದು ಹೇಳುವದು ಅಪಹಾಸಕರವಾಗಿದೆಂದೂ ಅವರು ಅಭಿಪ್ರಾಯಪಟ್ಟಿರುವರು.

ಆಸಾಮ

ಆಸಾಮದ ಮೇಲೆ ಮುಸ್ಲಿಂ ಲೀಗಿನ ದಾಳಿಯ ಕಾರ್ಯಕ್ರಮವನ್ನೊಳಗೊಂಡ ಕೆಲ ಕಾಗದಪತ್ರಗಳು ಆಸಾಮ ಪೋಲೀಸರಿಗೆ ದೊರೆತಿರುವವು. ಸರದಾರ ವಲ್ಲಭಭಾಯಿ ಹಾಗು ಸರದಾರ ಬಲದೇವಸಿಂಗರು ಆಸಾಮಕ್ಕೆ ಬೇಗ ಭೆಟ್ಟಿ ಕೊಡಲಿರುವರು. ಆಸಾಮದಲ್ಲಿಯ ದೈನಂದಿನ ಘಟನೆಗಳನ್ನು ಮಹಾತ್ಮರಿಗೆ ತಿಳಿಸಲಾಗುತ್ತಿರುವದು. ರಾಷ್ಟ್ರಾಧ್ಯಕ್ಷ ಆಚಾರ್ಯ ಕೃಪಲಾನಿಯವರಿಗೂ ಪರಿಸ್ಥಿತಿಯ ವಿವರ ತಿಳಿಸಲಾಗಿದೆ.

ಆಸಾಮದ ಎಲ್ಲ ಜಿಲ್ಹೆಗಳಲ್ಲಿ ಸವಿನಯ ಕಾಯದೇಭಂಗ ಪ್ರಾರಂಭಿಸುವ ನಿರ್ಣಯವನ್ನು ಮುಸ್ಲಿಂ ಲೀಗಿನವರು ಮಾಡಿರುವರು. ಆಸಾಮ ಮುಸಲ್ಮಾನರು ಜೇಲು ತುಂಬಲು ನಿರ್ಧರಿಸಿರುವರೆಂದೂ ತಮ್ಮ ಜಗಳ ಸರಕಾರದ ವಿರುದ್ಧವಿದ್ದು ಯಾವದೇ ಸಮಾಜದ ವಿರುದ್ಧ ಇರುವದಿಲ್ಲೆಂದೂ ತಿಳಿಸಿದ್ದಾರೆ. ಮುಸಲ್ಮಾನರ ಬೆದರಿಕೆಗೆ ಸರಕಾರ ಬೆದರುವದಿಲ್ಲೆಂದೂ ಉಗ್ರ ಉಪಾಯ ಕೈಕೊಂಡು ಅನವಶ್ಯಕ ರಕ್ತಪಾತ ತಪ್ಪಿಸುವದಾಗಿಯೂ ಮುಖ್ಯ ಮಂತ್ರಿಗಳು ಹೇಳಿದರು.

ಪಂಜಾಬ

೨೫ ಸಾವಿರ ಹಿಂದು ಮತ್ತು ಶೀಖರು ತಮ್ಮ ಮನೆ ಮಾರುಗಳನ್ನು ಬಿಟ್ಟು ಪಶ್ಚಿಮ ಪಂಜಾಬದಿಂದ ಹೊರಹೊರಡಹತ್ತಿದ್ದಾರೆ. ಪಶ್ಚಿಮ ಪಂಜಾಬವನ್ನು ಬಿಟ್ಟು ಪೂರ್ವ ಪಂಜಾಬದಲ್ಲಿಯೇ ವಾಸಿಸಹತ್ತಿರೆಂದು ಕೆಲ ಹಿಂದೂ ಶೀಖ ಧುರೀಣರು ಹೇಳಹತ್ತಿರುವರು. ಇದರಿಂದ ಕೋಟ್ಯವಧಿ ರೂಪಾಯಿಗಳ ಆಸ್ತಿಯನ್ನು ಬಿಟ್ಟುಗೊಟ್ಟು ಅವರು ಪೂರ್ವ ಪಂಜಾಬಕ್ಕೆ ಬರಬೇಕಾಗುತ್ತದೆ. ಇದು ಅತ್ಯಂತ ಘಾತುಕ ಮತ್ತು ಅನ್ಯಾಯದ ಧೋರಣ. ಆದುದರಿಂದ ಈ ಸಮಯದಲ್ಲಿ ಬಿಹಾರಕ್ಕಿಂತ ನಿಮ್ಮ ಉಪಸ್ಥಿತಿಯು ಪಂಜಾಬದಲ್ಲಿ ಹೆಚ್ಚು ಅವಶ್ಯವಾಗಿದೆ. ಆದುದರಿಂದ ಪಂಜಾಬಕ್ಕೆ ಬನ್ನಿರೆಂದು ಜಯಹಿಂದ ಎಂಬ ಲಾಹೋರಿನ ದೈನಿಕ ಪತ್ರಿಕೆಯ ಸಂಪಾದಕರು ಗಾಂಧೀಜಿಗೆ ಕೇಳಿದ್ದಾರೆ.

ಮುಲ್ತಾನ ನಗರದಲ್ಲಿ ದೊಂಬಿಗೆ ೧೩೧ ಜನರು ಬಲಿಯಾಗಿರುವರೆಂದು ತಿಳಿಯುತ್ತದೆ.

ಲಾಹೋರ ಕಾರ್ಪರೇಶನ್ನಿನ ಕಸಗೂಡಿಸುವವರು ಸಂಪಿನ ಬೆದರಿಕೆ ಹಾಕಿದ್ದರಿಂದ ಅವರಿಗೆ ತಿಂಗಳಿಗೆ ೮೦ ರೂಪಾಯಿ ಕೊಡಲು ಕಾರಪರೇಶನ್ನಿನವರು ಗೊತ್ತು ಮಾಡಿರುವರು.

ವೀರಭಾರತವೆಂಬ ಉರ್ದು ದೈನಿಕ ಪತ್ರದ ಕಚೇರಿಯನ್ನು ಪೋಲೀಸರು ೩೧ ಕ್ಕೆ ಝಡತಿ ಮಾಡಿ ಮಾರ್ಚ ೧೮ ನೇ ತಾರೀಕಿನ ಕೆಲ ಪ್ರತಿಗಳನ್ನು ಜಪ್ತ ಮಾಡಿಕೊಂಡು ಹೋದರು. ಜಾತೀಯ ಪರಿಸ್ಥಿತಿ ಸಂಬಂಧದಲ್ಲಿ ಹೇರಲಾದ ಪ್ರಕಟನೆ ನಿರ್ಬಂಧದ ಬಗ್ಗೆ ಆಕ್ಷೇಪಾರ್ಹ ಲೇಖ ಪ್ರಸಿದ್ಧಿಸಿದ್ದೇ ಝಡತಿಗೆ ಕಾರಣವೆಂದು ಹೇಳಲಾಗುತ್ತದೆ.

ಪ್ರಾಂತದಲ್ಲಿಯ ದೊಂಬಿಯನ್ನು ಹತ್ತಿಕ್ಕುವದಕ್ಕಾಗಿ ಪಂಜಾಬ ಸರಕಾರದವರು ಇನ್ನೂ [illegible] ಸಾವಿರ ಪೋಲೀಸರನ್ನು ಹೊಸದಾಗಿ ಸೇರಿಸಿಕೊಳ್ಳಲು ನಿರ್ಧರಿಸಿದ್ದಾರೆ. ರಾವಳಪಿಂಡಿ ಭಾಗದಲ್ಲಿ ೨ ಸಾವಿರ ಪೋಲೀಸರನ್ನು ಸೇರಿಸಿಕೊಂಡು ಅಲ್ಲಿ ಪ್ಯೂನಿಟಿವ್ ಪೋಲೀಸರನ್ನಿಡಲು ನಿರ್ಧರಿಸಿದ್ದಾರೆ. ಈ ಪೋಲೀಸರಿಗೆ ಸೈನಿಕರ ಸಹಾಯವನ್ನು ಕೊಡಲಾಗುವದು.

ಮುಂಬಯಿ ಶಾಸನ ಸಭೆಯಲ್ಲಿ ಪ್ರಾಂತೀಕರಣ ಗೊತ್ತುವಳಿಯ ಸ್ವೀಕಾರ

ಸ್ತ್ರೀ ಪುರುಷ ನೌಕರರಿಗೆ ಸಮಾನ ಸಂಬಳ ದೊರೆಯಬೇಕು

ತಾ. ೨೮ಕ್ಕೆ ಮುಂಬಯಿ ಶಾಸನ ಸಭೆಯಲ್ಲಿ ಪೂರಕ ಬೇಡಿಕೆಗಳ ಚರ್ಚೆ ಮುಂದುವರಿಯಿತು. ಅಂದು ಅನೇಕ ಮಹತ್ವದ ಪ್ರಶ್ನೋತ್ತರಗಳು ನಡೆದವು.

ಕುಲಾಬಾ ಪರಿಸ್ಥಿತಿ

ಕುಲಾಬಾ ಪರಿಸ್ಥಿತಿಯ ಬಗ್ಗೆ ಶ್ರೀ ಶಮುಸುದ್ದೀನರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುತ್ತ ಸಾರ್ವಜನಿಕ ಹಿತದೃಷ್ಟಿಯಿಂದ ಕುಲಾಬಾ ಜಿಲ್ಲೆಯಿಂದ ೧೫ ಮುಸ್ಲಿಮರನ್ನೂ ೯ ಹಿಂದುಗಳನ್ನೂ ಜಿಲ್ಲೆಯಿಂದ ಹೊರಗೆ ಹಾಕಲಾಗಿದೆಯೆಂದೂ ಆ ಜಿಲ್ಲೆಯಲ್ಲಿ ಜಿಲ್ಲಾ ಪೋಲೀಸ ಸುಪರಿಂಟೆಂಡೆಂಟರಾಗಿದ್ದ ಶ್ರೀ ಶ. ನಭಾಗರನ್ನು ಅವರು ಅಲ್ಲಿರುವದು ಸಾರ್ವಜನಿಕ ಸುರಕ್ಷಿತತೆಗೆ ಅಪಾಯಕರವೆಂದು ಕಂಡು ಬಂದದ್ದರಿಂದ ಅಲ್ಲಿಂದ ವರ್ಗಾಯಿಸಲಾಗಿದೆಯೆಂದೂ ಶ್ರೀ ಮುರಾರಜಿ ದೇಸಾಯರು ತಿಳಿಸಿದರು.

ಅಹಮದಾಬಾದ ದಂಗೆಯಲ್ಲಿ ಜುಲೈ ೧ ರಿಂದ ೩೦ರ ವರೆಗೆ ೫೩ ಜನರು ಸತ್ತರು. ೩೩೬ ಜನರು ಗಾಯಗೊಂಡಿರುವರೆಂದು ಶ್ರೀ ಕರಂದೀಕರರಿಗೆ ತಿಳಿಸಲಾಯಿತು.

ಶ್ರೀ ಪಿ. ಪಿ. ಗೋಖಲೆಯವರಿಗೆ ಉತ್ತರ ಕೊಡುತ್ತ ಪೂರೈಕೆ ಮಂತ್ರಿ ದಿನಕರರಾವ ದೇಸಾಯರು ೧೯೪೬ ಅಗಸ್ಟ ಕೊನೆಗೆ ಮುಗಿಯುವ ೨ ವರ್ಷಗಳಲ್ಲಿ ಕಳ್ಳ ಪೇಟೆ ಸಂಬಂಧದಲ್ಲಿ ೮೦೦ ಜನ ವ್ಯಾಪಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿತ್ತೆಂದೂ ಅವರಲ್ಲಿ ೧೨೮ಜನರು ನಿರ್ದೋಷಿಗಳೆಂದು ತೀರ್ಮಾನಿಸಲ್ಪಟ್ಟದ್ದರಿಂದ ಅವರ ಲಾಯಿಸೆನ್ಸುಗಳನ್ನು ತಿರುಗಿ ಕೊಡಲಾಯಿತೆಂದೂ ತಿಳಿಸಿದರು.

ಪ್ರಾಂತದಲ್ಲಿ ಇನ್ನೂ ಕೆಲ ಟ್ರೇನಿಂಗ ಕಾಲೇಜುಗಳನ್ನು ಸ್ಥಾಪಿಸುವದಲ್ಲದೆ ಇದ್ದವುಗಳನ್ನು ಕೆಲವನ್ನು ವಿಸ್ತರಿಸುವದಾಗಿಯೂ ತಿಳಿಸಲಾಯಿತು.

ವರದಕ್ಷಿಣೆ ಪ್ರತಿಬಂಧಕ ಮಸೂದೆ

ತಾ. ೩೧ಕ್ಕೆ ಶ್ರೀ ಎಫ್. ಬಿ. ಪಾಥಿಯವರ ವರದಕ್ಷಿಣೆ ಪ್ರತಿಬಂಧಕ ಮಸೂದೆಯ ಚರ್ಚೆ ನಡೆಯಿತು. ಸ್ತ್ರೀಧನವೊಂದನ್ನು ಬಿಟ್ಟು ಯಾವ ವರದಕ್ಷಿಣೆಯನ್ನೂ ಕೊಡುವದನ್ನು ಮತ್ತು ತೆಗೆದುಕೊಳ್ಳುವದನ್ನು ಇದು ಪ್ರತಿಬಂಧಿಸುತ್ತದೆ. ವರದಕ್ಷಿಣೆ ತೆಗೆದುಕೊಂಡವರಿಗೆ ೩ ತಿಂಗಳ ಶಿಕ್ಷೆ ಮತ್ತು ತೆಗೆದುಕೊಂಡ ದಕ್ಷಿಣೆಯಷ್ಟೇ ದಂಡ ಮತ್ತು ಕೊಟ್ಟವರಿಗೆ ೧ ತಿಂಗಳ ಶಿಕ್ಷೆ ಮತ್ತು ೫೦೦ ರೂಪಾಯಿ ದಂಡವನ್ನು ಮಸೂದೆ ವಿಧಿಸುತ್ತದೆ. ಲೀಗ ಪಕ್ಷದವರೂ ಶ್ರೀ ಚಕ್ರನಾರಾಯಣರೂ (ಕ್ರಿಶ್ಚನ್) ಇದನ್ನು ವಿರೋಧಿಸಿದರು. ಶ್ರೀಮತಿ ಲೀಲಾವತಿ ಮುನಶಿ ಮೊದಲಾದವರು ಬೆಂಬಲವಿತ್ತರು. ಪ್ರಥಮ ವಾಚನ ಸ್ವೀಕೃತವಾದ ಮೇಲೆ ಶ್ರೀ ಮುರಾರಜಿಯವರ ಸೂಚನೆಯಂತೆ ೯ ತಿಂಗಳು ಸಾರ್ವಜನಿಕಾಭಿಪ್ರಾಯದ ಬಗ್ಗೆ ಅದನ್ನು ಕಳಿಸಲು ಪಾಥಿಯವರು ಒಪ್ಪಿದರು.


ಶ್ರೀಮತಿ ಮುನಶಿಯವರು ಹರಿಜನ ದೇವಾಲಯ ಪ್ರವೇಶ ಮಸೂದೆಯನ್ನು ಮಂಡಿಸಲು ಯತ್ನಿಸಿದಾಗ ಅಂಥ ಮಸೂದೆಯೊಂದನ್ನು ಸರಕಾರವೇ ತರಲಿರುವದೆಂದು ತಿಳಿಸಿದುದರಿಂದ ಅದನ್ನು ಹಿಂತೆಗೆದುಕೊಳ್ಳಲಾಯಿತು.

ಕರ್ನಾಟಕ ಏಕೀಕರಣ

ತಾ. ೮ಕ್ಕೆ ಶ್ರೀ ಅಂದಾನೆಪ್ಪ ದೊಡ್ಡಮೇಟಿಯವರು ಭಾಷಾನ್ವಯ ಪ್ರಾಂತರಚನೆಯ ಬಗ್ಗೆ ಮಂಡಿಸಿದ ಗೊತ್ತುವಳಿಯ ಚರ್ಚೆ ನಡೆದು ೬೦ ವಿರುದ್ಧ ೮ ಮತಗಳಿಂದ ಅದು ಸ್ವೀಕೃತವಾಯಿತು.

"ಭಾಷೆಗಳ ತಳಹದಿಯ ಮೇಲೆ ಪ್ರಾಂತಗಳನ್ನು ಪುನರ್ರಚಿಸಬೇಕೆಂಬ ಸಂಗತಿ ಹಿಂದುಸ್ತಾನದ ಸಮಗ್ರ ಘಟನಾತ್ಮಕ ವಿಕಾಸಕ್ಕೆ ಅವಶ್ಯಕ ಹಿರಿಕೆಯಾಗಿರುವದೆಂದೂ ಅದು ಕಾರಣ ಘಟನಾ ಸಮಿತಿಯ ಕಾರ್ಯಕಲಾಪದ ಮೊದಲನೆ ಪರ್ಯಾಯದಲ್ಲಿ ಈ ಪ್ರಶ್ನೆಯನ್ನು ಕುರಿತು ವಿಚಾರ ಮಾಡತಕ್ಕದ್ದೆಂದೂ ಈ ಶಾಸನ ಸಭೆ ಅಭಿಪ್ರಾಯಪಡುತ್ತದೆಂಬ ಸಂಗತಿಯನ್ನು ಹಿಂದುಸ್ತಾನ ಸರಕಾರದ ಮುಖಾಂತರ ಘಟನಾ ಸಮಿತಿಗೆ ನಿವೇದಿಸಬೇಕೆಂದೂ ಈ ಶಾಸನ ಸಭೆ ಸರಕಾರಕ್ಕೆ ಸೂಚಿಸಬಯಸುತ್ತದೆ."

ಎಂದು ಶ್ರೀ ದೊಡ್ಡಮೇಟಿಯವರ ಗೊತ್ತುವಳಿ ಹೇಳುತ್ತದೆ. ಈ ಗೊತ್ತುವಳಿಯನ್ನು ಸಮರ್ಥಿಸುತ್ತ ಶ್ರೀ ದೊಡ್ಡಮೇಟಿಯವರು ಕನ್ನಡದಲ್ಲಿ ಭಾಷಣ ಮಾಡಿ ಸಾಯಮನ ಸಮಿತಿಯ ವರದಿ, ನೆಹರೂ ಸಮಿತಿಯ ವರದಿ, ಪ್ರಾಂತಿಕ ಕಾಂಗ್ರೆಸ್ಸುಗಳ ನಿರ್ಣಯ ಮೊದಲಾದವುಗಳನ್ನು ಎತ್ತಿ ತೋರಿಸಿದರು. ಕಾಂಗ್ರೆಸ್ ಪಕ್ಷದ ಶ್ರೀ ಪವಾರ, ಬಾಬುಭಾಯಿ ಪಾಟೀಲ, ಶ್ರೀ ಆರ್. ಎಸ್. ಹುಕ್ಕೇರಿಕರರೂ ಕಮ್ಯುನಿಸ್ಟರಾದ ಶ್ರೀ ಡಾಂಗೆಯವರೂ ಹಿಂದೂ ಮಹಾಸಭೆಯ ಶ್ರೀ ಕರಂದೀಕರರೂ ಇದಕ್ಕೆ ಬೆಂಬಲವಿತ್ತು ಮಾತಾಡಿದರು.



ಮುಸ್ಲಿಂಲೀಗ್ ಪಕ್ಷದ ಧುರೀಣರಾದ ಶ್ರೀ ಎ. ಎ. ಖಾನರು ಗೊತ್ತುವಳಿಗೆ ವಿರೋಧವೆತ್ತಿದರು. ಘಟನಾ ಸಮಿತಿ ಅಕ್ರಮವಾಗಿ ಕಾರ್ಯಕಲಾಪ ಸಾಗಿಸಿದ ಸಂಸ್ಥೆಯಾಗಿದ್ದುದರಿಂದ ಅದಕ್ಕೆ ಸೂಚನೆ ಕೊಡಲು ಲೀಗ್ ಪಕ್ಷದ ವಿರೋಧವುಂಟೆಂದು ಅವರ ವಾದವಾಗಿತ್ತು. ಅಲ್ಲದೆ ಇಡಿ ಹಿಂದುಸ್ತಾನಕ್ಕೆ ಒಂದೇ ಭಾಷೆಯ ಉತ್ಕ್ರಾಂತಿಯಾದಾಗಲೆ ಭಾಷಾ ಸಮಸ್ಯೆ ದೂರವಾಗುವದೆಂದು ಅವರು ಹೇಳಿದರು.

ಸರಕಾರದ ಪರವಾಗಿ ಮುಖ್ಯ ಮಂತ್ರಿ ಖೇರರು ಸಹಾನುಭೂತಿಯನ್ನು ಪ್ರದರ್ಶಿಸಿದರು. ಲೀಗ್ ಪಕ್ಷದವರು ಮತಗಣನೆಯಾಗಬೇಕೆಂದು ಹಟ ತೊಟ್ಟದ್ದರಿಂದ ೬೦ ವಿರುದ್ಧ ೮ ಮತಗಳಿಂದ ಗೊತ್ತುವಳಿ ಪಾಸಾಯಿತು.

ಸ್ತ್ರೀಯರ ಹಕ್ಕು

ಸರಕಾರದ ಖಾತೆಗಳಲ್ಲಿ ಕೆಲಸ ಮಾಡುತ್ತಿರುವ ಸ್ತ್ರೀಯರಿಗೆ ತತ್ಸಮಾನ ನೌಕರಿಗಳಲ್ಲಿರುವ ಪುರುಷರ ಸಮಾನವಾದ ಸಂಬಳ ಕೊಡಬೇಕೆಂಬ ಗೊತ್ತುವಳಿಯೊಂದನ್ನು ಶ್ರೀಮತಿ ಮುನಶಿಯವರು ತಾ. ೨ಕ್ಕೆ ಮಂಡಿಸಿದರು. ಅದು ಲೀಗ್ ಸದಸ್ಯರಾದ ಶ್ರೀ ಮಿರ್ಜಾ ಅವರೊಬ್ಬರ ವಿರೋಧದೊಡನೆ ಪಾಸಾಯಿತು.

ಶ್ರೀ ನಾತೂ ಅವರು ಮಾಧ್ಯಮಿಕ ಶಾಲೆಗಳ ಆರ್ಥಿಕ ಪರಿಸ್ಥಿತಿಯನ್ನು ವಿಚಾರಿಸಲು ಅಧಿಕಾರಿ ಮತ್ತು ಸರಕಾರೇತರ ಸದಸ್ಯರ ಒಂದು ಮಂಡಲ ನೇಮಿಸಬೇಕೆಂಬ ಗೊತ್ತುವಳಿ ಮಂಡಿಸಿದಾಗ ಸರಕಾರದವರು ಈ ವಿಚಾರದಲ್ಲಿ ಆಲೋಚನೆ ನಡೆಸಿದ್ದಾರೆಂದು ತಿಳಿಸಿದ್ದರಿಂದ ಅದನ್ನು ಹಿಂತೆಗೆದುಕೊಳ್ಳಲಾಯಿತು.

ಕೇಂದ್ರ ಶಾಸನ ಸಭೆ

ಹಣಕಾಸಿನ ಮಸೂದೆಯ ಸ್ವೀಕಾರ

ಕೇಂದ್ರ ಶಾಸನ ಸಭೆಯಲ್ಲಿ ಹಣಕಾಸಿನ ಮಸೂದೆಯ ಬಗ್ಗೆ ನಾಲ್ಕು ದಿನದ ಚರ್ಚೆಯಾದ ನಂತರ ಆರ್ಥಿಕ ಮಂತ್ರಿ ಲಿಯಾಕತ ಅಲ್ಲಿಖಾನರು ತಾ ೨೭ಕ್ಕೆ ಉತ್ತರ ಕೊಡುತ್ತ ಅನೇಕ ಟೀಕೆಗಳಿಗೆ ಸಮಾಧಾನ ಹೇಳಿದರು. ಮುಂಗಡ ಪತ್ರಿಕೆಯ ಸೂಚನೆಗಳು ತಮ್ಮವು ಇಲ್ಲವೆ ಹಣಕಾಸಿನ ಶಾಖೆಯವಾಗಿರದೆ ಹಿಂದುಸ್ತಾನ ಸರಕಾರದವೆಂಬ ಅಂಶವನ್ನು ಅವರು ಹೊರಗೆಡಹಿದ್ದರಿಂದ ಅನೇಕ ತಪ್ಪು ತಿಳಿವಳಿಕೆಗಳು ದೂರಾದವು. ಯಾವದೇ ಜಾತಿಯನ್ನು ನಷ್ಟಕ್ಕೆ ಗುರಿಪಡಿಸುವದು ಅಥವಾ ಪಾಕಿಸ್ತಾನವನ್ನು ಸಾಧಿಸುವದ ತಮ್ಮ ಮುಂಗಡ ಪತ್ರಿಕೆಯ ಗುರಿಯಾಗಿಲ್ಲ. ನಿಜವಾಗಿ ಇಡೀ ದೇಶದ ಹಿತದೃಷ್ಟಿಯಿಂದ ತಾವು ಮುಂಗಡ ಪತ್ರಿಕೆಯನ್ನು ರಚಿಸಿದ್ದೇವೆ. ಜನಸಾಮಾನ್ಯರ ಸ್ಥಿತಿಗತಿಯನ್ನು ಸುಧಾರಿಸುವದಕ್ಕೆ ಶ್ರೀಮಂತರ ಮೇಲೆ ಕರ ಹೇರುವದು ಅನಿವಾರ್ಯವಾಗಿದೆ. ಕಾಂಗ್ರೆಸ್ಸಿಗರು ಪಾಕಿಸ್ತಾನ ಭೂತದಿಂದ ಪೀಡಿತರಾಗಿ ಅಸಂಗತ ಟೀಕೆಗಳನ್ನು ಮಾಡುತ್ತಾರೆ. ಬಡವರ ಮೇಲಿನ ಭಾರವನ್ನು ಕಡಿಮೆ ಮಾಡಲು ತಾವು ಪ್ರಯತ್ನಿಸುತ್ತಿದ್ದೇವೆ. ಮುಂಗಡ ಪತ್ರಿಕೆಯಲ್ಲಿ ಆಹಾರ, ಹೆಚ್ಚಿನ ಬೆಲೆ, ವೈದ್ಯಕೀಯ ಪರಿಹಾರ, ಶಿಕ್ಷಣ, ಆರೋಗ್ಯ, ನೀರಾವರಿ, ವಿದ್ಯುಚ್ಛಕ್ತಿ, ಕೂಲಿಕಾರ ವಸತಿ ಮೊದಲಾದ ಸಾಮಾಜಿಕ ಕಾರ್ಯಗಳಿಗಾಗಿ ೧೧೧ ಕೋಟಿ ೭೦ ಲಕ್ಷ ರೂಪಾಯಿ ತೆಗೆದಿಡಲಾಗಿದೆ. ಹೊಸ ಕರಗಳಿಂದ ಉದ್ಯೋಗಗಳು ಹಾಳಾಗುವದಿಲ್ಲೆಂದು ತಮಗನಿಸುತ್ತದೆ. ಶ್ರೀಮಂತರಲ್ಲಿ ಇನ್ನೂ ಹಣ ಉಳಿದೇ ಉಳಿಯುವದೆಂದು ಅವರು ಹೇಳಿದ್ದಲ್ಲದೆ ಕರದಿಂದ ತಪ್ಪಿಸಿಕೊಳ್ಳುವ ಶ್ರೀಮಂತರ ವಿರುದ್ಧ ಉಗ್ರೋಪಾಯ ಕೈಕೊಳ್ಳಲಾಗುವದೆಂದು ಎಚ್ಚರವಿತ್ತರು.

ತಾ. ೨೮ಕ್ಕೆ ಮತಗಣನೆಯಿಲ್ಲದೆ ಶಾಸನ ಸಭೆ ಹಣಕಾಸಿನ ಮಸೂದೆಯನ್ನು ಸ್ವೀಕರಿಸಿತು. ಚಹಾದ ಕರವನ್ನು ಕಡಿಮೆ ಮಾಡಬೇಕು ಹೆಚ್ಚಿನ ಕರಾಕರಣೆಯಿಂದ ಮುಕ್ತವಾದ ಲಾಭದ ಮಿತಿಯನ್ನು ಹೆಚ್ಚಿಸಬೇಕು, ತುಟ್ಟಿಭತ್ತೆ ಮೊದಲಾದವುಗಳನ್ನು ಕರದಿಂದ ದೊರಕುಪಡಿಸಬೇಕು ಎಂಬೀ ಮೊದಲಾದ ತಿದ್ದುಪಡಿಗಳು ಬಿದ್ದು ಹೋದವು.

ಯುರೋಪಿಯನ್ನನ ನೇಮಕ

ತಾ ೩೧ಕ್ಕೆ ಶಾಸನ ಸಭೆಯಲ್ಲಿ ಅಧ್ಯಕ್ಷರು ಮೂರು ನಿಲುವಳಿಸೂಚನೆಗಳಿಗೆ ಅಪ್ಪಣೆಯನ್ನು ನಿರಾಕರಿಸಿದರು. ಜಾತೀಯ ಗಲಭೆ ಸುದ್ದಿಗಳ ಪ್ರಕಟನೆಯಲ್ಲಿ ಸರಕಾರ ಹಿಂದೂ ಪತ್ರಿಕೆಗಳಿಗೆ ಪಕ್ಷಪಾತ ತೋರುವದೆಂದು ಮಹಮುದ ನೌಮನ್ನರು, ಸಂಯುಕ್ತಪ್ರಾಂತದ ಬೇರಿಯಾ ಎಂಬಲ್ಲಿ ಬ್ರಾಹ್ಮಣರೂ ಠಾಕೂರರೂ ಸೇರಿ ಹರಿಜನರನ್ನೂ ಅವರ ದನಕರುಗಳನ್ನೂ ಸುಟ್ಟರೆಂದು ಶ್ರೀ ಶಿವರಾಜರು, ಹಣಕಾಸಿನ ಖಾತೆಯ ಕಾರ್ಯದರ್ಶಿಸ್ಥಾನಕ್ಕೆ ಯುರೋಪಿಯನ್ನರಾದ ಟರ್ನರರನ್ನು ನೇಮಿಸಿದ್ದಕ್ಕೆ ಶ್ರೀ ವೆಂಕಟಸುಬ್ಬಾರೆಡ್ಡಿ ಮತ್ತು ಅನಂತಶಯನ ಅಯ್ಯಂಗಾರರು ನಿಲುವಳಿ ತಂದಿದ್ದರು. ಮೊದಲನೆಯದನ್ನು ಅಂಕಿಸಂಖ್ಯೆಗಳನ್ನಿತ್ತು ಸರದಾರ ಪಟೇಲರು ನಿರಾಕರಿಸಿದರು. ಎರಡನೆಯದು ಪ್ರಾಂತೀಯ ವಿಷಯವೆಂದು ಅಧ್ಯಕ್ಷರು ಕಿತ್ತುಹಾಕಿದರು. ಮೂರನೆಯದಕ್ಕೆ ಉತ್ತರವಾಗಿ ಲಿಯಾಕತ ಅಲ್ಲಿಖಾನರು ಟರ್ನರರಷ್ಟು ಅನುಭವಶಾಲಿಗಳಾದ ಹಿಂದೀಯರು ಸಿಗಲಿಲ್ಲವೆಂದೂ ಮಿ ಟರ್ನರರ ಸ್ಥಳಕ್ಕೆ ಹಿಂದೀಯನೊಬ್ಬನನ್ನು ಹಣಕಾಸಿನ ಕಮೀಶನರನಾಗಿ ನೇಮಿಸಲಾಗಿದೆಯೆಂದೂ ತಿಳಿಸಿದರು.

ಕರ ತಪ್ಪಿಸುವವರ ಮಸೂದೆ

ಕರದಿಂದ ತಪ್ಪಿಸಿಕೊಳ್ಳುವವರನ್ನು ದಂಡಿಸಲು ಲೆಕ್ಕ ಮೊದಲಾದವುಗಳನ್ನು ಪರಿಶೀಲಿಸುವದಕ್ಕೆ ಹೆಚ್ಚಿನ ವ್ಯವಸ್ಥೆ ಮಾಡುವ ಮಸೂದೆಯೊಂದನ್ನು ಪರಿಶೀಲಕ ಸಮಿತಿಗೆ ಒಪ್ಪಿಸಲಾಗಿತ್ತು. ಅದಕ್ಕೆ ವರದಿ ಮಾಡಲು ಎಪ್ರಿಲ ೮ ರ ವರೆಗೆ ಅವಧಿ ಕೊಡಬೇಕೆಂದು ಗೊತ್ತುವಳಿ ಮಂಡಿಸಿ ಲಿಯಾಕತ ಅಲ್ಲಿಖಾನರು ಕರದಿಂದ ತಪ್ಪಿಸಿಕೊಳ್ಳುವವರನ್ನು ದಂಡಿಸಲು ಸರಕಾರ ನಿರ್ಧರಿಸಿದೆಯೆಂದೂ ಈ ಅವಧಿ ಹೆಚ್ಚಳದಿಂದ ಆ ಮಸೂದೆಯನ್ನು ಮುಂದೆ ತಳ್ಳುವ ಉದ್ದೇಶವಿಲ್ಲೆಂದೂ ತಿಳಿಸಿದರು. ಅದು ಪಾಸಾಯಿತು.

೪೦ ಲಕ್ಷ ಟನ್ ಕೊರತೆ

ಈಗಿನ ಸೀದಾ ಪ್ರಮಾಣದಂತೆ ನೋಡಲಾಗಿ ಹಿಂದುಸ್ತಾನಕ್ಕೆ ಈ ವರ್ಷ ೪೦ ಲಕ್ಷ ಟನ್ ಆಹಾರ ಧಾನ್ಯಗಳನ್ನು ಹೊರಗಿನಿಂದ ತರಿಸಬೇಕಾಗುವದೆಂದು ಆಹಾರ ಕಾರ್ಯದರ್ಶಿ ಪಂಜಾಬಿಯವರು ತಿಳಿಸಿದರು.

ವ್ಯಾಪಾರಿ ಲಾಭಕರ ಮಸೂದೆ

ತಾ. ೧ಕ್ಕೆ ವ್ಯಾಪಾರಿಯ ಕರ ಮಸೂದೆ ಕೆಲ ತಿದ್ದುಪಡಿಗಳೊಡನೆ ಮತಗಣನೆಯಿಲ್ಲದೆ ಸ್ವೀಕರಿಸಲ್ಪಟ್ಟಿತು. ಮನ ಸುಬೇದಾರರು, ಕರದ ಪ್ರಮಾಣವನ್ನು ನೂರಕ್ಕೆ ೨೫ ರಿಂದ ೧೬-೨/೩ ಗೆ ಇಳಿಸಬೇಕೆಂದು ಬಂಡವಳದ ಮೇಲೆ ನೂರಕ್ಕೆ ೫ ಮತ್ತು ೬ ರ ಪ್ರಮಾಣದಲ್ಲಿ ಕನಿಷ್ಠ ಲಾಭ ಇಟ್ಟುಕೊಳ್ಳಲು ಅವಕಾಶ ಕೊಟ್ಟಿದ್ದನ್ನು ಸಾರ್ವತ್ರಿಕವಾಗಿ ೬ಕ್ಕೆ ಏರಿಸಬೇಕೆಂದೂ ಮಂಡಿಸಿದ ತಿದ್ದುಪಡಿಗಳನ್ನು ಅರ್ಥಸಚಿವರು ಹಿಂದೆಯೇ ಒಪ್ಪಿದ್ದಂತೆ ಅಂಗೀಕರಿಸಿದರು.

---

೩೦ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಹರಪನಹಳ್ಳಿ

೩೦ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಹರಪನಹಳ್ಳಿ ಸ್ವಾಗತಸಮಿತಿಯವರು ಕೆಳಗಿನ ಪ್ರಕಟಣೆ ಹೊರಡಿಸಿದ್ದಾರೆ.

ಊಟ ಉಪಹಾರ :— ಸಮ್ಮೇಳನಕ್ಕೆ ಬರುವವರೆಲ್ಲರೂ ೪೭ ನೆಯ ಎಪ್ರಿಲ್ ೨೦ ನೇಯ ದಿನಾಂಕದೊಳಗಾಗಿ ಊಟೋಪಹಾರಗಳ ವ್ಯವಸ್ಥೆಯಬಗ್ಗೆ ಪ್ರಾರ್ಥನಾ ಪತ್ರಗಳನ್ನು ಸ್ವಾಗತ ಸಮಿತಿಯ ಕಚೇರಿಗೆ ಕಳಿಸತಕ್ಕದ್ದು. ಇಲ್ಲಿ ಸೀದಾ ಪದ್ಧತಿ ಜಾರಿಯಲ್ಲಿದ್ದು ಊಟಕ್ಕೆ ಇಷ್ಟು ಜನರು ಬರುವರೆಂಬ ನಿರ್ದಿಷ್ಟ ಸಂಖ್ಯೆಯನ್ನು ಸರಕಾರದವರಿಗೆ ಮುಂಚಿತವಾಗಿಯೇ ತಿಳಿಸಬೇಕಾಗಿದೆ. ಕಾರಣ ಎಲ್ಲ ಮಹನೀಯರೂ ತಮ್ಮ ತಮ್ಮ ಊಟೋಪಹಾರದ ವ್ಯವಸ್ಥೆಯ ಬಗ್ಗೆ ಪ್ರಾರ್ಥನಾ ಪತ್ರಗಳನ್ನು ಮೇಲ್ಕಾಣಿಸಿದ ಅವಧಿಯೊಳಗಾಗಿ ಕಳಿಸುವ ಉಪಕಾರ ಮಾಡಬೇಕಾಗಿ ವಿನಂತಿ

ಊಟೋಪಹಾರದ ದರಗಳು ಇಂತಿವೆ :— ಪ್ರತಿಯೊಂದು ಊಟಕ್ಕೆ ಒಂದು ರೂಪಾಯಿ ಒಂದು ದಿವಸಕ್ಕೆ [ಎರಡು ಊಟ, ಎರಡು ಉಪಹಾರಗಳು ಸೇರಿ] ಎರಡು ರೂಪಾಯಿಗಳು. ಬೆಳಗಿನ ಉಪಹಾರಕ್ಕೆ ನಾಲ್ಕಾಣೆಗಳು ಸಂಜೆಯ ಉಪಹಾರಕ್ಕೆ ಆರಾಣೆಗಳು. ವಸತಿಯನ್ನು ಉಚಿತವಾಗಿ ಏರ್ಪಡಿಸಲಾಗುವದು. ಇದಕ್ಕಾಗಿ ಪ್ರತ್ಯೇಕ ಹಣವಿಲ್ಲ.

ಬರಲು ಬಯಸುವ ಪ್ರತಿನಿಧಿಗಳು ತಮ್ಮ ಪ್ರತಿನಿಧಿಯ ಶುಲ್ಕ ಎರಡು ರೂಪಾಯಿಗಳನ್ನು ಊಟೋಪಹಾರದ ರುಸುಮು ಆರು ರೂಪಾಯಿಗಳನ್ನೂ ಪ್ರಾರ್ಥನಾ ಪತ್ರದೊಡನೆ ಕಳಿಸತಕ್ಕದ್ದು.

ಮಳಿಗೆಗಳು (ಸ್ಟಾಲುಗಳು) :— ಪ್ರತಿಯೊಂದು ಸಣ್ಣ ಮಳಿಗೆಗೆ ರೂ. ೧೦। ರಂತೆಯೂ ಪ್ರತಿಯೊಂದು ದೊಡ್ಡ ಮಳಿಗೆಗೆ ೧೫। ರಂತೆಯೂ ಬಾಡಿಗೆಯನ್ನು ಗೊತ್ತುಪಡಿಸಿದೆ, ಇವುಗಳಿಗೆ ತಗಲುವ ದೀಪದ ವೆಚ್ಚವನ್ನು ಪ್ರತ್ಯೇಕ ಕೊಡಬೇಕಾಗುವದು.
(ಸಣ್ಣ ಮಳಿಗೆ — ೮x೧೦ ಚ. ಅ ಉಳ್ಳದ್ದು)
(ದೊಡ್ಡ ಮಳಿಗೆ — ೮x೧೫ ಚ ಅ ಉಳ್ಳದ್ದು)

ಪ್ರದರ್ಶನಕ್ಕೆ [ವ್ಯಾಪಾರವಿಲ್ಲದೆ ಜ್ಞಾನ ಪ್ರಸರಣಕ್ಕೆ] ಬರುವವರಿಗೆಲ್ಲ ಮಳಿಗೆಗಳನ್ನು ಉಚಿತವಾಗಿ ಒದಗಿಸಲಾಗುವದು.

ಮಳಿಗೆಗಳು ಬೇಕಾದವರು ಶ್ರೀ ಹೊನ್ನಪ್ಪಾ ಬಣಗಾರ, ಪ್ರದರ್ಶನ ಸಮಿತಿಯ ಸಂಚಾಲಕರು ಇವರೊಡನೆ ಪತ್ರವ್ಯವಹಾರಮಾಡಿರಿ.

ವಿಶೇಷ ಸೂಚನೆ :— ಸಾಹಿತ್ಯ ಗೋಷ್ಠಿಯಲ್ಲಿ ಲೇಖನಗಳನ್ನು ಓದಲು ಬಯಸುವವರು ಅಂತಹ ಲೇಖನಗಳನ್ನು ಪ್ರದರ್ಶನಕ್ಕೆ ಯೋಗ್ಯವಾದ ಪುಸ್ತಕ ಪತ್ರಿಕೆ ಕಲಾಕೃತಿಗಳು ಮುಂತಾದವುಗಳನ್ನೂ ಇದೇ ಏಪ್ರಿಲ ತಿಂಗಳು ೨೦ ನೆಯ ದಿನಾಂಕದೊಳಗಾಗಿ ತಲುಪುವಂತೆ ಕಾರ್ಯದರ್ಶಿಗಳು ೩೦ ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಹರಪನಹಳ್ಳಿ ಇವರಿಗೆ ಕಳುಹಿಸಲು ಪ್ರಾರ್ಥನೆ.

ಮಾರಾಟಕರ ನೋಟೀಸ

ಮುಂಬಯಿ ಪ್ರಾಂತದಲ್ಲಿಯ ವ್ಯಾಪಾರಿಗಳು ಪ್ರಾಂತದಲ್ಲಿ ತಮ್ಮ ಯಾವತ್ತೂ ವ್ಯವಹಾರ ಸ್ಥಳಗಳಲ್ಲಿಯ ಎಲ್ಲ ಮಾರಾಟಗಳನ್ನು ಮತ್ತು ಕಂಟ್ರಾಕ್ಟಗಳನ್ನು ಒಳಗೊಂಡು ೧ನೇ ಎಪ್ರಿಲ್ ೧೯೪೬ ರಿಂದ ೩೧ ನೇ ಮಾರ್ಚ ೧೯೪೭ ರ ವರೆಗಿನ ಅವಧಿಯಲ್ಲಿಯ ಒಟ್ಟು ವ್ಯವಹಾರವು (Turn over) ರೂ. ೩೦,೦೦೦ ಮಿಕ್ಕುತ್ತಿದ್ದರೆ ಅಂಥವರು ೩೦ ನೇ ಎಪ್ರಿಲ್ ೧೯೪೭ ರೊಳಗಾಗಿ ಮುಂಬಯಿ ಮಾರಾಟಕರ ಕಾಯದೆಯನ್ವಯ ರಜಿಸ್ಟ್ರೇಶನ್ ಬಗ್ಗೆ ಅರ್ಜಿಯನ್ನು ಮಾಡಿಕೊಳ್ಳಬೇಕಾಗುತ್ತದೆ. ಅರ್ಜಿಗಳು ಫಾರ್ಮ 11 ರಲ್ಲಿ ಇರತಕ್ಕದ್ದು. ಮತ್ತು ತಮ್ಮ ವ್ಯವಹಾರ ಸ್ಥಳಗಳು ಇದ್ದಂಥ ಕ್ಷೇತ್ರಗಳಿಗೆ ಸಂಬಂಧಿಸಿದ ಮಾರಾಟಕರ ಅಧಿಕಾರಿಗಳ ಕಡೆಗೆ ಮಾಡತಕ್ಕದ್ದು.

"ವ್ಯಾಪಾರಸ್ಥ" (Dealer) ಎಂದರೆ ಮುಂಬಯಿ ಪ್ರಾಂತದಲ್ಲಿ ಕಮಿಶನ್ ಮೇಲೆ, ಸಂಬಳದ ಮೇಲೆ, ಅಥವಾ ಇತರ ರೀತಿಯಿಂದ ಸರಕುಗಳ ಮಾರಾಟದ ಅಥವಾ ಪೂರೈಕೆಯ ವ್ಯವಹಾರವನ್ನು ಕೈಕೊಂಡಂಥ ಯಾವದೇ ವ್ಯಕ್ತಿಯು ಮತ್ತು ತನ್ನ ಸದಸ್ಯರಿಗೆ ಸರಕುಗಳನ್ನು ಮಾರುವ ಅಥವಾ ಪೂರೈಸುವ ಯಾವದೇ ಸೊಸಾಯಿಟಿಯು, ಕ್ಲಬ್, ಅಥವಾ ಸಂಸ್ಥೆಯು ಸಮಾವೇಶವಾಗುವದು.

ಮೇ ೧ರಿಂದ ಸತ್ಯಾಗ್ರಹ ಹೂಡಲು ಮೈಸೂರು ಕಾಂಗ್ರೆಸ್ಸಿಗರ ನಿರ್ಣಯ

ದೇಶವು ಸ್ವಾತಂತ್ರ್ಯದತ್ತ ಸಾಗಿದಾಗ ಮೈಸೂರು ಸುಮ್ಮನೆ ಕೂಡುವದು ಶಕ್ಯವಿಲ್ಲ

ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಬಹಿಷ್ಕಾರ ಗೊತ್ತುವಳಿ ಬಿದ್ದು ಹೋಯಿತು

ಮೈಸೂರು ಸಂಸ್ಥಾನದಲ್ಲಿ ಮೇ ೧ರಿಂದ ಸತ್ಯಾಗ್ರಹ ಪ್ರಾರಂಭಿಸಬೇಕೆಂದು ಶ್ರೀ ಕೆ. ಟಿ. ಭಾಷ್ಯಮರು ಮಂಡಿಸಿದ ಮುಖ್ಯ ಗೊತ್ತುವಳಿಯು ಅಖಿಲ ಮೈಸೂರ ಕಾಂಗ್ರೆಸ ಕಮಿಟಿಯಲ್ಲಿ ತಾ. ೨೦ ಕ್ಕೆ ಬೌರಿಂಗಪೇಟೆಯಲ್ಲಿ ಸೇರಿದ ಸಭೆಯಲ್ಲಿ ಪ್ರಚಂಡ ಬಹುಮತದಿಂದ ಸ್ವೀಕೃತವಾಯಿತು. ಸತ್ಯಾಗ್ರಹವನ್ನು ಕೂಡಲೆ ಪ್ರಾರಂಭಿಸಬೇಕೆಂದು ಉಪಸೂಚನೆಗಳು ಬಂದಿದ್ದರಿಂದ ದೀರ್ಘ ಚರ್ಚೆ ನಡೆಯಿತು. ಕೆ. ಟಿ. ಭಾಷ್ಯಮರು ಚರ್ಚೆಗೆ ಉತ್ತರ ಕೊಡುತ್ತ ಸತ್ಯಾಗ್ರಹದ ನಿರ್ಣಯಮಾಡುವ ಮೊದಲು ಎಲ್ಲ ಅಂಶಗಳನ್ನು ವಿಚಾರಮಾಡಿದ್ದಲ್ಲದೆ ಸರಕಾರಕ್ಕೂ ಸಮಾಧಾನಕರ ಉತ್ತರಕೊಡಲು ಸಾಕಷ್ಟು ಅವಕಾಶ ಕೊಡಲಾಗಿದೆಂದು ಹೇಳಿದರು.

ಶ್ರೀ ಕೆ ಚಂಗಲರಾಯ ರೆಡ್ಡಿಯವರು ಭಾಷ್ಯಮರಿಗೆ ಬೆಂಬಲ ಕೊಟ್ಟು, ಪಂಡಿತ ನೆಹರೂ, ಸರದಾರ ವಲ್ಲಭಭಾಯಿಯವರ ಸಲಹೆಯಂತೆ ಸರಕಾರಕ್ಕೆ ಸಮಾಧಾನಕರ ಉತ್ತರದ ಬಗ್ಗೆ ಹಾಗು ಜನರಿಗೆ ಹೋರಾಟಕ್ಕೆ ಸಿದ್ಧರಾಗಲು ಸಾಕಷ್ಟು ಅವಕಾಶ ಕೊಟ್ಟದ್ದನ್ನು ಉಲ್ಲೇಖಿಸಿದರು. ಹಾಗು ಈಗಿಂದೀಗ ಸತ್ಯಾಗ್ರಹ ಪ್ರಾರಂಭಿಸುವದು ಸಾಧ್ಯವಿಲ್ಲದಿದ್ದರೂ ಅದನ್ನು ವಿಲಂಬವಿಲ್ಲದೆ ಪ್ರಾರಂಭಿಸಲು ಕಾರ್ಯಕಾರಿ ಮಂಡಳವು ಆತುರವಿದೆಯೆಂದು ಹೇಳಿದರು. ಉಪಸೂಚನೆಗಳು ಹಿಂತೆಗೆದುಕೊಳ್ಳಲ್ಪಟ್ಟು ಇಲ್ಲವೆ ನಿರಾಕೃತವಾಗಿ ಮುಖ್ಯ ಗೊತ್ತುವಳಿ ಸ್ವೀಕೃತವಾಯಿತು.

ಕಾಂಗ್ರೆಸ್ಸು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಚುನಾವಣೆಗಳಲ್ಲಿ ಭಾಗವಹಿಸಬಾರದೆಂದು ಖಾಸಗಿ ಗೊತ್ತುವಳಿಯೊಂದು ಚರ್ಚೆಗೆ ಬಂದಿತ್ತು. ಅವುಗಳಲ್ಲಿ ಪ್ರವೇಶ ಮಾಡಿದ್ದರಿಂದ ಹೆಚ್ಚಿನ ಲಾಭವೇನೂ ಆಗಿಲ್ಲ. ಅನೇಕ ಕಾಂಗ್ರೆಸ್ಸೇತರರು ಆರಿಸಿ ಬರುವ ಉದ್ದೇಶದಿಂದ ಕಾಂಗ್ರೆಸಿನಲ್ಲಿ ಸೇರಿ ಕಾಂಗ್ರೆಸ ಹೆಸರಿನ ದುರುಪಯೋಗ ಮಾಡಿಕೊಳ್ಳುತ್ತಿರುವರು ಎಂದು ಸೂಚಕರು ಹೇಳಿದರು. ಕಾರ್ಯಕಾರೀ ಸಮಿತಿಯ ಸಭಾಸದರನ್ನೊಳಗೊಂಡು ಕೆಲವು ಭಾಷಣಕಾರರು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಕಾಂಗ್ರೆಸಿಗರಿಂದ ವಿಶೇಷತಃ ಹಳ್ಳಿಗಳಲ್ಲಿ ಉಪಯುಕ್ತವಾದ ಕಾರ್ಯವಾಗಿದೆಂದೂ ಅದರಿಂದ ಕಾಂಗ್ರೆಸ ಪ್ರತಿಷ್ಠೆ ಬೆಳೆದಿದೆಂದೂ ಯೋಗ್ಯ ಹುರಿಯಾಳುಗಳನ್ನು ಆರಿಸಲು ಸಮಿತಿಗಳನ್ನು ನೇಮಿಸಲಾಗಿರುವದೆಂದೂ ತಿಳಿಸಿದರು. ಗೊತ್ತುವಳಿಯು ೧೫ ವಿರುದ್ಧ ೩೯ ಮತಗಳಿಂದ ನಿರಾಕೃತವಾಯಿತು.

ಅಧ್ಯಕ್ಷರಾದ ಶ್ರೀ ಕೆ. ಚಂಗಲರಾಯ ರೆಡ್ಡಿಯವರು ಸಭೆಯಲ್ಲಿ ಭಾಷಣ ಮಾಡುತ್ತ ಹಿಂದುಸ್ಥಾನದ ಉಳಿದ ಭಾಗಗಳು ಸಂಪೂರ್ಣ ಸ್ವಾತಂತ್ರ್ಯದತ್ತ ಸಾಗಿರುವಾಗ ಮೈಸೂರು ಸಂಸ್ಥಾನದ ೭೦ ಲಕ್ಷ ಜನರು ಸುಮ್ಮನೆ ನೋಡುತ್ತ ಕೂಡುವದು ಶಕ್ಯವಿಲ್ಲೆಂದು ನುಡಿದರು. ಸ್ವಾಗತಾಧ್ಯಕ್ಷರಾದ ರಾಜಾ ಆದಿ ನಾರಾಯಣ ಚೆಟ್ಟಿಯವರು ಮಹಾರಾಜರ ಆಶ್ರಯದಲ್ಲಿ ಹೊಣೆಗಾರ ರಾಜ್ಯಪದ್ಧತಿ ಸಿಕ್ಕ ಹೊರತು ಮೈಸೂರ ಜನರಿಗೆ ಸಮಾಧಾನವಾಗುವದಿಲ್ಲೆಂದು ತಿಳಿಸಿದರು.


ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ಸಿಗೆ ಸತ್ಯಾಗ್ರಹದ ಸನ್ಮಾನ್ಯ ಮಾರ್ಗದ ಹೊರತು ಬೇರೊಂದು ಮಾರ್ಗವುಳಿಯದ್ದನ್ನು ಉಲ್ಲೇಖಿಸಿ ಅದಕ್ಕೆ ಕಾರಣವಾದ ಘಟನೆಗಳನ್ನು ವಿವರಿಸಿದರು. ಕಾಂಗ್ರೆಸ್ಸೇತರರನ್ನೊಳಗೊಂಡು ಎರಡೂ ಶಾಸನ ಸಭೆಗಳ ಬಹುಸಂಖ್ಯಾಕ ಸಭಾಸದರು ತಮ್ಮ ಅಂಕಿತದಿಂದ ಮಹಾರಾಜರಿಗೆ ಹೊಣೆಗಾರ ರಾಜ್ಯಪದ್ಧತಿ ಸ್ಥಾಪಿಸಲು ಕೇಳಿಕೊಳ್ಳುವ ಮನವಿ ಕಳಿಸಿದ್ದರೂ ಶಾಸನ ಸಭೆಯಲ್ಲಿ ಸರಕಾರದ ಮಸೂದೆಗಳೆಲ್ಲ ನಿರಾಕರಿಸಲ್ಪಟ್ಟರೂ ಅವುಗಳ ಪರಿಣಾಮವೇನೂ ಆಗಿಲ್ಲ. ಮಹಾರಾಜರು ದಿವಾಣರಿಗೆ ಇತ್ತೀಚೆಗೆ ಸುಧಾರಣೆಗಳ ಕರಡು ಸಿದ್ಧಪಡಿಸಲು ಕೇಳಿರುವದು ನಿಜ. ಆದರೆ ಅದರಲ್ಲಿ ಹೊಣೆಗಾರ ರಾಜ್ಯಪದ್ಧತಿಯ ನಿರ್ದೇಶವಿಲ್ಲ. ದಿವಾಣರು ಹೊರಡಿಸಿದ ಪ್ರಶ್ನಾವಳಿಯು ಇನ್ನೂ ಹಳೆಯ ನೀತಿಯದಿದ್ದು ಅವರು ಈ ಮುದ್ದೆ ಮುಂದೆ ಒಗೆದು ವೇಳೆಗಳೆಯುವದರಲ್ಲಿರುವರು. ಕೊನೆಯಲ್ಲಿ ಅವರು ಯಾವತ್ತರಿಗೂ ಮತಭೇದ ಬದಿಗಿಟ್ಟು ಒಕ್ಕಟ್ಟಿನಿಂದ ಹೋರಾಡಲು ಕೇಳಿಕೊಂಡರು.

ದಕ್ಷಿಣ ಕನ್ನಡ

ತಾ. ೨೪ ಕ್ಕೆ ಜರಗಿದ ಜಿಲ್ಹಾ ಕಾಂಗ್ರೆಸ್ ಕಾರ್ಯಸಮಿತಿ ಸಭೆಯಲ್ಲಿ ಸೇವಾದಲ ಶಿಬಿರವನ್ನು ಉಡುಪಿಯಲ್ಲಿ ಎಪ್ರಿಲ ೨೫ ಕ್ಕೆ ಶ್ರೀ ಜಯಪ್ರಕಾಶರಿಂದ ಉದ್ಘಾಟನ ಮಾಡಿಸಿ ಮೇ. ೧೫ ರ ವರೆಗೆ ಜರಗಿಸಬೇಕೆಂದೂ ಸರ್ಕಲ ಕಾಂಗ್ರೆಸ ಸಮಿತಿ ಚುನಾವಣೆಗಳನ್ನು ಎಪ್ರಿಲ ೧ಕ್ಕೆ ಮುಂದರಿಸಬೇಕೆಂದೂ ಗೊತ್ತಾದುದಲ್ಲದೆ ಶ್ರೀ ಜಯಪ್ರಕಾಶರ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಸಮಿತಿಗಳು ಸಹಕರಿಸಬೇಕೆಂದು ವಿನಂತಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಹೆಯಲ್ಲಿ ಶ್ರೀ ಜಯಪ್ರಕಾಶರ ಕಾರ್ಯಕ್ರಮ ಈಗಾಗಲೆ ಸಿದ್ಧವಾಗಿದ್ದು ಅವರು ೨೪ ಮುಂಜಾನೆ ರೇಲು ಮಾರ್ಗವಾಗಿ ಕಾಸರಗೋಡಿಗೆ ಬಂದು ೧೧॥ ಗಂಟೆಗೆ ಮಂಗಳೂರು ಮುಟ್ಟುವರು. ಅಂದು ೩ ಗಂಟೆಗೆ ಸಮತಾವಾದಿ ಪಕ್ಷದ ಪ್ರಾಂತಿಕ ಅಧಿವೇಶನದ ಉದ್ಘಾಟನೆ ಮಾಡಿ ಸಂಜೆ ಕಟಪಾಡಿಗೆ ಬಂದು ಸಾರ್ವಜನಿಕ ಸಭೆಯಲ್ಲಿ ಮಾತಾಡುವರು. ಮರುದಿನ ಮುಂಜಾನೆ ಅಲ್ಲಿ ಸೇವಾದಲ ಶಿಬಿರದ ಉದ್ಘಾಟನೆ. ೮ ಗಂಟೆಗೆ ಉಡುಪಿಯಲ್ಲಿ ಸಾರ್ವಜನಿಕ ಸಭೆ ಮಧ್ಯಾಹ್ನ ೧॥ ಗಂಟೆಗೆ ಕುಂದಾಪುರಕ್ಕೆ ಹೋಗಿ ಅಲ್ಲಿಂದ ಕಾರ್ಕಳ ಮಾರ್ಗವಾಗಿ ಮಂಗಳೂರಿಗೆ ಬಂದು ಸಂಜೆ ಸಾರ್ವಜನಿಕ ಸಭೆಯಲ್ಲಿ ಮಾತಾಡುವರು. ತಾ. ೨೬ ಕ್ಕೆ ಮೈಸೂರಿಗೆ ಪ್ರಯಾಣ.

ಮೈಸೂರು ವಿಶ್ವವಿದ್ಯಾಲಯದ ಸಿನೇಟಿನ ಸಭೆಯಲ್ಲಿ (೧) ವಿಶ್ವವಿದ್ಯಾಲಯದ ನಾನಾ ಕಾಲೇಜುಗಳಲ್ಲಿ ಯೋಗಾಭ್ಯಾಸವನ್ನು ಜಾರಿಗೆ ತರಬೇಕು. (೨) ಮೈಸೂರು ನಗರದಲ್ಲಿ ಮಹಿಳೆಯರಿಗಾಗಿ ಒಂದು ಪ್ರಥಮಶ್ರೇಣಿಯ ಕಾಲೇಜು ತೆರೆಯಬೇಕು. (೩) ಮೈಸೂರು ವಿಶ್ವವಿದ್ಯಾಲಯದಲ್ಲಿ ಕಾಯಿದೆ ವಿಭಾಗವನ್ನು ಪ್ರಾರಂಭಿಸಬೇಕೆಂಬ ಗೊತ್ತುವಳಿಗಳಾಗಿವೆ.



ಮುಂಬಯಿ ಶೇರ ಪೇಟೆ

ತಾ. ೩

ಕಳೆದ ವಾರದ ವರದಿಯಾದ ನಂತರ ಇದಿವಾರ ಮುಂಬಯಿ ಶೇರ ಪೇಟೆ ಮುಚ್ಚಿಯೆ ಇದೆ. ವ್ಯಾಪಾರದಲ್ಲಿ ಪುನಃ ಮುಗ್ಗಟ್ಟು ಕಂಡು ಬಂದು ಪಾಲುಗಳು ಬಹಳ ಕುಸಿದವು. ಗುರುವಾರ (ತಾ. ೨೭) ಒಂದು ದಿನ ಸ್ವಲ್ಪ ಹೊತ್ತು ವ್ಯಾಪಾರದಲ್ಲಿ ಟಾಟಾ ಸ್ಟೀಲ ಡೆಫೆರ್ಡ ಪಾಲುಗಳು ೨೧೫೦-೦-೦ ವರೆಗೂ ಇಳಿದುಹೋದವು. ಅನೇಕ ವ್ಯಾಪಾರಿಗಳು ನಿಯಮ ವಿರುದ್ಧವಾಗಿ ಪಾಲುಗಳನ್ನು ಮಾರಿಬಿಟ್ಟದ್ದೂ ಇದಕ್ಕೆ ಕಾರಣವಾಯಿತು. ಇದಕ್ಕಾಗಿ ತಪ್ಪುಗಾರ ವ್ಯಾಪಾರಿಗಳನ್ನು ಸಂಘದವರು ದಂಡಿಸಿದ್ದಾರೆ. ಅಂದು ಪೇಟೆ ಮುಚ್ಚಿದ್ದು ಇನ್ನೂ ತೆರೆದಿಲ್ಲ.

ಚಿನ್ನ ಬೆಳ್ಳಿ

ಚಿನ್ನದ ಬೆಲೆ ಈ ವಾರದಲ್ಲಿ ಸ್ವಲ್ಪ ಏರಿಕೆ ತೋರಿಸಿದೆ. ೧೦೨-೬-೦ ಯಿಂದ ವಾಯಿದಾ ಚಿನ್ನ ರೂ. ೧೦೩-೮-೦ ರ ವರೆಗೂ ಹೋಗಿ ೧೦೩-೦-೦ ಕ್ಕೆ ಮರಳಿದೆ. ವಾಯಿದಾ ೧೦೨-೬-೦ ಬೆಳ್ಳಿ ೧೬೦-೮-೦ ಯಿಂದ ೧೬೨-೧೨-೦ ಕ್ಕೇರಿತು ವಾಯದಾ ೧೫೭—೧೪—೦.

ಅರಳೆಪೇಟೆ

ಕಳೆದ ವಾರದಲ್ಲಿ ಅರಳೆ ದರ ಬಹಳ ದಿನದ ಶಿಥಿಲತೆಯನ್ನು ಕಳೆದುಕೊಂಡು ಸುಧಾರಣೆ ತೋರಿಸಿದೆ. ಸರಕಾರವೂ ಕೆಲ ಸಾವಿರ ಗಂಟುಗಳನ್ನು ಕೊಂಡಿತಲ್ಲದೆ ನಿರ್ಯಾತಕ್ಕೂ ಅನುಮತಿ ಕೊಟ್ಟಿತು. ವಿದೇಶಗಳಿಂದ ಗಿರಾಕಿಗಳು ಸಿಗಬಹುದೆಂಬ ಆಸೆಯುಂಟಾಯಿತು. ಆದರಿಂದ ಕನಿಷ್ಠ ಧಾರಣೆಯಲ್ಲಿದ್ದ ಅರಳೆ (ಮೇ ವಾಯಿದೆ) ಸುಧಾರಿಸಿ ೪೪೦-೮-೦ ರ ವರೆಗೂ ಹೋಯಿತು. ಮತ್ತೆ ತುಸು ಹಿಂದೇಟುತಿಂದು ರೂ. ೪೩೮-೧೨-೦ ರಲ್ಲಿ ನಿಂತಿದೆ. ಜುಲೈ ೪೫೨-೬-೦ ಸಪ್ಟೆಂಬರ ೪೬೨-೪-೦.

ಎಣ್ಣೆ ಕಾಳು

ಶೇಂಗಾ	೧೫೩-೮-೦
ಅಗಸಿ	೨೭-೧೫-೦
ಅಗಸಿ ಎಣ್ಣೆ	೧೯-೪-೦

ಶಿವಮೊಗ್ಗೆ

ಅಡಿಕೆ ದೇಶಾವರ ನಂ ೧ ಮಣ ೧ಕ್ಕೆ	೫೧-೫೨
,, ,, ೨	೪೮-೫೦
ರಾಮ ಚಂದ್ರಾಪೂರ	೪೫-೪೮
ಅನ್ನಾವರಂ	೪೦-೪೪
ರಾಜ ಅಲವು	೪೬-೪೮
ನುಲಿ	೪೬-೪೮
ಬೆಟ್ಟ ವಂತಿ	೩೫-೩೬
ಬೆಟ್ಟ	೩೦-೩೩
ಮೆಣಸು	೩೩-೩೪

ಸಾಂಗಲಿ ಪೇಟೆ

ತಾ. ೨೩

ಅರಿಷಣ ಹೇರು	೮೮-೯೬
ಮೆಣಸಿನಕಾಯಿ ಹೇರು ,,	೧೩೦-೧೮೦
ಶೇಂಗಾ ಖಂಡಿ	೧೩೦

ಹುಬ್ಬಳ್ಳಿ ಪೇಟೆ

ಹೊಸ ಜಯವಂತ ಹತ್ತಿ	೨೬೦-೨೭೨
ಹಳೆ ,,	೨೭೦-೨೭೫
ಹೊಸ ಅಪ್ಲಂಡ ಹತ್ತಿ	೨೬೮-೨೭೨
ಹಳೆ ಜಿನ	೧೭೦-೧೭೫
ಡಬಲರೋಲ	೧೬೫-೧೭೫

ಬೆಂಗಳೂರು-ಮೈಸೂರು

ಧರ್ಮರತ್ನಾಕರ ಬಿ. ಎನ್. ಗೋಪಾಲರಾಯರು ಬೆಂಗಳೂರು ದಂಡಿನ ಪೋಲೀಸ ಅಧಿಕಾರಿಗಳಾದ ಸರ್ವೋತ್ತಮ ರಾವ್ ಮತ್ತು ಇತರರ ವಿರುದ್ಧ ತಂದ ದರೋಡೆ ಪ್ರಕರಣದಲ್ಲಿ ವಿಶೇಷ ಜಿಲ್ಹಾ ಮ್ಯಾಜಿಸ್ಟ್ರೇಟರು ತೀರ್ಪುಕೊಟ್ಟು ಗೋಪಾಲರಾಯರ ಹೊರತು ಉಳಿದವರ ಸಾಕ್ಷ್ಯಗಳು ಅವರ ಹೇಳಿಕೆಗಳನ್ನು ಪುಷ್ಟೀಕರಿಸುವದಿಲ್ಲವಾದುದರಿಂದ ಆರೋಪಿಗಳಿಗೆ ಸಂಶಯದ ಪ್ರಯೋಜನವನ್ನಿತ್ತು ಅವರನ್ನು ಬಿಡುಗಡೆ ಮಾಡಿದರು.

ಮೈಸೂರು ನಗರದಲ್ಲಿ ಸಭೆ ಮೆರವಣಿಗೆಗಳ ಮೇಲಿದ್ದ ಪ್ರತಿಬಂಧವನ್ನು ಎಪ್ರಿಲ ೧ ರಿಂದ ಮತ್ತೆರಡು ತಿಂಗಳ ಕಾಲದ ವರೆಗೆ ಬೆಳೆಸಲಾಗಿದೆ.

ಬೆಂಗಳೂರು ದಂಡಿನ ಪ್ರದೇಶವನ್ನು ಮೈಸೂರು ಸಂಸ್ಥಾನಕ್ಕೆ ಕೊಡುವ ಸಿದ್ಧತೆಗಳು ಈಗಾಗಲೆ ಭರದಿಂದ ನಡೆದಿವೆ. ದಂಡಿನ ಪ್ರದೇಶದ ಸರ್ವೇ ನಡೆಸಲು ಬೆಂಗಳೂರು ನಗರ ಸಭೆಯ ಎಗ್ಜಿಕ್ಯೂಟಿವ್ ಇಂಜಿನಿಯರರಾದ ಶ್ರೀ ಆರ್. ಮಾಧವರಾಯರನ್ನೂ ಸರ್ವೇ ಅಧಿಕಾರಿಗಳಾದ ಶ್ರೀ ಪಿ. ಎನ್. ಕೃಷ್ಣ ಸ್ವಾಮಿಯವರನ್ನೂ ಸರಕಾರ ನೇಮಿಸಿದೆ.

ಮೈಸೂರು ಸಂಸ್ಥಾನದ ವಿದ್ಯಾ ಇಲಾಖೆಯ ಡೆಪ್ಯೂಟಿ ಡಾಯರೆಕ್ಟರರಾದ ಶ್ರೀ ಅಬ್ದುಲ ವಹಾಬರು ಕೆಲ ದಿನಗಳ ಹಿಂದೆ ತುಮಕೂರು ಹಾಯಸ್ಕೂಲಿನಲ್ಲೂ ಮಲ್ಲೇಶ್ವರ ಹೈಯಸ್ಕೂಲಿನಲ್ಲಿಯೂ ಮಾಡಿದ ಭಾಷಣಗಳ ಬಗ್ಗೆ ವಿದ್ಯಾ ಇಲಾಖೆಯವರು ವಿಚಾರಣೆ ನಡೆಸಿರುವರೆಂದು ತಿಳಿಯುತ್ತದೆ. ಶ್ರೀ ವಹಾಬ ಅವರು ತಮ್ಮ ಭಾಷಣದಲ್ಲಿ ಹಿಂದೂ ಮತ್ತು ಕ್ರೈಸ್ತ ಧರ್ಮಗಳ ಬಗ್ಗೆ ಕೆಲ ಆಕ್ಷೇಪಕರ ಟೀಕೆಗಳನ್ನು ಮಾಡಿದ್ದಲ್ಲದೆ ಮುಸ್ಲಿಂ ಲೀಗಿನ ಪ್ರಚಾರಕರೆಂಬಂತೆ ಪಾಕಿಸ್ತಾನ ಬೇಡಿಕೆಯನ್ನು ಸಮರ್ಥಿಸಿ ಮಾತಾಡಿದ್ದರೆಂದೂ ವರದಿಯಾಗಿತ್ತು.

ಮೈಸೂರು ಕಾಂಗ್ರೆಸ್ ಕಾರ್ಯ ಸಮಿತಿ ಒಂದು ಗೊತ್ತುವಳಿಯಲ್ಲಿ ಮುಂಬರುವ ಜಿಲ್ಹಾ ಬೋರ್ಡ ಚುನಾವಣೆಗಳಲ್ಲಿ ಅಧಿಕಾರಿಗಳು ನಡೆಸಿರುವ ಕೈವಾಡವನ್ನು ಖಂಡಿಸಿದೆ. ಕೋಲಾರದಲ್ಲಿ ಅಧಿಕಾರಿಗಳು ಕಾಂಗ್ರೆಸ್ ಹುರಿಯಾಳುಗಳಿಗೆ ಪ್ರತಿಸ್ಪರ್ಧಿಗಳನ್ನು ನಿಲ್ಲಿಸಿರುವದಲ್ಲದೆ ಅವರ ವಿರುದ್ಧ ಪ್ರಚಾರ ನಡೆಸಿದ್ದಾರೆ. ಹಾಸನ ಜಿಲ್ಹಾಧಿಕಾರಿಗಳಂತೂ ಅತಿ ಕ್ಷುಲ್ಲಕ ಕಾರಣಗಳಿಗಾಗಿ ಕಾಂಗ್ರೆಸ್ ಹುರಿಯಾಳುಗಳ ನಾಮಪತ್ರವನ್ನು ತಿರಸ್ಕರಿಸಿದರು. ಆದರಿಂದ ಅಲ್ಲಿ ಪುನಃ ಚುನಾವಣೆಯಾಗಬೇಕೆಂದು ಕೇಳಲಾಗಿದೆ.

ವೀರಣ್ಣನ ವೀರತನ

[ದಲಕೆಯವರಿಂದ]

"ಗಾಡಿ ಸಿಗುವದಿಲ್ಲ ಅಂತ ಮಾಡಿದ್ದಿ."

"ಹೋ, ಇನ್ನೂ ತಾಸಗಟ್ಲೆ ಗೋಡೆಗೆ ಕೆಮ್ಮಣ್ಣು ಬಡೆದಂತೆ ಮುಖಕ್ಕ ಪೌಡರ ಬಳೆದುಕೊಳ್ಳೂತ ಕುಂತರ ಗಾಡಿ ಓಡಿ ನಿಮ್ಮನಿಗೇ ಬರತದ. ನಿಮ್ಮ ಚಿಗಪ್ಪನದೇನು ಗಾಡಿ!" ಎಂದು ಟೆವರು ಒರಸಿಕೊಳ್ಳುತ್ತ ಆ ತರುಣನು ಹೇಳಿದ. ಆಗಲೆ ಮಧ್ಯಾಹ್ನದ ಧಾರವಾಡ—ಹುಬ್ಬಳ್ಳಿ ಲೋಕಲ ಗಾಡಿಯು ಧಾರವಾಡ ಸ್ಟೇಶನ ಬಿಟ್ಟು ಹೊರಬಿದ್ದಿತ್ತು.

"ವೀರಣ್ಣಾ, ನಿನ್ನ ಅತ್ತರಬಾಟ್ಲಿ ಸಿಗಲಿಲ್ಲಂತ ಒಂದು ತಾಸು ಹುಡುಕ್ಯಾಡಲಿಕ್ಕ ಹಚ್ಚಿದಿ ನಮ್ಮನ್ನ. ಈಗ ನೋಡು ಅದೂ ಸಿಗಲಿಲ್ಲ. ನಮಗೂ ತಡ ಆತು," ಎಂದು ಹತ್ತು ವರ್ಷದ ಶಾಂತೆಯು ಆ ತರುಣನ ಮೇಲೆ ತಿರುಗಿ ಆರೋಪ ಹೊರಿಸಿದಳು.

"ಯಾಕ ಶಾಂತಿ, ನಾ ಅತ್ತರ ಹಚಗೊಂಡೀನಂತ ನಿನಗೇನು ಸೆಡವು? ಸಿಕ್ಕಿದ್ದರ ನಿನಗೂ ಇಷ್ಟಿಗೆ ಬೆಣ್ಣಿ ತೊಡೆದಾಂಗ ತೊಡೆದು ಬಿಡತಿದ್ದೆ! ಸಾಕು, ನಿಮ್ಮ ಪೌಡರ ಡಬ್ಬಿ ಸಿಗದ್ದಕ ತಡಾ ಆಯಿತು. ಅದನ್ಯಾಕ ಬಚ್ಚಿಡತಿ?"

"ಛೀ ತಂದ ಕೊಡಲಿಲ್ಲ ವೀರಣ್ಣಾ ನಮ್ಮ ಅಕ್ಕನ ಪೌಡರ ಡಬ್ಬಿ. ನನ್ನ ಡಬ್ಬಿ ಎಲ್ಲಾ ಬಳೆದು ತೆರವು ಮಾಡ್ಯಾಳ. ಹುಬ್ಬಳ್ಳ್ಯಾಗ ನನಗೊಂದು ಅಕಿಗೊಂದು ಡಬ್ಬಿ ಕೊಡಸಾಕ ಬೇಕು."

ಇದು ವರೆಗೆ ಇವರ ಮಾತನ್ನ ಕೇಳುತ್ತ ಕುಳಿತಿದ್ದ ಇನ್ನೊಬ್ಬ ಮುಗ್ಧೆಯು ತಲೆಯ ಮೇಲಿನ ಸೆರಗನ್ನು ಜಾರಿಸಿ ಸರಿಪಡಿಸಿಕೊಳ್ಳುತ್ತ ಶಾಂತೆಯನ್ನು ತನ್ನ ಕಡೆಗೆ ಸೆಳೆದುಕೊಂಡು ಕುಳ್ಳಿರಿಸಿಕೊಂಡಳು.

"ಇವರೇನು ನನಗ ಬೇಕಂತ ತರತಾರೇನು ಸ್ನೋ, ಪೌಡರ! ತಮಗೆ ದಿನಕ್ಯಾರು ಸಾರಿ ಬೇಕಂತ ತಂದು ಇಟ್ಟಿರತಾರ," ಎಂದು ವೈಯಾಕ್ತಿಕ ಹಚ್ಚಿನ ಬಿಂಕದಿಂದಲೆ ನುಡಿದಳು.

"ಹೌದ ಪಾರಕ್ಕ. ನಿನಗೇನು ಪಾವಡರ ಬೇಕಾಗಿಲ್ಲ. ನಮ್ಮ ಮನ್ಯಾಗ ನೀನೇ ಚೆಲುವಿ ಅಂತ ಅಪ್ಪಯ್ಯ ಹೇಳತಿರತಾನ ಪಾವಡರ ಹಚ್ಚಿದರ ನಿನ್ನ ಮುಖಾ ಅಸಂಯು ಕಾಣತದ."

"ಸಾಕು. ಅಕ್ಕನ್ನ ಮೇಲಗಟ್ಟಿಕೊಂಡು ಬರಬ್ಯಾಡ. ನಮಗೇನ ಮಾಡಾಕ ಪಾವಡರು ಸ್ನೋ! ಅವಲ್ಲಾ ಹೊಸಾಬಟ್ಟಿ ಸುತ್ತಗೊಂಡು ತಿರೆದಾಡೂ ಹೆಣ್ಣಗೇನ," ಎಂದು ಕಿಸೆಯಲ್ಲಿದ್ದ ಸಿಗಾರ ಕೇಸನ್ನು ತೆಗೆದು ಸಿಗಾರೆಟ್ಟನ್ನು ಹೊತ್ತಿಸಿದ. ಮೈಸೂರ ಸುಗಂಧಿ ಅಡಿಕಬುಡಿ ಚೀಟಿಯನ್ನು ಕಾಗದಸಮೇತ ಬಾಯಿಗೆ ಹಾಕಿದುಕೊಂಡ. ತನ್ನ ಮಡದಿಗೂ ಅವಳ ತಂಗಿ ಶಾಂತೆಗೂ ಒಂದೊಂದು ಚೀಟಿ ಕೊಟ್ಟ. ತನ್ನ ಬಾಯಲ್ಲಿಯ ಚೀಟಿಯ ಕಾಗದವನ್ನು ಹೊರತ್ಯಗುಳಿ ಸಿಗರೇಟಿನ ಝುರುಕಿ ಎಳೆದು ಕಣ್ಣುಗಳನ್ನು ಅರೆಮುಟ್ಟಿ ಆನಂದವನ್ನು ಪ್ರದರ್ಶಿಸಿದ.

"ಅಂತ ಹೇಳಿ ಅವತ್ತ ಸಾಹೇಬರು ನಿಮ್ಮ ಕಚೇರಿಗೆ ಬಂದಾಗ ಅಂಗಡಿ ತಪಾಸಣೆ ಮುಗಿಸಿಕೊಂಡು ಇತ್ತ ಬಂದಿದೇನು? ಸೀದಾ ಅಂಗಡ್ಯಾಗಿನ ಕಾಳಿನ ಧೂಳ ಎಷ್ಟು ಬಡದೈತಿ ಅಂತ ಕೇಳಿದರಲ್ಲಾ ವೀರಣ್ಣ," ಎಂದು ಶಾಂತೆಯು ಮುಯ್ಯ ತೀರಿಸಿಕೊಂಡಳು. ಪಾರ್ವತಿ ತನ್ನ ತಂಗಿಯ ಬೆನ್ನು ತಟ್ಟಿದಳು. ಶಾಂತೆಗೂ ತನ್ನ ಉತ್ತರದ ಬಗ್ಗೆ ಹೆಮ್ಮೆ ಉಂಟಾಗಿತ್ತು.

ಇವರ ಈ ಸಲ್ಲಾಪವನ್ನು ಆಲಿಸುತ್ತ ಆ ಇಂಟರ ಡಬ್ಬಿಯಲ್ಲಿ ಕುಳಿತುಕೊಂಡವರೆಂದರೆ ಇನ್ನೊಬ್ಬರೆ ಇದ್ದರು. ಅವರ ಖಾಕೀ ಸಮವಸ್ತ್ರದ ಮೇಲಿಂದ ಅವರು ಫೌಜದಾರರೆಂದು ಹೇಳಬಹುದಾಗಿತ್ತು. ಅವಸರವಸರದಲ್ಲಿ ಗಾಡಿ ಬಿಡುವ ಸಮಯಕ್ಕೆ ಗಾಡಿಯಲ್ಲಿ ತೂರಿಕೊಂಡು ಬಂದು ಈ ಪರಿವಾರವನ್ನು ಅವರೊಮ್ಮೆ ನಿರೀಕ್ಷಿಸಿ ಪುನಃ ತಮ್ಮ ಕೈಯಲ್ಲಿದ್ದ ಟಾಯಿಮ್ಸು ಪತ್ರಿಕೆ ಓದುವದರಲ್ಲಿ ತೊಡಗಿದ್ದರು. ಆದರೆ ಶಾಂತೆಯು ಸೀದಾ ಅಂಗಡಿ, ಪಾವಡರ ಎಂದು ನುಡಿದ ಕೂಡಲೆ ಇವರು ಸೀದಾ ಕಚೇರಿಯಲ್ಲಿಯ ಕಾರಕೂನನನ್ನು ಇನ್ನೊಮ್ಮೆ ನೋಡಬೇಕೆಂದು ಮುಖವೆತ್ತಿ ಆ ಅಕ್ಕತಂಗಿಯರ ವಾಗ್ಬಾಣಗಳನ್ನು ಎದುರಿಸುತ್ತಿರುವ ವೀರಣ್ಣನನ್ನು ಆಪಾದಮಸ್ತಕ ನಿರೀಕ್ಷಿಸಿಕೊಂಡು ಪುನಃ ತಮ್ಮ ವಾಚನಕಾರ್ಯದಲ್ಲಿ ಮಗ್ನರಾದರು.

"ಅಕ್ಕಾ, ವೀರಣ್ಣನ ಈ ಕರೇ ಸರ್ಜ ಕೋಟು ತೆಗೆದು ಮಾಸಿದ ಕೋಟು ಒಳಗ ಇಟ್ಟಿಲ್ಲ ಟ್ರಂಕಿನಾಗ. ಆ ಕೋಟಿನಾಗೇನಾರ ಇತ್ತೊ ಏನೋ ಅತ್ತರ ಬಾಟ್ಲಿ? ವೀರಣ್ಣನ ಕಿವ್ಯಾಗ ಬಾವಲಿಲ್ಲದ ಚಂದ ಕಾಣುದೇ ಇಲ್ಲ," ಎಂದಳು ಶಾಂತೆ.

ಅತ್ತರಮಯವಾದ ಹತ್ತಿ ಗುಳಿಗೆ ವೀರಣ್ಣನ ಕರಿ ಕಿವಿಯಲ್ಲಿ ಮುತ್ತಿನಂತೆ ಕಾಣುತ್ತಿತ್ತಾದ್ದರಿಂದ ಶಾಂತೆ ಅಣಕವಾಡಿದಳು. ಅಲ್ಲದೆ ಮೋರೆಯ ಕರಿತನವನ್ನು ಮರೆಮಾಚಲು ಸ್ನೋ ಪಾವಡರಗಳ ಸಾರಣೆಯ ನಂತರ ತಮ್ಮ ಮಾವನಿಗೆ ಈ ಸುಗಂಧ ಲೇಪವೂ ಬೇಕು ಎಂಬುದನ್ನು ಶಾಂತೆ ಚನ್ನಾಗಿ ಅರಿತಿದ್ದಳು. ಆದ್ದರಿಂದ ವೀರಣ್ಣ ಸಿಗಾರೇಟಿನಲ್ಲೀಗ ಕಾಣದಂತಿದ್ದರೂ ಪಾರ್ವತಿಯು ಈ ವಿಷಯದಲ್ಲಿ ಅಷ್ಟು ಆಸಕ್ತಿ ವಹಿಸಿರದಿದ್ದರೂ ಶಾಂತೆಯು ಪುನಃ ಅದನ್ನೆತ್ತಿಕೊಂಡಳು. ಹಿಂದಕ್ಕೊಮ್ಮೆ ಅತ್ತರ ಬುಡ್ಡಿ ಕಳೆದಾಗ ವೀರಣ್ಣನು ಊಟ ಬಿಟ್ಟು ಹೋಗಿ ಅದನ್ನು ಕೊಂಡುಕೊಂಡು ಬಂದ ನಂತರವೇ ಊಟ ಮಾಡಿದ್ದು ಶಾಂತೆಗೆ ಗೊತ್ತಿತ್ತು. ಈಗಲಾದರೂ ಅವನು ಇನ್ನೊಂದು ಶೀಸೆಯನ್ನು ಕೊಂಡು ತರುವವನೆ. ಆದರೆ ತೀರ ಅಯತ್ತ ಸಮಯದಲ್ಲಿ ತನ್ನ ಅತ್ತರ ಶೀಸೆ ಕಳೆದು ಹೋಯಿತೆಂದು ತಿಳಿದದ್ದರಿಂದ ನಿರುಪಾಯನಾಗಿ ಹಾಗೇ ಬಂದಿದ್ದ. ಇಂದೇ ಹುಬ್ಬಳ್ಳಿಗೆ ಬರಬೇಕಾಗಿದ್ದು ಅವನು ಗಾಡಿ ತಪ್ಪಿಸಿಕೊಳ್ಳಲು ಸಿದ್ಧನಿರಲಿಲ್ಲ.

"ಹೌದಲ್ಲ ಶಾಂತಿ, ಆ ಕೋಟಿನ ನೆಪ್ಪ ಇರಲಿಲ್ಲ ನೋಡು. ಇಲ್ಲೇ ಮ್ಯಾಲೇ ಐತಿ ಟ್ರಂಕಿನಾಗ. ಸ್ವಲ್ಪ ತಗದಾರ ನೋಡಬಾರದ?" ಎಂದು ಟ್ರಂಕಿನ ಕೀಲಿಕೈಯ ಬೆಳ್ಳಿಯ ಸರಪಣಿಯನ್ನು ಅವಳಿಗಿತ್ತಳು.

"ಸಿಕ್ಕಿಲ್ಲ. ಇರವಲ್ಲದ್ಯಾಕ ಹೋಗ. ಈಗ್ಯಾಕ ಟ್ರಂಕ ತೆಗೀತಿ. ಸಾಮಾನೆಲ್ಲ ಚೆಲ್ಲಾಪಿಲ್ಲಿ ಆಗತಾವ."

"ನಿಮ್ಮ ಕಡಿಂದ ಆಡಿಸಿಕೊಳ್ಳುವಾರ ತಪ್ಪೈತಿ. ಶಾಂತೀ, ತೆಗಿಯಮ್ಮ ಟ್ರಂಕು."

"ಬಂದಿನ ಇಲ್ಲಾದ್ರೇನು ತಪ್ಪು? ಗಾಡ್ಯಾಕ್ಯಾಗ ಟ್ರಂಕ ಬಿಚ್ಚೋದು? ಮನಿಗೆ ಹೋಗಿಂದ ನೋಡಿದರಾತು. ನೋಡಿದ್ಯಾ ಅಮರಗೊಳ್ಳ ಸಹಿತ ದಾಟಿ ಹೋತು. ಇನ್ನೇನು ಈಗ ಬರತದ ಹುಬ್ಬಳ್ಳಿ."

"ಹೌದ ವೀರಣ್ಣ. ಏನು ತುಡಗಿನ ಸಾಮಾನ ಇಟ್ಟೀರೇನು? ನಮಗ ತಿಳೀದಾಂಗ ಪಾವಡರ ಡಬ್ಬಿ ತಂದಿಟ್ಟು ಹುಬ್ಬಳ್ಳ್ಯಾಗ ನಮ್ಮ ಮೋಜ ಮಾಡಬೇಕಂತೀಯಾ?"

"ಅದಕ್ಯಾಕ ಇಷ್ಟು. ಆ ಕೋಟಿನ್ಯಾಗ ಇದ್ದಂಗ ಧ್ಯಾಸ ಐತಿ ನನಗ. ತೆಗಿ ನೋಡೋಣ."

"ಯಾವ ಕೋಟಿನಾಗರ ಇರಲಿ; ಅಲ್ಲೇ ಹಾಲಗೇರ್ಯಾಗ ಬಿದ್ದಿರಲಿ. ಈಗ್ಯಾಕ ಅದರ ಪಂಚೇತಿ. ಸುಮ್ಮ ಕುಂಡ್ರಾಕಿಲ್ಲ. ಶಾಂತಿ ಚಾಕಲೇಟು ಬೇಕೊ ಬ್ಯಾಡೊ ನಿನಗ?"

"ಅಯ್ಯ! ಏನ ತುಡಗಲೆ ಟ್ರಂಕಿನಾಗ ಅಕ್ಕ ಒಯ್ಯುವದ್ಹಂಗ ಮಾಡತಾರಲ್ಲ ಟ್ರಂಕ ತೆಗಿಯಾಕ. ನಿಮ್ಮ ಅತ್ತರ ಹುಡುಕ್ಯಾಕ ನೋಡಿದರ ಎಷ್ಟು ಬಿಂಕ ನಮ್ಮವ್ವಾ."

ಶಾಂತೆಯು ಕೆಳಗೆ ಕುಳಿತು ಇನ್ನು ಕೀಲಿ ತೆಗೆಯಬೇಕೆಂದು ಟ್ರಂಕನ್ನು ಸ್ವಲ್ಪ ಮುಂದೆಳೆದಳು. ವೀರಣ್ಣ ರಭಸದಿಂದ ತನ್ನ ಬೂಟಗಾಲನ್ನು ಟ್ರಂಕಿನ ಮೇಲೆ ಇಕ್ಕರಿಸಿದ. ಶಾಂತೆಯು ಕಿರಚಿಕೊಂಡಳು. ಅವಳ ಕೈ-ಬೆರಳು ಟ್ರಂಕಿನ ಬುಡದಲ್ಲಿ ಸಿಕ್ಕಿತ್ತು. ಅವನು ಕಾಲನ್ನೆತ್ತಿದ ಕೂಡಲೆ ಶಾಂತೆ ತನ್ನ ಕೈ ಹಿಂತೆಗೆದುಕೊಂಡು ಬೆರಳನ್ನು ಬಾಯಲ್ಲಿಟ್ಟುಕೊಂಡಳು.

"ಏನದು ಹುಡಿಗೆಯ ಕೈಮುರೀತಿದ್ದಿರಲ್ಲಾ. ಇಲ್ಲಿ ತಕ್ಕಾರ ಶಾಂತಿ ಕೀಲಿಕೈ. ನಾನೇ ನೋಡತೀನಿ. ಇಲ್ಲೆ ಕುಂಡ್ರ ನೀ," ಎಂದು ಪಾರ್ವತಿಯು ತಂಗಿಯ ಕೈಯಿಂದ ಬೆಳ್ಳಿ ಸರಪಣಿ ಇಸಿದುಕೊಂಡಳು.

"ಏ, ಮಹಾರಾಯತಿ ನನಗೇನ ಬೇಕಾಗಿಲ್ಲ ನಿನ್ನ ಅತ್ತರು. ಹುಬ್ಬಳ್ಳ್ಯಾಗ ಬೇಕಾದ್ರ ನಾನ ತಂದ ಕೊಡತೀನಿ ನಿನಗ ಬೇಕಾದಷ್ಟು. ಈಗ ಯಾಕ ಸುಮ್ಮನ ಟ್ರಂಕ ತಗೀತಿ?"

"ನಾ ಏನ ಬಿಡಾಕ್ಹಿಲ್ಲ. ಅಕ್ಕಿ ಅವಲಕ್ಕಿ ತಂದಿಲ್ಲ. ಬೆಲ್ಲ ತಂದಿಲ್ಲ ಕಳ್ಳಪೇಟ್ಯಾಂದು ಅಂದರ ನನ್ನ ಟ್ರಂಕ ತೆರೆದು ನೋಡಲಾಕ ಯಾರ ಹೆದರಿಕೆಯೇನು?"

"ಅವು ಇದ್ದರಾದರೂ ಏನ ಮಾಡತಾವ. ನಮ್ಮ ರಾಜ್ಯನ ಅದು. ಇರಲಿ ಬಿಡಲ್ಲ. ಅದರ ಬೇಕಾದರ ಗಾಡೀ ಇಳಿದ ಕೂಡಲೆ ಸಿನೇಮಾ ಪ್ರೋಗ್ರಾಂ ಆಗಲಿ, ಈಗಷ್ಟು ಸಮ್ಮನ ಕುಂಡ್ರು."

ಈ ತರುಣ ದಂಪತಿಗಳ ಕಾಮೇರುತ್ತಿದ್ದ ಸಂಭಾಷಣೆಯನ್ನು ಕೇಳುತ್ತ ಕುಳಿತಿದ್ದ ಫೌಜದಾರನಿಗೆ ಸ್ವಾಭಾವಿಕವಾಗಿ ನಗೆ ಬಂತು. ಆ ಟ್ರಂಕು ತೆರೆಯುವದಕ್ಕಾಗಿ ಆ ಮುಗ್ಧೆಯ ಹಟ. ತೆರೆಯಗೊಡಲಾರೆನೆಂದು ಪಟಕೊಟ್ಟ ವೀರಣ್ಣನ ಮಾತುಗಳು, ಅಲ್ಲದೆ ಸೀದಾಪದಾರ್ಥಗಳನ್ನು ಕಳ್ಳತನದಿಂದ ಸಾಗಿಸುವ ಮಾತಿನ ಉಲ್ಲೇಖ. ಇವೆಲ್ಲ ಫೌಜದಾರನ ಉತ್ಸುಕತೆಯನ್ನು ಕೆರಳಿಸಿದ್ದವು. ರೋಗಿಗಳಿಗೆ ಗಂಜಿಗೆ ಅಕ್ಕಿಯಿಲ್ಲೆಂದು ಒಂದು ಸೇರು ಅಕ್ಕಿಯನ್ನು ಒಯ್ಯುತ್ತಿರುವ ಬಡಹಳ್ಳಿಗರನ್ನು ಹಿಂಸೆಗೆ ದಂಡ ವಿಧಿಸುತ್ತಿರುವ ಕಾಲ. ಕದ್ದವನು ತನ್ನ ಅಪರಾಧವನ್ನು ತಾನೊಪ್ಪಿಕೊಳ್ಳದಿರುವಂತೆ ಇವರ ಈ ಸಂಭಾಷಣೆಯ ಮೇಲಿಂದ ಆ ಟ್ರಂಕಿನಲ್ಲಿ ಅಕ್ಕಿಯಾಗಲಿ ಇಲ್ಲವೆ ಹುಬ್ಬಳ್ಳಿಗಿಂತ ಧಾರವಾಡದಲ್ಲಿ ಅಗ್ಗವಾಗಿ ದೊರೆಯುತ್ತಿದ್ದ ಅವಲಕ್ಕಿಯಾಗಲಿ ಇರಬೇಕು ಎಂದು ಫೌಜದಾರನ ಗ್ರಹಿಕೆಯಾಯಿತು. ಆ ಚಿಕ್ಕ ಕಬ್ಬಿಣದ ಕೋಟಿಯೊಳಗೆ ಭದ್ರವಾಗಿ ಅಡಗಿರುವದೇನು? ಅದೂ ಈ ತರುಣೆಗೆ ತಿಳಿಯದಂತೆ ಅವನು ಅಡಗಿಸಿಟ್ಟಿರುವ ವಸ್ತುವೆಂಥದೆಂಬುದನ್ನು ಕಾಣುವ ಕುತೂಹಲ ಫೌಜದಾರನನ್ನು ಕೆಣಕಿತು. ಅಕ್ಕಿ ಇಲ್ಲವೆಂದು ಅವಳು ಹೇಳುತ್ತಿದ್ದಾಳೆ. ಹೋಗಲಿ ಇಷ್ಟು ಸ್ವಾರಸ್ಯಮಯವಾದ ಸಂಭಾಷಣೆಗೆ ಕಾರಣವಾದ ವಸ್ತು ಯಾವದು ಎಂಬದನ್ನು ಅರಿತುಕೊಳ್ಳುವ ಮಾನವಸಹಜವಾದ ಉತ್ಕಂಠೆ ಫೌಜದಾರನಲ್ಲಿ ಮೂಡಿತ್ತು.

"ಸಿನೇಮಾ ಪ್ರೋಗ್ರಾಂ ಇಷ್ಟರಂತು ನಿಮಗ ಮುಂಚೆ ಬೇಕು ಅತ್ತರು."

"ಫಸ್ಟ ಕ್ಲಾಸ ತಿಕೀಟು ತೆಗೆಯುವದು. ಇಂಟರವಲದಾಗ ಕೋಲ್ಡ್ರಿಂಕ, ತಿರುಗಿಬರುವಾಗ ಟಾಂಗಾ." —

"ಹೌದು. ಅದೆಲ್ಲಾ ಥಾಟಹೇಳಾಕ ಹೊರಟ್ಯೊ ಮಾತು ಮರೆಸಬೇಕಂತೀರೇನು? ಅದು ಆಗಾಕಿಲ್ಲ. ಕಾಲತಗೀರಿ ಆಕಡೆ," ಎಂದು ಪಾರ್ವತಿಯು ಟ್ರಂಕನ್ನು ಇನ್ನೂ ಸ್ವಲ್ಪ ಮುಂದಕ್ಕೆ ಎಳೆದಳು. ವೀರಣ್ಣನ ಬೂಟಗಾಲು ಕೆಳಕ್ಕೆ ಜರಿಯಿತು. ಅವಳು ಕೊರಳು ಕೊಂಕಿಸಿ ಬೆಳ್ಳಿಯ ಸರಪಣಿಯಲ್ಲಿಯ ಬೀಗದ ಕೈಯಿಂದ ಟ್ರಂಕಿನ ಕೀಲಿಯನ್ನು ತೆರೆಯುತ್ತಿದ್ದಾಗ ಮೋಡಗಳ ಮಧ್ಯದಿಂದ ಇಣಿಕಿಹಾಕುವ ಚಂದ್ರನಂತಿದ್ದ ಅವಳ ಮುಖವನ್ನು ನಿರುಕಿಸುತ್ತಿದ್ದ ವೀರಣ್ಣನಿಗೆ ತನಗುಂಟಾದ ಸೋಲಿನ ಅರಿವಾದಂತೆ ತೋರಲಿಲ್ಲ. ಅವಳ ಮುಖದಲ್ಲಿ ಮುಗುಳು ನಗೆ ಮೂಡಿತ್ತು.

ಕಿರ್ರೆಂದು ಟ್ರಂಕು ತೆರೆದೊಡನೆ ಕೈಗನ್ನಡಿ, ಬಾಚಣಿಕೆ ಮುಂತಾದ ಸಾಮಾನುಗಳೊಡನೆ ಒಂದು ಸುಂದರವಾದ ರಟ್ಟಿನ ಡಬ್ಬಿಯೂ ಹೊರಕ್ಕೆ ಬಿದ್ದಿತು. ಅದೇ ಆಕರ್ಷಣೀಯವೆನಿಸಿದ್ದರಿಂದ ಪಾರ್ವತಿಯು ಎತ್ತಿಕೊಂಡು ಹೊರಳಿಸಿ ನೋಡತೊಡಗಿದಳು. ಆವರಣದ ತೆಳ್ಳ ಕಾಗದದೊಳಗಿಂದ ಅದರ ಮೇಲಿನ ಬರಹ ಸ್ಪಷ್ಟವಾಗಿ ಓದಿಕೊಳ್ಳ[illegible] ಬರುವಂತಿತ್ತು. ಶಾಂತೆಯೂ ಈ ಹೊಸ ಡಬ್ಬಿ ಯಾವುದೆಂದು ನೋಡಲು ಧುಮುಕಿದಳು. ಆದರೆ ಪಾರ್ವತಿ ಚಪಲತೆಯಿಂದೆದ್ದು "ಇದಕ್ಯಾಗಿ ನೀವು ಇಷ್ಟೊಂದು ಅವಾಂತರ ಮಾಡಿದ್ದು. 'ಸಂತತಿ ನಿಯಮನ' ಹೋಗಲಿ ಹಾಳಾಗಿ" ಎಂದು ಆ ಡಬ್ಬಿಯನ್ನು ಕಿಟಕಿಯೊಳಗಿಂದ ಹೊರಗೆಸೆದು ಬಿಟ್ಟಳು.

"ಅಯ್ಯ ಅಕ್ಕ, ಎಂಥ ಚಂದ ಡಬ್ಬಿ ಒಗೆದು ಬಿಟ್ಟಲ್ಲ. ಆಟಕ್ಯಾದರೂ ಬರುತಿತ್ತು," ಎಂದಳು ಶಾಂತೆ.

ಗಾಡಿಯು ಹುಬ್ಬಳ್ಳಿ ಸ್ಟೇಶನು ಹೊಕ್ಕಿದ್ದರಿಂದ ಫೌಜದಾರನೂ ವೀರಣ್ಣನ ವೀರತನಕ್ಕೆ ನಗೆ ನಗುತ್ತ ಎದ್ದು ಹೊರಟ.

ವಿಭಜನೆಯಿಂದ ಹಿಂದೂ ಬಂಗಾಲಕ್ಕೆ ಲಾಭ

(೧ ನೇ ಪುಟದಿಂದ)

ಅರ್ಥಾತ್ ಹಿಂದುಸ್ತಾನದ ಒಟ್ಟು ಔದ್ಯೋಗಿಕ ಶಕ್ತಿಯಲ್ಲಿ ನೂರಕ್ಕೆ ೩೩ ರಷ್ಟು ಬಂಗಾಲದಲ್ಲಿದೆ. ಅದರಲ್ಲಿ ೩೦ ರಷ್ಟು ಪಶ್ಚಿಮ ಬಂಗಾಲದಲ್ಲಿಯೂ ಉಳಿದ ೨.೭ ರಷ್ಟು ಮಾತ್ರ ಪೂರ್ವ ಬಂಗಾಲದಲ್ಲಿಯೂ ಇವೆ.

ಇದರ ಪರಿಣಾಮ ಈ ಎರಡು ವಿಭಾಗಗಳ ಮೇಲೆ ಹೀಗಾಗುವದು:

❖ ಆದಾಯ ತೆರಿಗೆಯಲ್ಲಿ ನೂರಕ್ಕೆ ೮೫ ಪಶ್ಚಿಮ ಬಂಗಾಲದಿಂದ ದೊರಕುವದು;

❖ ಸಣಬಿನ ನಿರ್ಯಾತ ತೆರಿಗೆಯಲ್ಲಿ ೧೦೦ಕ್ಕೆ ೯೫ ರಷ್ಟು ಅದರ ಕೈಸೇರುವದು;

❖ ಮೋಟಾರಗಳ ಮೊದಲಾದ ಚಿಲ್ಲರೆ ಕರಗಳಲ್ಲಿ ನೂರಕ್ಕೆ ೭೫ ರಷ್ಟು ಇಲ್ಲಿಂದಲೆ ದೊರೆಯುವದು.

❖ ನೂರಕ್ಕೆ ೯೩ ರಷ್ಟು 'ಏಕ್ಸೈಜ' ವ್ಯಾಪಾರ ಸುಂಕ ಕಲಕತ್ತೆಯ ಬಂದರಕ್ಕೂ ಉಳಿದ ೭ ಅಂಶ ಮಾತ್ರ ಚಿತಗಾಂವ (ಮುಸ್ಲಿಂ ಬಂಗಾಲ) ಕ್ಕೂ ಸಿಗುತ್ತದೆ. ಅರ್ಥಾತ್ ಸದ್ಯದ ಲೆಕ್ಕದಂತೆ ೧೭.೧೭ ಕೋಟಿ ಪಶ್ಚಿಮ ಬಂಗಾಲಕ್ಕೂ ೧.೫೩ ಕೋಟಿ ಪೂರ್ವ ಬಂಗಾಲಕ್ಕೂ ಸಿಗುವವು.

ಇದಲ್ಲದೆ ಪೂರ್ವ ಬಂಗಾಲಕ್ಕಿಂತ ಹೆಚ್ಚು ಕೃಷಿಯೋಗ್ಯ ಪಡಭೂಮಿ ಪಶ್ಚಿಮ ಬಂಗಾಲದಲ್ಲಿದೆ (೧೧೬೮ ಸಾವಿರ ಎಕರೆ). ಇನ್ನೊಂದು ೧೬೩೫೦೦೦ ಎಕರೆ ಕೃಷಿ ಭೂಮಿ ಪಡಬಿದ್ದದೆಯೆಂದೂ ಮೇಲೆ ಹೇಳಿದ ಲೇಖಕರು ತೋರಿಸಿ ಕೊಟ್ಟಿದ್ದಾರೆ.

ಬಂಗಾಲದ ಮುಸ್ಲಿಂಲೀಗ್ ಮಂತ್ರಿಗಳು ಕೆಲ ದಿವಗಳಿಂದ ಬಂಗಾಲ ಸ್ವತಂತ್ರವಾದರೆ ಅದು ಒಳ್ಳೆ ಸಮೃದ್ಧ ಪ್ರಾಂತವಾಗುವದೆಂದು ಕೊಚ್ಚಿಕೊಳ್ಳತೊಡಗಿದ್ದಾರೆ. ಅವರ ಮುಖ್ಯ ಲಾಭದ ಲೆಕ್ಕಗಳು ಕೇಂದ್ರಕ್ಕೆ ಸೇರುವ ಆದಾಯ ಮತ್ತು ತತ್ಸಂಬಂಧ ತೆರಿಗೆಗಳಿಗೂ ಸುಂಕಗಳಿಗೂ ಸಂಬಂಧಿಸಿವೆ. ಆದರೆ ಮೇಲೆ ತೋರಿಸಿದ ಅಂಕೆ ಸಂಖ್ಯೆಗಳನ್ನು ನೋಡಿದರೆ ಅವರ ನಿಜವಾದ ಮುಸ್ಲಿಂ ಬಂಗಾಲದ ಉತ್ಪನ್ನ ಎಷ್ಟು ಕೆಳಮಟ್ಟದಲ್ಲಿದೆಯೆಂದು ತಿಳಿಯುವದು. ಸ್ವತಂತ್ರ ಮುಸ್ಲಿಂ ಬಂಗಾಲವಲ್ಲಿ ಹಿಂದೂ ಭಾಗದ, ಅರ್ಥಾತ್ ಹಿಂದುಗಳ ಶ್ರಮದ ಫಲದಿಂದ ಮುಸ್ಲಿಂ ಧರ್ಮಾಂಧರು ತಮ್ಮ ಮುಂಗಡ ಪತ್ರಿಕೆಯ ತೆರಪಾಯಿಯನ್ನು ಮುಚ್ಚಿಸಬಲ್ಲರಲ್ಲದೆ ತಮ್ಮ ಸ್ವಂತ ಶ್ರಮದ ಫಲದಿಂದಲ್ಲ. ಈ ಮಾತನ್ನೆಲ್ಲ ಮನಗಂಡೋ ಏನೋ ಅವರೀಗ ಮುಸ್ಲಿಂ ಬಂಗಾಲದ ಮಾತನ್ನು ಬಿಟ್ಟು ಕೊಟ್ಟು ಸ್ವತಂತ್ರ ಅಖಂಡ ಬಂಗಾಲದ ಪಲ್ಲವಿಯನ್ನೆತ್ತಿದ್ದಾರೆ. ೪೦ ವರ್ಷ ಹಿಂದೆ ಹಿಂದುಗಳು ಹಾಡಿ ಫಲಭೋಗಿಸಿದ ಈ ಪಲ್ಲವಿಯಿಂದಲೇ ಈಗ ಮತ್ತೊಮ್ಮೆ ಅವರನ್ನು ವಂಚಿಸಲು ಸುಹ್ರವರ್ದಿ ಪ್ರಭೃತಿಗಳಿಗೆ ಸಾಧ್ಯವಾಗಲಿಕ್ಕಿಲ್ಲ. ಸ್ವತಂತ್ರ ಬಂಗಾಲಕ್ಕೆ ಅಮೇರಿಕನ್ ಮಾದರಿಯ ಘಟನೆಯನ್ನು ರಚಿಸಬೇಕೆಂದು ಸುಹ್ರವರ್ದಿಯವರ ಸಹಯೋಗಿಗಳಲ್ಲೊಬ್ಬರು ಹೇಳಿದ್ದರಿಂದಲೂ ಹಿಂದುಗಳು ಮೋಸ ಹೋಗಲಾರರು. ಲೀಗ್ ಆಡಳಿತೆಯ ರೀತಿ ನೀತಿಗಳು ಅವರಿಗೀಗಾಗಲೆ ತಿಳಿದು ಹೋಗಿವೆ. ಪಾಕಿಸ್ತಾನ ಅಥವಾ ಗುಂಪೀಕರಣದಂಥ ಕೇಂದ್ರವನ್ನು ದುರ್ಬಲಗೊಳಿಸುವ ಯೋಜನೆಗಳಿರುವಷ್ಟು ಕಾಲ ಅವರು ಈ ಟೊಳ್ಳು ವಾಗ್ದಾನಗಳನ್ನು ನಂಬಲಾರರು. ಬಿಹಾರದ ನಿರಾಶ್ರಿತರನ್ನು ತಂದು ಪೂರ್ವ ಬಂಗಾಲದಲ್ಲಿ ನೆಲೆಗೊಳಿಸುವದೇ ಮೊದಲಾದ ಉಪಾಯಗಳು ಪಶ್ಚಿಮ ಬಂಗಾಲದ ಹಿಂದೂ ಶಕ್ತಿಯನ್ನು ತಗ್ಗಿಸುವ ಉದ್ದೇಶವುಳ್ಳವೆಂದು ಮಗುವಿಗೂ ತಿಳಿಯುತ್ತದೆ. ಈ ಶತಮಾನದ ಚತುರ್ಥಭಾಗ ಪ್ರಾರಂಭವಾಗುವ ಮೊದಲೇ ಕಳೆದ ಶತಮಾನದ ಮಧ್ಯದಲ್ಲಿದ್ದಂತೆ ಬಂಗಾಲದ ಮುಸ್ಲಿಮರು ಅಲ್ಪಸಂಖ್ಯಾಕರಾಗುವರೆಂದು ಪ್ರಜಾವೃದ್ಧಿ [illegible] ಊಹಿಸುತ್ತಾರೆ. ಇಂಥ ಸಂಭಾವ್ಯತೆಯನ್ನು ತಪ್ಪಿಸಲು ಮುಸ್ಲಿಂಲೀಗು ಯಾವ ಕುಟಿಲೋಪಾಯಗಳನ್ನೂ ಅನುಸರಿಸಬಹುದೆಂದು ಅವರಿಗೆ ಗೊತ್ತು. ಹಿಂದೂ ಜಿಲ್ಲೆಗಳನ್ನು ಬೇರ್ಪಡಿಸಿದರೆ ಜಿನ್ನಾರ ಪಾಕಿಸ್ತಾನ ದುರ್ಬಲವಾಗಬಹುದು, ದಿವಾಳಿ ಕಂಪನಿಯೂ ಆಗಬಹುದು. ಆದರೆ ಧರ್ಮದ ಆಧಾರದಿಂದ ರಾಷ್ಟ್ರಗಳನ್ನು ರಚಿಸಲು ಹೊರಟ ಅವರು ಅದರ ಬೆಲೆ ತೆರಲೇ ಬೇಕು. ಇಲ್ಲವೆ ಹೆಚ್ಚು ವಿವೇಕ ತೋರಬೇಕು. ೪೫ ಶತಾಂಶದಷ್ಟು ಹಿಂದುಗಳ ಪ್ರಬಲ ವಿರೋಧವುಳ್ಳ ಪ್ರಾಂತದಲ್ಲಿ ಸುಗಮವಾಗಿ ರಾಜ್ಯವಾಳಿ "ತಮ್ಮ ಧ್ಯೇಯಗಳಿಗನುಸಾರವಾಗಿ ಬಾಳಲು" ಪಾಕಿಸ್ತಾನವಾದಿಗಳಿಗೂ ಸಾಧ್ಯವಿಲ್ಲ. ಇದು ಹೆಚ್ಚು ಜಾತೀಯ ಕ್ಷೋಭದಲ್ಲಿ ಪರಿಣಮಿಸೀತು. ಆದ್ದರಿಂದ ಪಾಲ ಮಾಡಿಕೊಳ್ಳಲೇ ಬೇಕಾದರೆ ಸರಿಯಾದ ರೀತಿಯಲ್ಲಿ ಪಾಲು ಮಾಡಿಕೊಳ್ಳೋಣ. ಹೊರತು ಮತ್ತೊಮ್ಮೆ ಕಳರಾರು ಬರುವಂತೆ ಮಾಡೋಣಬೇಡ.



ಜ್ಯೋತಿಷಿ:—ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಎಪ್ರಿಲ ೭ ರಿಂದ ೧೩ ರ ವರೆಗೆ

ಮೇಷ

ನಿಮ್ಮ ಪ್ರಕೃತಿಗೆ ಕ್ಲೇಶ ಆದರೆ ಮಕ್ಕಳಿಗೆ ಸ್ವಲ್ಪ ಮಾನಸಿಕ ಕ್ಲೇಶ. ಪ್ರಾಪಂಚಿಕ ತೊಂದರೆ ಬಹಳ ಕಡಿತ ದಿಂದ ಆದರೆ ಸ್ತ್ರೀ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಸಾಧಾರಣವೆ. ಆದರೆ ಪ್ರತಿಷ್ಠೆ ಉತ್ತಮ. ಮಿತ್ರಸುಖ ಅನುಕೂಲ. ಶಿರಕಳ ವೆಚ್ಚ ಬಹಳ ಮತ್ತು ಮನೆತನದ ಮಾತುಗಳನ್ನು ಗೊತ್ತು ಮಾಡಿದ ಸಮಯಕ್ಕೆ ಮಾಡಲು ಮರೆಯುವದರಿಂದ ಗೊಂದಲ ಮತ್ತು ನಿರಾಶೆ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ವಾದದಲ್ಲಿ ಸ್ಪರ್ಧೆ ಯಲ್ಲಿ ತೊಂದರೆ ಮತ್ತು ವೆಚ್ಚ ಜಾಸ್ತಿ ಆದರೆ ಕೊನೆಗೆ ಅನಾಯಾಸಕ ಸ್ಥಿತಿ. ಅಶ್ವಿನಿಯು ಕೊನೆಯು ೩ ಮತ್ತು ಭರಣಿಯು ೧ ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೭ ೮, ೧೨, ೧೩, ಅನುಕೂಲ.

ವೃಷಭ

ನಿಮ್ಮ ಮತ್ತು ಹೆಂಡತಿಯು ಪ್ರಕೃತಿ ಉತ್ತಮ ಆದರೆ ಒಬ್ಬರೊಬ್ಬರ ಮನಸ್ಸಿನಲ್ಲಿ ಸ್ವಚ್ಛತೆ ಕಡಿಮೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಚೆನ್ನಾಗಿ ದ್ದರೂ ಯೋಚಿಸಿದ ಒಂದು ಕೆಲಸದಲ್ಲಿ ಸಿಕ್ಕುವ ಯಶಸ್ಸಿನಲ್ಲಿ ಕಿಂಚಿತ್ ನ್ಯೂನತೆ ಉಳಿಯುವದರಿಂದ ಮನಸ್ಸು ಅಸ್ವಸ್ಥ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಮತ್ತು ಮಿತ್ರರಿಂದ ವಿಶೇಷ ವಿಜಯ ಸಿಕ್ಕುವಂತೆ ಸಹಾಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸುಯಶಸ್ಸು. ಆದರೂ ಶತ್ರು ಪುನಃ ಚಿಕಿತ್ಸಮನ್ಮಾಡಿಸುವ ಧೋರಣ ವಹಿಸುವನು. ಪ್ರವಾಸಾದಿ ಕೆಲಸ ಹಿತದ್ದು. ರೋಹಿಣಿಯು ಕೊನೆಯು ೧ ಮತ್ತು ಮೃಗಾದ ೧ ನೇ ಚರಣಕ್ಕೆ ಹೆಚ್ಚು ಅನುಕೂಲ ತಾ. ೯, ೧೦, ೧೪ ಉತ್ತಮ.

ಮಿಥುನ

ಪ್ರಕೃತಿ ಉತ್ತಮ ಆದರೆ ಹೆಂಡತಿ ಕಾಲಕಾಲಕ್ಕೆ ಮನಸಿಗೆ ಬಂದಂತೆ ನಿಂದಿಸುವಳು. ಟೀಕೆ ಮಾಡುವಳು. ಇದರಿಂದ ಮನಸ್ಸಿಗೆ ಬಹಳ ಉದ್ವೇಗ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕಸುಖ ಅಷ್ಟಕ್ಕಷ್ಟೇ. ಉದ್ಯೋಗದಲ್ಲಿ ಲೌಕಿಕದಲ್ಲಿ ಹೆಸರು ದೆಸೆ ಬಹಳ ಆದರೆ ಪ್ರಗತಿ ಮತ್ತು ಲಾಭ ಕಡಿಮೆಯೇ. ಮಿತ್ರತ್ವದಲ್ಲಿ ವಿರೋಧ. ಮಕ್ಕಳಲ್ಲಿ ಒಬ್ಬರ ಉನ್ನತಿ ಬಹಳ ಆದರೆ ಆ ಬಗ್ಗೆ ಜನರಲ್ಲಿ ವಿಪರೀತ ಸಂಶಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿನ್ನೆಡುವದು. ಆಸ್ತಿಯಲ್ಲಿ ಸ್ವಲ್ಪ ಹೆಚ್ಚಳ ಇಲ್ಲವೆ ಸಾಧಾರಣ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಆರ್ದ್ರಯು ಕೊನೆಯು ೩ ಪುನರ್ವಸುವಿನ ೧ ನೇ ಚರಣಗಳಿಗೆ ಹೆಚ್ಚು ತೊಂದರೆ. ತಾ. ೭, ೮, ೧೩, ಅನುಕೂಲ.

ಕರ್ಕ

ಪ್ರಕೃತಿ ಉತ್ತಮ. ಮಕ್ಕಳಲ್ಲಿ ಉನ್ನತಿ. ಎಲ್ಲಿ ವಿಷ ... ಪ್ರಾಪಂಚಿಕ ... ಒಕ್ಕ... ... ಯು ೧೫ ವಿರುದ್ಧ ೩೯ ಮತಗಳಿಂದ ನಿರಾಕೃತವಾಯಿತು.

ಅಧ್ಯಕ್ಷರಾದ ಶ್ರೀ ಕೆ. ಚಂದ್ರ... ... ...ಯು ಕೆಲ ಹಳೆಯ ವಸ್ತುಗಳಿಗೆ ಹೊಸ ರೂಪಾಂತರ ...ಡುವ ಯೋಗ. ಉದ್ಯೋಗದಲ್ಲಿ ಪ್ರಗತಿ ಹೆಚ್ಚು. ಆದರೆ ಲಾಭ ಮತ್ತು ಪ್ರತಿಷ್ಠೆ ಸಾಧಾರಣವೆ. ದ್ರವ್ಯ ಇಲ್ಲವೆ ವಸ್ತುಗಳ ಅವಚಿತ ಲಾಭವಾಗುವ ಸಂಭವ. ಮಿತ್ರರಲ್ಲಿ ಶುಭಸಂಗತಿಗಳು ಆದರೆ ಬಂಧುಗಳಲ್ಲಿ ಕೆಲ ಅಶುಭ ಸಂಗತಿ ಸಂಭವಿಸುವ ಅಂಜಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಪತ್ರವ್ಯವಹಾರ ಕ್ಕಿಂತ ಭೆಟ್ಟಿ ಆದರೆ ಭೆಟ್ಟಿಗಿಂತ ಪ್ರವಾಸ ಹೆಚ್ಚು ಅನುಕೂಲ. ಪುಷ್ಯದ ಕೊನೆಯು ೩ ಮತ್ತು ಆಶ್ಲೇಷಾದ ೧ ನೇ ಚರಣಗಳಿಗೆ ತೊಂದರೆಯಿಂದ ಯಶಸ್ಸು. ತಾ. ೯, ೧೦, ೧೩ ಅನುಕೂಲ.

ಸಿಂಹ

ಪ್ರಕೃತಿಗೆ ಬಹಳ ಕ್ಲೇಶ ಹೆಂಡತಿಗೂ ಕ್ಲೇಶ ಆದರೆ ಉಭಯತರಲ್ಲಿ ಒಬ್ಬರೊಬ್ಬರ ಬಗ್ಗೆ ತುಚ್ಛತೆಯು ಮಾತಃಕಲೆ ನಡತೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ. ಸ್ಥಾವರದಲ್ಲಿ ಸ್ವಲ್ಪ ಹೆಚ್ಚಳ. ಕೆಲವೊಂದು ಪಾರಮಾರ್ಥಿಕ ಕೃತ್ಯಗಳು. ಉದ್ಯೋಗದಲ್ಲಿ ಪ್ರಗತಿ ಕಡಿಮೆ ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ವೆಚ್ಚ ಹೆಚ್ಚು ಆದರೆ ಆದರ ಲ್ಲಿಯು ಹೇತು ಸಾಧ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿನ್ನೆಡುವದು. ಪ್ರವಾಸ ತೊಂದರೆಯದು ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಮಘಾದ ಕೊನೆಯು ೩ ಮತ್ತು ಪೂರ್ವಾದ ೧ ನೇ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೭, ೮, ೧೨, ೧೩ ಅನುಕೂಲ.

ಕನ್ಯಾ

ಪ್ರಕೃತಿಯಲ್ಲಿ ಆರೋಗ್ಯದ ಹೆಚ್ಚಳ. ಆದರೆ ಸ್ತ್ರೀಪ್ರಾಪಂಚಿಕ ತೊಂದರೆ ವಿಪರೀತ. ಹೆಂಡತಿ ಪ್ರತಿ ಯೊಂದು ಕೆಲಸದಲ್ಲಿ ಅಡ್ಡಕಡ್ಡಿ ಬಿಡೆಯುವಳು. ನಡಿಕೆ ಒಬ್ಬ ಅನ್ಯ ಸ್ತ್ರೀಯಿಂದ ನಿಮ್ಮದು ದೊಡ್ಡ ದ್ವೇಷ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಕಡಿಮೆ. ಆದರೆ ಪ್ರತಿಷ್ಠೆ ಬಹಳ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಮಿತ್ರ ಸುಖ ಉತ್ತಮ. ಸ್ಥಾವರದಲ್ಲಿ ಒಮ್ಮೆಲೆ ಹಾನಿ. ಪ್ರವಾಸಾದಿ ಕೆಲಸ ತೊಂದರೆಯದು. ಹಸ್ತಾದ ಕೊನೆಯು ೩ ಮತ್ತು ಚಿತ್ರಾದ ೧ ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೭, ೮, ೯, ೧೨ ಅನುಕೂಲ.

ತುಲಾ

ನಿಮ್ಮ ಪ್ರಕೃತಿ ಅನುಕೂಲ ಆದರೆ ಸ್ತ್ರೀ ಸಹ ಕುಟುಂಬದಲ್ಲಿಯು ಅನೇಕ ಜನರಿಗೆ ಶಿರಕಳ ವಿಕಾರ ದಿಂದ ಆದರೆ ಒಂದೇ ಸಲವೆ ಕೆಟ್ಟದ್ದು. ಎಲ್ಲ ವಿಷಯ ಗಳಲ್ಲಿ ಪ್ರಾಪಂಚಿಕ ತೊಂದರೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ, ಆದರೆ ಲಾಭ ಕಡಿಮೆಯೇ. ಮಿತ್ರತ್ವದಲ್ಲಿ ದೊಡ್ಡ ವಿರೋಧ. ಪುಣ್ಯ ಪುರುಷರ ದರ್ಶನ ಅಕಲ್ಪಿತವಾಗಿ ಸಂಭವಿಸುವ ಯೋಗ. ವಾದ ದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳು ಪರಾಜಯ ಹೊಂದಿದರೂ ಸ್ವತಃದ ಲಾಭ ಕಡಿಮೆಯೆ. ಸಾಧಿಸ ದಂತಹ ಕೆಲಸ ಮಾಡುವ ಬಗ್ಗೆ ನಿರರ್ಥಕ ವಲ್ಗನೆ ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಅನು ಕೂಲ. ಸ್ವಾತಿಯು ಕೊನೆಯು ೩ ಮತ್ತು ವಿಶಾಖಾದ ೧ ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೭, ೮, ೧೨ ಅನುಕೂಲ.

ವೃಶ್ಚಿಕ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಅಲ್ಪ ಸ್ವಲ್ಪ ಇದ್ದುದೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅಷ್ಟಕ್ಕಷ್ಟೆ. ಆದರೆ ಭಾವೀ ಹಿತಕ್ಕೆ ಪೋಷಕವಾದ ಬಹಳ ಘಟನೆಗಳು. ಮಕ್ಕಳಿಂದ ವ್ರಾತ್ಯತನದ ವರ್ತನವಾಗುವದರಿಂದ ಜನರಿಂದ ಕಿವಿಹಿಂಡಿಸಿ ಕೊಳ್ಳಬೇಕಾಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಮಾನ ಸ್ಥಿತಿ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಅನುರಾಧೆಯ ಕೊನೆಯು ೩ ಮತ್ತು ಜ್ಯೇಷ್ಠಾದ ೧ ನೇ ಚರಣಗಳಿಗೆ ತೊಂದರೆ ಹೆಚ್ಚು. ತಾ. ೯, ೧೦, ೧೧, ೧೨ ಅನುಕೂಲ.

ಧನು

ಸ್ವತಃಕ್ಕೆ ಬಹಳ ಕ್ಲೇಶ ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಸ್ಥಾವರದಲ್ಲಿ ಬಹಳ ಹಾನಿ. ಆದರೆ ಮನೆ ಇಲ್ಲವೆ ಹೊಲಗಳ ಹೊಸ ಸಂಗ್ರಹ. ಉದ್ಯೋಗದಲ್ಲಿ ಲಾಭ ಉತ್ತಮ. ಆದರೆ ಪ್ರಗತಿ ಮತ್ತು ಪ್ರತಿಷ್ಠೆ ಸಾಧಾರಣವೆ. ಪ್ರತಿಯೊಂದು ಕೆಲಸದಲ್ಲಿ ಎಂಡನೆಯವರ ಜೋಗಸೆಯಿಂದ ನೀರು ಕುಡಿಯುವ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿ ಬಹಳ ಅನುಕೂಲತೆ. ಮಿತ್ರಸುಖ ಉತ್ತಮ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಮೂಲಾದ ಕೊನೆಯು ೩ ಮತ್ತು ಪೂರ್ವಾಷಾಢಾದ ೧ ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೭, ೮, ೧೨, ೧೩ ಅನುಕೂಲ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಪ್ರಿಯ ಜನರ ಸಹವಾಸ. ಆದರೆ ಮನೆಯಲ್ಲಿಯ ನೋಕರರು ಆಳುಗಳು ಮುಂತಾದ ಆಶ್ರಿತ ಜನರಿಂದ ಅಸಭ್ಯವರ್ತನ ಕಂಡುಬರುವದು. ... ಸಾರ್ವಜನಿಕ ಸಭೆ ಮಧ್ಯಾಹ್ನ ೧॥ ಗಂಟೆಗೆ ಕುಂದಾಪು ... ...ದಲ್ಲಿ ಪ್ರಗತಿ ರಕ್ಕೆ ಹೋಗಿ ಅಲ್ಲಿಂದ ... ಮತ್ತು ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ ಆದರೆ ಶತ್ರುಗಳು ನಿಮ್ಮ ಪಕ್ಷದಲ್ಲಿ ಒಡಕು ಹುಟ್ಟಿಸುವ ಗತ್ತು ನಡೆಸುವರು. ಮಿತ್ರಸುಖ ಉತ್ತಮ. ಪ್ರವಾಸ ಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನು ಕೂಲ. ಶ್ರವಣಾದ ಕೊನೆಯು ೩ ಮತ್ತು ಧನಿಷ್ಠಾದ ೧ ನೆ ಚರಣಕ್ಕೆ ತೊಂದರೆ ಕಡಮೆ. ತಾ. ೭, ೮, ೯, ೧೦ ಅನುಕೂಲ.

ಕುಂಭ

ಸ್ವತಃಕ್ಕೆ ಮತ್ತು ನಿಮ್ಮ ಹೆಂಡತಿಗೆ ಅಲ್ಪ ಸ್ವಲ್ಪ ಕಾಯಿಲೆ ಇದ್ದುದೆ. ಆದರೆ ಮಕ್ಕಳಲ್ಲಿ ಉನ್ನತಿ ಮತ್ತು ಪ್ರಾಪಂಚಿಕ ಸುಖ ಸರ್ವಸಾಧಾರಣ ಅನು ಕೂಲ. ಪ್ರತಿಯೊಂದು ಕೆಲಸದಲ್ಲಿ ಅಲ್ಪಾಯಾಸದಿಂದ ಯಶಸ್ಸು. ಸ್ಥಾವರದಲ್ಲಿ ಹೆಚ್ಚಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವೆಚ್ಚ ಮತ್ತು ತೊಂದರೆ ಹೆಚ್ಚು. ಆದರೆ ಕೊನೆಗೆ ಅನುಕೂಲತೆ. ಪ್ರವಾಸಾದಿ ಕೆಲಸ ಸುಖಕರ. ಶತತಾರಕೆಯು ಕೊನೆಯು ೩ ಮತ್ತು ಪೂರ್ವಾಭಾದ್ರಪದದ ೧ ನೇ ಚರಣಕ್ಕೆ ತೊಂದರೆ ಯಿಂದಲೆ ಯಶಸ್ಸು. ತಾ. ೭, ೮, ೧೨, ೧೩ ಅನು ಕೂಲ.

ಮೀನ

ನಿಮ್ಮ ಪ್ರಕೃತಿ ಉತ್ತಮ. ಆದರೆ ಹೆಂಡತಿಯದು ಕೆಡುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಬಹಳ ಹೆಚ್ಚು. ಪ್ರತಿಷ್ಠೆ ಉತ್ತಮ ಮತ್ತು ಲಾಭ ತುಂಬ. ಮಿತ್ರಸುಖ ಒಳ್ಳೇದು. ಅರ್ಥ ವಿಪರ್ಯಾಸವಾಗುವಂತೆ ಮಾತಾಡು ವ ಇಲ್ಲವೆ ಬರೆಯುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿನ್ನೆಡುವದು. ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಉತ್ತರಾಭಾದ್ರ ಪದದ ಕೊನೆಯು ೩ ಮತ್ತು ರೇವತಿಯ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೯, ೧೦, ೧೧, ೧೨ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ-ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿಸಿ ಪ್ರಕಟವಾಯಿತು

ಅವಿನಯದ ಪರಮಾವಧಿ

(ಹಿಂದಿನ ಪುಟದಿಂದ)

ಗಳಿಗಿಂತ ಮುಸಲ್ಮಾನರೂ ಬಲು ಕಡಿಮೆ ಎಂದು ಜಿನ್ನಾ ಸಾಹೇಬರೂ ಒಪ್ಪಲೇ ಬೇಕು. ಇದೀಗ ಅವಿನೀತ ವೃತ್ತಿಯ ಪರಾಕಾಷ್ಠೆ, ಮದ್ದಿಲ್ಲದ ರೋಗ. ಇಂಥ ಅವಿನೀತ ನಾಯಕರಿರುವುದ ಕ್ಕಿಂತಲೂ ಅನಾಯಕವಾಗಿರುವುದೇ ಲೋಕಕ್ಕೆ ಮೇಲು ಎಂಬುದನ್ನು ಚಾಣಕ್ಯನು ಸೂಚಿಸಿ ದುದು. ಪಾಕಿಸ್ತಾನದೊಳಗೆ ಮತಾನುಸಾರ ವಾಗಿ ಉಭಯ ಸ್ಥಾನಗಳಾದರೆ ಅಶಾಂತಿ ತಲೆ ದೋರೀತು ಎನ್ನುವ ಅಲ್ಲಿಯ ಮುಸ್ಲಿಂ ಬಂಧು ಗಳ ಮತ್ತು ಇಲ್ಲಿಯ ಮುಸ್ಲಿಂ ಲೀಗಿನ ಹೇಳಿಕೆ ನ್ಯಾಯವೇ ಸರಿ. ಶ್ರೀ ಜಿನ್ನಾ ಸಾಹೇಬರಿಗೆ ಆ ಧಾರ್ಮಿಕ ಬುದ್ಧಿ ಹಿಂದುಸ್ತಾನದ ವಿಷಯದ ಲ್ಲಿಯೂ ಏಕೆ ಮೂಡುವುದಿಲ್ಲ? ನಿದ್ದೆ ಬಾರದೆ, ಬಂದಿದೆ ಎನ್ನುವವನನ್ನು ಎಚ್ಚರಿಸಲು ಸಾಧ್ಯ ವಿಲ್ಲ. ಶ್ರೀ ಜಿನ್ನಾ ಸಾಹೇಬರಿಗೆ ಅಖಂಡ ಹಿಂದುಸ್ತಾನವೆಂದರೆ "ಕಿವಿಯೊಳಗೆ ಚೇಳು ಕಡಿದಂತೆ." ಅದೇ ಸಮಯದಲ್ಲಿ ಆ ಪಾಕಿಸ್ತಾನ ದಿಂದ ಪೂರ್ವ ಸಮುದ್ರವೇ ಗಡಿಯಾದ ಬಂಗಾ ಳದ ವರೆಗೆ "ಅಖಂಡ ಪಾಕಿಸ್ತಾನ"ವನ್ನು ರೂಪಾಂತರದಿಂದ ನೆಲೆಗೊಳಿಸಬೇಕಾಗಿದೆ.

೩.

ಇದೀಗ ಅವಿನೀತ ವೃತ್ತಿಯ ಪರಾ ಕಾಷ್ಠೆ. ವಿನೀತ ವರ್ಗದ ರಾಜನಾಗಲಿ ರಾಜಕೀಯ ವರ್ಗದ ನಾಯಕನಾಗಲಿ, "ಆತ್ಮವತ್ಸರ್ವಭೂತಾನಿ" ಎಂದರೆ 'ತನ್ನಂತೆ ಅನ್ಯನು' ಎಂಬ ಭಾವನೆಯನ್ನು ಉಂಡ ರಗಿಸಿರಬೇಕು. ಹಾಗಿಲ್ಲದೆ "ಇನ್ನೊಬ್ಬನ ಅವಸ್ಥೆ ಹೇಗಾದರೂ ಆಗಲಿ, ತನ್ನ ಹಿಡಿತ ಗಟ್ಟಿ ಯಾದರೆ ಸಾಕು" ಎಂದೆಣಿಸಲೇಬಾರದು. ಒಂದು ವೇಳೆ ಕಾಂಗ್ರೆಸ್ಸು ಪಾಕಿಸ್ತಾನ ಸೂಚನೆ ಯನ್ನು ಅಂಗೀಕರಿಸಿತು, ಎಂದೇ ಹೇಳುವ. ಹಿಂದೂ ಮಹಾಸಭೆ, ರಾಷ್ಟ್ರೀಯ ಪಕ್ಷದ ಮುಸ ಲ್ಮಾನರು, ಕ್ರೈಸ್ತರು, ಸೀಖರು ಅದನ್ನಂಗೀಕ ರಿಸುವರೆ? "ಹಿಂದೂ ಕ್ರೈಸ್ತರು ಅಬಲರು, ಸೀಖರು ಸಂಖ್ಯಾಮಾನದಲ್ಲಿ ಕಡಿಮೆಯಾದುದ ರಿಂದ, ಅಸಾಧ್ಯವಲ್ಲ" ಎಂದಾಗಿರಬಹುದು ಶ್ರೀ ಜಿನ್ನಾರ ಅಭಿಲಾಷೆ. ಇಡೀ ಭಾರತಭೂಮಿ ಯಲ್ಲಿ ತಮಗೆ ಭಿನ್ನ ಮತದ ಮುಸಲ್ಮಾನರೂ ಸೇರಿ ೧೦ ಕೋಟಿ ಮುಸಲ್ಮಾನರಿದ್ದಾರೆ ಎಂಬ ಜಿನ್ನಾರ ಹೇಳಿಕೆಯನ್ನೇ ಒಪ್ಪಿಕೊಳ್ಳುವ. ಇಡಿ ಭಾರತ ಭೂಮಿಯ ಮಾನದಿಂದ ನಾಲ್ಕನೆ ಒಂದಂಶದವರೆಂದು ಮುಸಲ್ಮಾನರಿಗೆ ಪಾಕಿಸ್ತಾನ ವನ್ನು ಕೊಡಲೊಪ್ಪಿದರೆ, ಬಂಗಾಲ ಪಂಜಾಬುಗ ಳಲ್ಲಿ ಅರ್ಧಕ್ಕಿಂತ ಸ್ವಲ್ಪವೇ ಕಡಿಮೆಯಾದ ಇತ ರರಿಗೆ ಭಿನ್ನ ಸ್ಥಾನಗಳನ್ನೀಯದಿರುವುದು ಯಾವ ಧರ್ಮಾನುಸಾರವಾಗಿ? ಶ್ರೀ ಜಿನ್ನರೂ ಅವರ ಅನುಯಾ... ಅವರನ್ನು ಬಿಡ... ಮಾಡಿದರು. ...ಯಗಳೂ ಭಾಷಣದಲ್ಲಿ, ಬರೆಹದಲ್ಲಿ ಹಿಂದುಸ್ತಾನವನ್ನು "ಸಬ್ ಕಾಂಟಿನೆಂಟ್" (Sub Continent) ಅಥವಾ 'ಉಪಖಂಡ' ಎಂದೇ ಉಚ್ಚರಿಸುತ್ತಾರೆ. ಈ ಉಚ್ಚಾರದ ಅರ್ಥಸಾರ ಬಹುಶಃ ಹೀಗಿದೆ: ಹಿಂದುಸ್ತಾನವೆಂ ದರೆ ಏಶ್ಯಾ ಖಂಡದ ಉಪಾಂಗ. ಏಶ್ಯಾ ಖಂಡ ದೊಳಗಿನದೇ ಆದ ಅರಬಿ ದೇಶದಿಂದ ಬಂದ ಮುಸಲ್ಮಾನರು ಇಲ್ಲಿ ನೆಲಸಿದವರಾದುದರಿಂದ ಈ ದೇಶದ ಇತರರಂತೆ ನಾವೂ ಇಲ್ಲಿ ಹಕ್ಕುದಾ ರರು ಎಂದಾಗಿರಬಹುದು. ಆಗಲಿ ಸಂತೋಷ. ಆದರೆ ಹೀಗಿರುವಲ್ಲಿ ಪಾಕಿಸ್ತಾನ ಅಖಂಡವಾಗಿ ರುವುದು ಹೇಗೆ ನ್ಯಾಯವೋ ಹಾಗೆ ಹಿಂದುಸ್ತಾ ನವೂ ಅಖಂಡವಾಗಿರಲೇಬೇಕು. ಅದನ್ನು ಮುಸ್ಲಿಂ ಲೀಗಿನವರಲ್ಲದ, ಎಲ್ಲ ವರ್ಗದವರೂ ಮತೀಯರೂ ಅಂಗೀಕರಿಸಿ ಘಟನಾ ಸಮಿತಿ ಯಲ್ಲಿ ಬರೆದಿರುತ್ತಾರೆ. ಮುಸ್ಲಿಂಲೀಗಿನವರು ಮಾತ್ರ ಅವಿನೀತತೆಯಿಂದ ವಿರುದ್ಧರಾದರೆ, ಉಳಿದ ವಿನೀತ ವರ್ಗದವರು ಗಲಭೆಗೊಳ್ಳಬೇ ಕಾಗಿಲ್ಲ.

"ಬಹುಜನವಿರುದ್ಧ ಮೇಕಂ ನಾನುವರ್ತೇತ"

॥ಸೂತ್ರ ೪೩॥ ಚಾಣಕ್ಯ ಸೂತ್ರ.

ಬಹು ಜನರಲ್ಲಿ ನಗೆತನವನ್ನೇ ಬೆಳಸುವ ಒಬ್ಬ ನನ್ನು ಅನುಸರಿಸಬಾರದು. ಇಲ್ಲಿ ತೋರುವ "ನಾನುವರ್ತೇತ" ಎಂಬ ಕ್ರಿಯಾಪದದಿಂದ ಅಂಥ ನಾಯಕನನ್ನು ಅನುಸರಿಸಬಾರದು ಎಂ ಬುದು ವಿದಿತವಾಗುತ್ತಿದೆ. ಈ ಸೂತ್ರದಿಂದ ಬಹುಜನ ವರ್ಗ ವಿರುದ್ಧವಾದ ಒಂದು ವರ್ಗ ವನ್ನೂ ಅನುಸರಿಸಬಾರದು ಎಂಬ ಸೂಚನೆ ತಾನಾಗಿ ಹೊಳೆಯುತ್ತದೆ. ಯಾಕೆಂದರೆ ಅವಿ ನೀತ ನಾಯಕನು ತನ್ನ ಮದೋದ್ಧತ ವರ್ತನೆ ಯಿಂದ ಸರ್ವರನ್ನೂ ಹುಲ್ಲಿಗೆಣೆಯಾಗಿ ಗಣಿಸಿ ಕಡೆಗೆ, ತನ್ನ ಅನುಯಾಯಿಗಳೆಲ್ಲರನ್ನೂ ಕಷ್ಟಕ್ಕೆ ಗುರಿಯಾಗುವಂತೆ ಮಾಡುವುದು ನಿಶ್ಚಯ. ಅದರಿಂದಲೆ ಚಾಣಕ್ಯನು ಮೇಲಿನ ಸೂತ್ರವನ್ನು ರೇಖಿಸಿದ್ದಾನೆ. ಮುಸ್ಲಿಂ ಶಕಕಾಲವಂತಿರಲಿ, ಕ್ರಿಸ್ತನಿಗಿಂತಲೂ ಹಿಂದಿನ ಹಿಂದುಸ್ತಾನದ ಚಾಣ ಕ್ಯನ ರಾಜನೀತಿ ಸೂತ್ರದಲ್ಲಿ ಆಧುನಿಕ ಕಾಲದಲ್ಲಿ ಮಾತ್ರವೇ ದೊರಕಬಹುದು ಎಂದು ಭಾವಿಸಬ ಹುದಾದ ಅಪೂರ್ವ ರತ್ನವೂ ಸುರಿಯಲ್ಪಟ್ಟು ದನ್ನು ವಾಚಕರು ಪರಾಂಬರಿಸಬೇಕು.

ತೀರ್ಥಹಳ್ಳಿ ಪೀಪಲ್ಸ ಬ್ಯಾಂಕಿನ ಶಿವಮೊಗೆ ಯಲ್ಲಿರುವ ಶಾಖಾ ಕಚೇರಿಯಲ್ಲಿ ಹೊಸದಾಗಿ ನೇಮಕ ಹೊಂದಿದ್ದ ಹೊಸ ನಗರದ ಕೇ. ವೀರಯ್ಯ ಎಂಬವನು ೧೩—೩—೪೭ ನೇ ದಿನ ತಮ್ಮ ಬ್ಯಾಂಕಿನಿಂದ ಶಿವಮುಗ್ಗಿ ಟ್ರೇಜರಿಗೆ ೧೧೦೮೭ ರೂಪಾಯಿಗಳ ಕ್ಯಾಶ ಆರ್ಡರ ಬರೆದು ಕೊಂಡು ಹೋಗಿದ್ದರು. ಅವರು ಆ ರೂಪಾಯಿ ಗಳನ್ನು ತೆಗೆದುಕೊಂಡು ಫರಾರಿಯಾಗಿದ್ದರಷ್ಟೇ. ಅವರನ್ನೀಗ ಹುಬ್ಬಳ್ಳಿಯ ಸಿಟಿ ಸಬ್ ಇನಸ್ಪೆಕ್ಟ ರರು ಹಿಡಿದಿರುತ್ತಾರೆ. ಎಂಟು ಸಾವಿರಕ್ಕಿಂತ ಹೆಚ್ಚು ಹಣವೂ ಸಿಕ್ಕಿದೆ.

ಚಂದಾದಾರರಿಗೆ ಸೂಚನೆ

ಮೂರು ತಿಂಗಳಿಗೆ ಅಥವಾ ಕಡಿಮೆ ಮುದ ತಿಗೆ ವ್ಹಿ. ಪಿ. ಕಳಿಸುವದಿಲ್ಲ. ಮುಂಗಡ ಹಣ ಕಳಿಸಬೇಕು. ಅಂಚೆಯ ಅವ್ಯವಸ್ಥೆಯಿಂದ ... ಪತ್ರಿಕೆ ... ಮುಗಿಯುವದೆಂಬದನ್ನು ನೀವೇ ನೆನಪಿಟ್ಟು ಹಣ ಕಳಿಸಬೇಕು. ಯೋಗ್ಯ ವೇಳೆಗೆ ಹಣ ಬರದಿದ್ದರೆ ಏನನ್ನು ತಿಳಿಸದೆ ಪತ್ರಿಕೆ ನಿಲ್ಲಿಸಲಾಗುವದು.

ವ್ಯವಸ್ಥಾಪಕ